# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮಾರ್ಚ್ 18, 2022

ಸಂಪುಟ : 48 ಸಂಚಿಕೆ : 307 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಮತ್ತೆ ಅಭಿಮಾನಿಗಳ ಹೃದಯ ತಟ್ಟಿದ ಅಪ್ಪು

## ಭಾವುಕರಾಗಿಯೇ ಜನ್ಮ ದಿನ ಆಚರಣೆ, ಸಿಹಿ ವಿತರಣೆ, ಜೇಮ್ಸ್ ವೀಕ್ಷಣೆ

### ಅಪ್ಪು...ಅಪ್ಪು...ಅಪ್ಪು...

ದಾವಣಗೆರೆ, ಮಾ.17- ಕನ್ನಡಿಗರ ಕಣ್ಮಣಿ ಪವರ್ ಸ್ಟಾರ್ ಡಾ. ಪುನೀತ್ ರಾಜಕುಮಾರ್ ಅವರ ಜನ್ಮದಿನ ಹಾಗೂ ಪುನೀತ್ ಅಭಿನಯದ ಜೇಮ್ಸ್ ಚಿತ್ರ ಬಿಡುಗಡೆಯಾದ ಹಿನ್ನೆಲೆಯಲ್ಲಿ ಗುರುವಾರ ನಗರದಲ್ಲಿ ಅಪ್ಪು ಅಭಿಮಾನ ಮತ್ತೊಮ್ಮೆ ಅನಾವರಣಗೊಂಡಿತು.

ಕೇವಲ ಸಾಮಾಜಿಕ ಜಾಲ ತಾಣಗಳಾದ ಫೇಸ್ ಬುಕ್, ವಾಟ್ಸಾಪ್‌ಗಳಲ್ಲಷ್ಟೇ ಅಲ್ಲ, ನಗರದ ವಿವಿಧೆಡೆ ಕೇಕ್ ಕತ್ತರಿಸಿ ಜನ್ಮ ದಿನ ಆಚರಿಸಲಾಯಿತು. ಬಹುದಿನಗಳಿಂದ ಕಾಯುತ್ತಿದ್ದ ಜೇಮ್ಸ್ ಚಿತ್ರ ವೀಕ್ಷಣೆಗೆ ಅಭಿಮಾನಿಗಳು ಚಿತ್ರಮಂದಿಗಳಿಗೆ ಲಗ್ಗೆ ಇಟ್ಟಿದ್ದರು.

ಚಿತ್ರ ಬಿಡುಗಡೆಯಾದ ಗೀತಾಂಜಲಿ, ವಸಂತ ಚಿತ್ರಮಂದಿರಗಳ ಆವರಣದಲ್ಲಿ ಚಿತ್ರ ಪ್ರದರ್ಶನಕ್ಕೂ ಮುನ್ನ ಪಟಾಕಿ ಸಿಡಿಸಿ ಸಂಭ್ರಮಿಸಿದರು. ವಸಂತ ಚಿತ್ರಮಂದಿರದಲ್ಲಿ ಬೆಳಿಗ್ಗೆಯೇ ನಡೆದ ಅಭಿಮಾನಿಗಳ ಶೋಗೆ ಚಿತ್ರಮಂದಿರ ಭರ್ತಿಯಾಗಿತ್ತು. ಉಳಿದಂತೆ ಎಲ್ಲಾ ಶೋಗಳ ಟಿಕೆಟ್‌ಗಳು ಮುಂಚಿತವಾಗಿಯೇ ಬಿಕರಿಯಾಗಿದ್ದವು. ಚಿತ್ರ ಆರಂಭಕ್ಕೂ ಮುನ್ನ ಅಭಿಮಾನಿಗಳ ಅಪ್ಪು..ಅಪ್ಪು..ಅಪ್ಪು.. ಎಂಬ ಘೋಷಣೆ ಮುಗಿಲು ಮುಟ್ಟಿತ್ತು. ಜೇಮ್ಸ್ ವೀಕ್ಷಿಸಿ ಕುಣಿದು ಕುಪ್ಪಳಿಸಿ, ಅಪ್ಪು ನೆನೆಪ ಅಭಿಮಾನಿಗಳು ಮತ್ತೆ ಮತ್ತೆ ಭಾವುಕರಾಗಿ, ಕಣ್ಣೀರು ಹಾಕುತ್ತಿದ್ದುದು ಸಾಮಾನ್ಯವಾಗಿತ್ತು.





### 'ಅಪ್ಪು ಉತ್ಸವ'

ದಾವಣಗೆರೆ, ಮಾ.17- ಅಖಿಲ ಕರ್ನಾಟಕ ಡಾ.ರಾಜ್ ಕುಮಾರ್ ಅಭಿಮಾನಿಗಳ ಸಂಘಗಳ ಒಕ್ಕೂಟ, ಅಖಿಲ ಕರ್ನಾಟಕ ಡಾ.ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ, ರಾಜರತ್ನ ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ಪುನಿತ್ ಜನ್ಮದಿನ ಹಾಗೂ ಅವರ ನಟನೆಯ ಜೇಮ್ಸ್ (2ನೇ ಪುಟಕ್ಕೆ)

## ಪುನೀತ್ ಕಂಚಿನ ಪ್ರತಿಮೆ ಅನಾವರಣ

### ಪುನೀತ್ ರಾಜ್ ಸೇವೆ ನೆನೆದ ಶಾಸಕ ಶಾಮನೂರು ಶಿವಶಂಕರಪ್ಪ

ದಾವಣಗೆರೆ, ಮಾ.17- ನಗರದ 38ನೇ ವಾರ್ಡ್ ಎಂಸಿಸಿ 'ಬಿ' ಬ್ಲಾಕ್ ಈಜುಕೊಳದ ಪಕ್ಕದಲ್ಲಿನ ಉದ್ಯಾನವನದಲ್ಲಿ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅವರ ಕಂಚಿನ ಪ್ರತಿಮೆಯನ್ನು ಶಾಸಕ ಶಾಮನೂರು ಶಿವಶಂಕರಪ್ಪ ಅನಾವರಣಗೊಳಿಸಿದರು.

ಪುನೀತ್ ರಾಜ್ ಕುಮಾರ್ ಮತ್ತು ಜಿ.ಎಸ್. ಮಂಜುನಾಥ್ ಅಭಿಮಾನಿಗಳ ಬಳಗದಿಂದ ಪ್ರತಿಮೆ ಅನಾವರಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾತನಾಡಿದ ಎಸ್ಸೆಸ್, ಚಿಕ್ಕ ವಯಸ್ಸಿನಲ್ಲಿ ಮಹೋನ್ನತ ಸಾಧನೆ ಮಾಡಿದ ಪುನೀತ್ ರಾಜ್ ಕುಮಾರ್, ಕೇವಲ ಕರ್ನಾಟಕ ರಾಜ್ಯವಲ್ಲದೆ ದೇಶ-ವಿದೇಶಗಳಲ್ಲೂ ಅಭಿಮಾನಿಗಳನ್ನು (2ನೇ ಪುಟಕ್ಕೆ)

# ಡಿಸಿ ಜನಸ್ಪಂದನೆಗೆ ಮತ್ತೆ ಚಾಲನೆ

## ವಂಶವೃಕ್ಷ ಅಕ್ರಮದಿಂದ ಚೆಕ್ ಡ್ಯಾಂ ದುರಸ್ತಿಯವರೆಗೆ ಅಹವಾಲುಗಳ ಸಲ್ಲಿಕೆ

ದಾವಣಗೆರೆ, ಮಾ.17 – ಕೊರೊನಾ ಕಾರಣದಿಂದ ಸ್ಥಗಿತಗೊಳಿಸಲಾಗಿದ್ದ ಜಿಲ್ಲಾಧಿಕಾರಿಗಳ ಜನಸ್ಪಂದನ ಕಾರ್ಯಕ್ರಮವನ್ನು ಗುರುವಾರದಿಂದ ಪುನರಾರಂಭಿಸಲಾಗಿದ್ದು, ಜಿಲ್ಲೆಯ ಹತ್ತು, ಹಲವು ಸಮಸ್ಯೆಗಳ ಬಗ್ಗೆ ಜನರು ಮನವಿ ಸಲ್ಲಿಸಿದ್ದಾರೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಕಚೇರಿಯಲ್ಲಿ ಜನಸ್ಪಂದನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಎರಡು ವಾರಕ್ಕೊಮ್ಮೆ ಜನಸ್ಪಂದನ ಕಾರ್ಯಕ್ರಮ ನಡೆಯಲಿದೆ.

ಜಗಳೂರು ತಾಲ್ಲೂಕಿನ ಗಡಿ ಭಾಗದ ಚಿಕ್ಕಮಂಗನಹೊಳೆ ಗ್ರಾಮಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸಿ, ಇಲ್ಲಿನ ಚೆಕ್ ಡ್ಯಾಂ ದುರಸ್ತಿ ಮಾಡಬೇಕು, ಕರೆಕಟ್ಟೆ ಗ್ರಾಮದಲ್ಲಿ ಭತ್ತದ ಅಂಗಡಿ ಮಾಲೀಕನಿಂದ ವಂಚಿತ ವ್ಯಕ್ತಿಗೆ ಹಣ ಕೊಡಿಸಬೇಕು, ಚನ್ನಗಿರಿ ತಾಲ್ಲೂಕಿನ ಸೋಮಲಾಪುರ ಗ್ರಾಮಕ್ಕೆ ಬಸ್ ಸೌಲಭ್ಯ, ನಗರ ಸಮೀಪದ ಶಿರಮಗೊಂಡನಹಳ್ಳಿಯ ರಸ್ತೆ - ಪಾರ್ಕ್ ದುರಸ್ತಿ, ಹೂವಿನಮಡುವಿನ ಚೌಡೇಶ್ವರಿ ದೇವಸ್ಥಾನದ ಜಾಗ ಒತ್ತುವರಿ ತೆರವು ಸೇರಿದಂತೆ, ಹಲವಾರು ಮನವಿಗಳು ಸಲ್ಲಿಕೆಯಾದವು.



ಸಾಮಾಜಿಕ ಕಾರ್ಯಕರ್ತ ಮಲ್ಲಿಕಾರ್ಜುನ ಇಂಗಳೇಶ್ವರ ಅವರು ಅರ್ಜಿ ಸಲ್ಲಿಸಿ, ಆನಗೋಡಿನ ಉಪ ತಹಶೀಲ್ದಾರ್, ಹೊನ್ನೂರು ಹಾಗೂ ಕುರ್ಕಿ ಗ್ರಾಮ ಲೆಕ್ಕಾಧಿಕಾರಿಗಳು ಅಕ್ರಮವಾಗಿ ನಕಲಿ ವಂಶವೃಕ್ಷ ನೀಡಿದ್ದಾರೆ. ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಿದರೆ, ಮಾಹಿತಿಯನ್ನು ಕೊಡುತ್ತಿಲ್ಲ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಮನವಿ ಮಾಡಿಕೊಂಡರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ವಿಜಯ್ ಕುಮಾರ್ ಅವರು ಜಿಲ್ಲಾಡಳಿತ ಭವನದಲ್ಲಿ ಶಿಶುಪಾಲನಾ ಕೇಂದ್ರ ತೆರೆಯಲು ಕೊಠಡಿ ಒದಗಿಸುವಂತೆ ಮನವಿ ಮಾಡಿದರು. ತಕ್ಷಣ ಸ್ಪಂದಿಸಿದ ಜಿಲ್ಲಾಧಿಕಾರಿಗಳು, ಶೀಘ್ರ ಕೊಠಡಿ ಒದಗಿಸಲಾಗುವುದು ಎಂದರು.

ಸಭೆಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿ, ಕೊರೊನಾ ಸಾವಿನ ಪರಿಹಾರ, ಬಸ್ ವ್ಯವಸ್ಥೆ, ಪಹಣಿ, ಜಾತಿ ಪ್ರಮಾಣ ಪತ್ರ ಒದಗಿಸುವುದು ಸೇರಿದಂತೆ, ಸಾರ್ವಜ (2ನೇ ಪುಟಕ್ಕೆ)

# ತೀರ್ಪಿನ ನಂತರವೂ ಪ್ರತಿಭಟನೆ

## ಕ್ರಮಕ್ಕೆ ವಿಧಾನ ಮಂಡಲದ ಉಭಯ ಸದನಗಳಲ್ಲಿ ಒತ್ತಾಯ

ಬೆಂಗಳೂರು, ಮಾ. 17 - ಹಿಜಾಬ್ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್ ತೀರ್ಪು ಬಂದ ನಂತರವೂ ಪ್ರತಿಭಟನೆ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು ಎಂಬ ಒತ್ತಾಯ ವಿಧಾನ ಮಂಡಲದ ಉಭಯ ಸದನಗಳಲ್ಲಿ ಕೇಳಿಬಂದಿತು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ರಘುಪತಿ ಭಟ್, ಹಿಜಾಬ್ ತೆಗೆದಿರಿಸಿ ತರಗತಿಗಳಿಗೆ ತೆರಳಲು ಸಿದ್ಧರಿರುವ ವಿದ್ಯಾರ್ಥಿನಿಯರಿಗೆ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು ಎಂದು ಒತ್ತಾಯಿಸಿದರು.

ರಘುಪತಿ ಭಟ್ ಅವರನ್ನು ಸಮರ್ಥಿಸಿ ಮಾತನಾಡಿದ ಜಗದೀಶ್ ಶೆಟ್ಟರ್, ಕೋರ್ಟ್ ತೀರ್ಪಿನ ವಿರುದ್ಧ ಪ್ರತಿಭಟನೆ ನಡೆಸುವುದು, ಬಂದ್ ಮಾಡುವುದು ಸರಿಯಲ್ಲ ಎಂದರು.

ಪ್ರತಿಭಟನಾಕಾರರ ಸಮರ್ಥನೆಗೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಕೋರ್ಟ್ ತೀರ್ಪಿನ ಬಗ್ಗೆ ಅಸಮಾಧಾನ ಇದ್ದರೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಶಾಂತಿಯುತ ಬಂದ್, ಪ್ರತಿಭಟನೆ ಮಾಡುವುದು ಸಂವಿಧಾನಾತ್ಮಕ ಹಕ್ಕಾಗಿದೆ. ಇದನ್ನು ಸರ್ಕಾರ ಹೇಗೆ ತಡೆಯಲು ಸಾಧ್ಯ, ಬಂದ್, ಪ್ರತಿಭಟನೆ ಮಾಡಲು ಬಿಡಿ ಎಂದರು.

ಉಪನಾಯಕ ಯು.ಟಿ.ಖಾದರ್ ಮಾತನಾಡಿ, ನ್ಯಾಯಾಲಯಕ್ಕೆ ಅಗೌರವ ತೋರಿಸಬೇಕು ಎಂಬ ಕಾರಣಕ್ಕೆ ಬಂದ್‌ಗೆ ಕರೆಕೊಟ್ಟಿಲ್ಲ. ಅಸಮಾಧಾನದ ಕಾರಣಕ್ಕೆ ಧಾರ್ಮಿಕ ಮುಖಂಡರು (5ನೇ ಪುಟಕ್ಕೆ)

# ಹಿಜಾಬ್ ಕುರಿತ ಬಂದ್ ಕರೆ ವಿಫಲ

ಬೆಂಗಳೂರು, ಮಾ. 17 - ಹಿಜಾಬ್ ವಿವಾದ ಕುರಿತಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರತಿಭಟಿಸಿ, ಕೆಲವು ಅಲ್ಪಸಂಖ್ಯಾತ ಸಂಘಟನೆಗಳು ಇಂದು ಕರೆದಿದ್ದ ರಾಜ್ಯ ಬಂದ್ ವಿಫಲವಾಗಿದೆ.

ಶಾಲಾ-ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಬೇಕೆಂದು ಒತ್ತಾಯಿಸಿ, ಕೆಲವು ಸಂಘಟನೆಗಳು ಹಾಗೂ ಧರ್ಮ ಗುರುಗಳು ಬಂದ್‌ಗೆ ಕರೆ ನೀಡಿದ್ದರು.

ಅಲ್ಪಸಂಖ್ಯಾತರೇ ಹೆಚ್ಚಿರುವ ಪ್ರದೇಶಗಳಲ್ಲಿ ಸಂಪೂರ್ಣ ಬಂದ್ ಆಗಿದ್ದು, ಯಾವುದೇ ರೀತಿಯ ಸಣ್ಣ ಅಹಿತಕರ ಘಟನೆಗಳೂ ನಡೆದಿಲ್ಲ.

ಉಳಿದಂತೆ ಬಂದ್ ಕರೆಗೆ ಎಲ್ಲಿಯೂ ಬೆಂಬಲ ವ್ಯಕ್ತವಾಗಲಿಲ್ಲ, (2ನೇ ಪುಟಕ್ಕೆ)

# ಗುಜರಾತ್ ಶಾಲಾ ಪಠ್ಯದಲ್ಲಿ ಭಗವದ್ ಗೀತೆ ಸೇರ್ಪಡೆ

ಗಾಂಧಿನಗರ, ಮಾ. 17 – ಮುಂದಿನ ಶೈಕ್ಷಣಿಕ ವರ್ಷವಾದ 2022-23ರಲ್ಲಿ ಆರರಿಂದ 12ನೇ ತರಗತಿಯವರೆಗಿನ ಶಾಲಾ ಪಠ್ಯದಲ್ಲಿ ಭಗವದ್ ಗೀತೆ ಸೇರಿಸಲಾಗುವುದು ಎಂದು ಗುಜರಾತ್ ಸರ್ಕಾರ ತಿಳಿಸಿದೆ.

ವಿಧಾನಸಭೆಯಲ್ಲಿ ಶಿಕ್ಷಣ ಸಚಿವ ಜಿತು ವಾಘಾನಿ ಈ ಘೋಷಣೆ ಮಾಡಿದ್ದಾರೆ.

ಭಗವದ್ ಗೀತೆಯಲ್ಲಿರುವ ಮೌಲ್ಯಗಳು ಹಾಗೂ ಸಿದ್ಧಾಂತಗಳನ್ನು ನೂತನ ಶಿಕ್ಷಣ ನೀತಿಯ ಅನ್ವಯ ಪಠ್ಯದಲ್ಲಿ ಸೇರ್ಪಡೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

ಭಗವದ್ ಗೀತೆಯಲ್ಲಿರುವ ಮೌಲ್ಯಗಳು ಹಾಗೂ ಸಿದ್ಧಾಂತಗಳನ್ನು ಎಲ್ಲಾ ನಂಬಿಕೆಯವರು ಒಪ್ಪಿಕೊಂಡಿದ್ದಾರೆ. ಹೀಗಾಗಿ ಭಗವದ್ ಗೀತೆಯನ್ನು ಪಠ್ಯದಲ್ಲಿ ಸೇರ್ಪಡೆ ಮಾಡಲಾಗುವುದು ಎಂದವರು ಹೇಳಿದ್ದಾರೆ.

# ಹರಿಹರ : ಹಬ್ಬದ ಪೂರ್ವಭಾವಿ ಸಿದ್ಧತೆಯಲ್ಲಿ ವೈಫಲ್ಯ





ಹರಿಹರ, ಮಾ. 17 - ನಗರದಲ್ಲಿ ಮಾ.22ರಿಂದ ಮಾ.26ರವರೆಗೆ ಗ್ರಾಮದೇವತೆ ಉತ್ಸವ ಆಯೋಜಿಸಲಾಗಿದೆ. ಲಕ್ಷಾಂತರ ಹೊರಗಿನ ಜನರು ನಗರಕ್ಕೆ ಆಗಮಿಸುವ ಈ ಹಬ್ಬಕ್ಕೆ ಪೂರ್ವಭಾವಿಯಾಗಿ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಂಪೂರ್ಣ ವಿಫಲರಾಗಿರುವ ದೂರುಗಳು ಕೇಳಿ ಬರುತ್ತಿವೆ.

ಕೋವಿಡ್‌ನಿಂದಾಗಿ ಪರಿತಪಿಸಿದ ಜನತೆಗೆ ನೈರ್ಮಲ್ಯ, ಆರೋಗ್ಯದ ಬಗ್ಗೆ ಎಷ್ಟು ಎಚ್ಚರಿಕೆ ವಹಿಸಬೇಕೆಂಬ ಅರಿವು ಮೂಡಿದೆ. ಆದರೆ, ಆ ಎಚ್ಚರಿಕೆಯನ್ನು ತಾಲ್ಲೂಕು ಆಡಳಿತ,

### ನೀರು, ನೈರ್ಮಲ್ಯದ ವಿಷಯದಲ್ಲಿ ನಿರ್ಲಕ್ಷ್ಯದ ಆರೋಪ

ನಗರಸಭೆ ಅಥವಾ ಜನಪ್ರತಿನಿಧಿಗಳು ಕೈಗೊಂಡಿಲ್ಲ ಎಂಬ ಆರೋಪ ಜನರಿಂದ ಕೇಳಿ ಬರುತ್ತಿದೆ.

ಹಬ್ಬದ ಹಿನ್ನೆಲೆಯಲ್ಲಿ ನೀರು ಸರಬರಾಜು, ಚರಂಡಿಗಳ ಸ್ವಚ್ಛತೆ, ನೈರ್ಮಲ್ಯದ ಸುಧಾರಣೆಯಾಗಬೇಕಿತ್ತು. ಆದರೆ, ನೀರು ಸರಬರಾಜು ಮುಂಚೆಗೆ ಹೋಲಿಸಿದರೆ ಸರಬರಾಜು ಪ್ರಮಾಣ ಕಡಿಮೆಯಾಗಿದೆ.

ಜಲಸಿರಿ ಯೋಜನೆ ಜಾರಿಯಾಗಿರುವ ನಗರದಲ್ಲಿ ಹಬ್ಬಕ್ಕೆ ನೀರಿನ ಕೊರತೆ ಎದುರಾಗಿದೆ. ಬೀಗರು, ಬಿಜ್ಜರು, ಬಂಧುಗಳು ಹೊರಗಿನಿಂದ ಆಗಮಿಸುತ್ತಾರೆಂದು ಸ್ಥಳೀಯರು ಮನೆಗಳನ್ನು ಸ್ವಚ್ಛ ಮಾಡುವ, ಸುಣ್ಣ, ಬಣ್ಣ ಬಳಿಸುವುದು, ಬಟ್ಟೆ, ಬರೆಗಳನ್ನು ತೊಳೆಯುವುದು ಮಾಡುತ್ತಾರೆ.

ಈ ಸಂದರ್ಭದಲ್ಲಿ ಹೆಚ್ಚಿನ ನೀರಿನ ಅಗತ್ಯ ಇರುತ್ತದೆ. 24 ಗಂಟೆ ನೀರು ಸರಬರಾಜು ಮಾಡುತ್ತೇವೆ ಎಂದು ಹೇಳುವ ನಗರಸಭೆಯ ಅಧಿಕಾರಿಗಳು (2ನೇ ಪುಟಕ್ಕೆ)


Repco Home Finance
We Value Your Dream
ರೆಪ್ಕೋ ಹೋಮ್ ಫೈನಾನ್ಸ್ ಲಿಮಿಟೆಡ್
CIN No. L65922TN2000TLC044655
ಫೋ : 08192-232836, ಮೊ : 9342440967, 9901009929, 7676823234, 9036368349
ಗೃಹ ಸಾಲ ಮೇಳ
ಸರಳ ವಿಧಾನದಲ್ಲಿ ಸಾಲ ಮಂಜೂರಾತಿ
ದಿ : 18-03-2022 ಶುಕ್ರವಾರ ಮತ್ತು ದಿ: 19-03-2022 ಶನಿವಾರ
ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ
ಸ್ಥಳ : ನಂ. 78-7ಎ, ಮೊದಲನೇ ಮಹಡಿ, ನೀಲ್‌ಕಮಲ್ ಫರ್ನಿಚರ್ ಶೋ ರೂಂ ಪಕ್ಕ ರೈತರಬೀದಿ, ಪಿ.ಜೆ. ಬಡಾವಣೆ, ಎ.ವಿ.ಕೆ. ಕಾಲೇಜ್ ರಸ್ತೆ, ದಾವಣಗೆರೆ - 577 002.
ಈ ಕೆಳಕಂಡ ಸಾಲಗಳಿಗೆ ಮಂಜೂರಾತಿ ನೀಡಲಾಗುವುದು :
★ ಖಾಲಿ ನಿವೇಶನ /ಮನೆ/ಫ್ಲಾಟ್ ಖರೀದಿಸಲು
★ ಮನೆ / ವಾಣಿಜ್ಯ ಕಟ್ಟಡ ಕಟ್ಟಲು
★ ಮನೆ ನವೀಕರಣಕ್ಕೆ
★ ಹೆಚ್ಚಿನ ಬಡ್ಡಿದರದ ಅಸ್ತಿತ್ವದಲ್ಲಿರುವ ಸಾಲವನ್ನು ಕಡಿಮೆ ಬಡ್ಡಿಗೆ ವರ್ಗಾಯಿಸಲು ಹಾಗೂ ಹೆಚ್ಚುವರಿ ಸಾಲ ಪಡೆಯಲು
★ ಅಡಮಾನ ಸಾಲ
ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿ
ಗೃಹ ಸಾಲ 7.15%★ ರಿಂದ ಪ್ರಾರಂಭ
ಆಡಳಿತಾತ್ಮಕ ಶುಲ್ಕದಲ್ಲಿ ಸಂಪೂರ್ಣ ಮನ್ನಾ
ಸಂಸ್ಕರಣ ಶುಲ್ಕದಲ್ಲಿ ಶೇ. 0.25 % ವಿಶೇಷ ರಿಯಾಯಿತಿ
★ಷರತ್ತುಗಳು ಅನ್ವಯಿಸುತ್ತವೆ
ಆದಾಯ ಪತ್ರ ಹಾಗೂ ಆಸ್ತಿಯ ವಿವರಗಳೊಂದಿಗೆ ಭೇಟಿ ನೀಡಿ.


# ಇಂದು ಕಾಮದಹನ, ನಾಳೆ ಹೋಳಿ

ದಾವಣಗೆರೆ, ಮಾ.17- ನಗರದಲ್ಲಿ ಇಂದು ಶುಕ್ರವಾರ ಕಾಮದಹನ ಹಾಗೂ 19ರ ಶನಿವಾರ ಹೋಳಿ ಹಬ್ಬ ಆಚರಣೆ ಇರುವುದಾಗಿ ಪೊಲೀಸ್ ಇಲಾಖೆ ತಿಳಿಸಿದೆ. ಹೋಳಿ ಹಬ್ಬದ ಪ್ರಯುಕ್ತ ಮಾ.18ರ ಬೆಳಿಗ್ಗೆ 6 ಗಂಟೆಯಿಂದ 19ರ ಸಂಜೆ 5 ಗಂಟೆವರೆಗೆ ಜಿಲ್ಲಾದ್ಯಂತ ಮದ್ಯ ಮಾರಾಟ ಹಾಗೂ ಸರಬರಾಜು ನಿಷೇಧಿಸಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶಿಸಿದ್ದಾರೆ.

# ಉಕ್ರೇನ್ ಚಿತ್ರಮಂದಿರದ ಮೇಲೆ ರಷ್ಯಾ ದಾಳಿ

### ಅವಶೇಷಗಳಡಿ ನೂರಾರು ಜನ

ಕೀವ್, ಮಾ. 17 – ಯುದ್ಧದ ಹಿನ್ನೆಲೆಯಲ್ಲಿ ನೂರಾರು ಜನರು ಅಡಗಿಕೊಂಡಿದ್ದ ಉಕ್ರೇನ್ ಚಿತ್ರಮಂದಿರದ ಮೇಲೆ ರಷ್ಯಾ ವೈಮಾನಿಕ ದಾಳಿ ನಡೆಸಿದೆ. ಚಿತ್ರಮಂದಿರ ಕುಸಿದು ನೂರಾರು ಜನರು ಅವಶೇಷಗಳಡಿ ಸಿಲುಕಿದ್ದಾರೆ ಎಂದು ಅಧಿಕಾರಿಗಳು (5ನೇ ಪುಟಕ್ಕೆ)

# ದಕ್ಷಿಣ ಕೊರಿಯಾ : ಕೊರೊನಾ ಸೋಂಕು ದಾಖಲೆ, ಸಾವು ಇಳಿಕೆ

### ಓಮಿಕ್ರಾನ್ ಹರಡಿದರೂ ಸಾವಿನ ಸಂಖ್ಯೆ ಕಡಿಮೆ, ನಿರ್ಬಂಧಗಳನ್ನು ಸಡಿಲಿಸಲು ಸರ್ಕಾರದ ಪರಿಶೀಲನೆ

ಸಿಯೋಲ್, ಮಾ. 17 – ದಕ್ಷಿಣ ಕೊರಿಯಾದಲ್ಲಿ ಒಂದೇ ದಿನ 6 ಲಕ್ಷ ಕೊರೊನಾ ಸೋಂ ಕಿತರು ಪತ್ತೆಯಾಗಿದ್ದಾರೆ. ವಿಶ್ವದಲ್ಲಿ ದೇಶ ಒಂದರಲ್ಲಿ ಈ ಪ್ರಮಾಣದ ಸೋಂಕಿತರು ಪತ್ತೆಯಾಗಿರು ವುದು ಇದೇ ಮೊದಲು. ಆದರೆ, ದೇಶದಲ್ಲಿ ಕೊರೊನಾ ನಿರ್ಬಂಧಗಳನ್ನು ಹೆಚ್ಚಿಸುವ ಬದಲು ಸಡಿಲಿಸಲು ಪರಿಶೀಲನೆ ನಡೆದಿದೆ. ಏಕೆಂದರೆ, ಕೊರೊನಾ ಸೋಂಕಿತರು ಹೆಚ್ಚಾಗಿದ್ದರೂ ಆಸ್ಪತ್ರೆಗೆ ದಾಖಲಾಗುವವರು ಹಾಗೂ ಸಾವನ್ನಪ್ಪುವವರ ಸಂಖ್ಯೆ ತೀರಾ ಕಡಿಮೆ ಇದೆ. ಜಗತ್ತಿನ ಬೇರೆ ದೇಶಗಳಲ್ಲಿ ಈ ಪ್ರಮಾಣದ ಸೋಂಕು ಬಂದಿದ್ದರೆ ಪರಿಸ್ಥಿತಿ ಕೈ ಮೀರಿ ಹೋಗುವ ಸಾಧ್ಯತೆ ಇತ್ತು. ಆದರೆ, ದಕ್ಷಿಣ ಕೊರಿಯಾದಲ್ಲಿ ಪರಿಸ್ಥಿತಿ ಸಂಕೀರ್ಣವಾಗಿದೆ.

ದೇಶದಲ್ಲಿ ವ್ಯಾಪಕವಾದ ಟೆಸ್ಟಿಂಗ್ ನಡೆಯುತ್ತಿರುವ ಕಾರಣ ಸೋಂಕಿತರು ಹೆಚ್ಚಾಗಿ ಪತ್ತೆಯಾಗುತ್ತಿದ್ದಾರೆ. ಆರಂಭ ದಲ್ಲೇ ಸೋಂಕಿತರನ್ನು ಪತ್ತೆ ಮಾಡಿ ನಿಗಾ ವಹಿಸುತ್ತಿರುವುದರಿಂದ ಆಸ್ಪತ್ರೆಗೆ ದಾಖಲಾಗುವುದು ಹಾಗೂ ಸಾವುಗಳನ್ನು ನಿಯಂತ್ರಿಸುವುದು ಸಾಧ್ಯವಾಗುತ್ತಿದೆ. ದೇಶದಲ್ಲಿ ಶೇ.88ರಷ್ಟು ಜನರು ಲಸಿಕೆ ಪಡೆದಿದ್ದಾರೆ. ವಿಶ್ವದಲ್ಲೇ ಅತಿ ಹೆಚ್ಚು ಬೂಸ್ಟರ್ ಲಸಿಕೆ ನೀಡಿದ ದೇಶಗಳಲ್ಲಿ ದಕ್ಷಿಣ ಕೊರಿಯಾ (5ಪುಟಕ್ಕೆ)

# ಹೆರಿಗೆಯಾಗಿ ಎರಡು ಗಂಟೆಯಲ್ಲಿ ಮಗು ನಾಪತ್ತೆ !

ದಾವಣಗೆರೆ, ಮಾ.17- ಹೆರಿಗೆಯಾದ ಎರಡು ಗಂಟೆಯಲ್ಲಿ ಗಂಡು ಮಗು ನಾಪತ್ತೆಯಾಗಿರುವ ಘಟನೆ ನಗರದ ಚಾಮರಾಜಪೇಟೆಯಲ್ಲಿರುವ ಹಳೆ ಸರ್ಕಾರಿ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನಡೆದಿದೆ.

ಗಂಡು ಶಿಶುವನ್ನು ಕಳೆದುಕೊಂಡ ಪಾಲಕರು ಆಸ್ಪತ್ರೆಯಲ್ಲಿ ಸಿಬ್ಬಂದಿಯೊಂದಿಗೆ ಆಕ್ರೋಶಗೊಂಡು ವಾಗ್ವಾದ ನಡೆಸಿದ್ದಾರೆ.

ಹರಪನಹಳ್ಳಿ ಪಟ್ಟಣದ ಉಮ್ಮೇಸಲ್ಮಾ ಹಾಗೂ ಇಸ್ಮಾಯಿಲ್ ಜಬೀವುಲ್ಲಾ ದಂಪತಿಗೆ ಸೇರಿದ ಗಂಡು ಮಗು ನಾಪತ್ತೆಯಾಗಿದೆ. ಮೊದಲನೇ ಹೆರಿಗೆಗೆ ಬಂದಿದ್ದ ಉಮ್ಮೇಸಲ್ಮಾ (22) ಗಂಡು ಮಗುವಿಗೆ ಸಂಜೆ 6ಕ್ಕೆ ಜನ್ಮ ನೀಡಿದ್ದರು. ಹೆರಿಗೆ ಬಳಿಕ ಸಂಬಂಧಿಕರ ಕೈಗೆ ಮಗು ಕೊಡುವುದಾಗಿ ಆಸ್ಪತ್ರೆ ಸಿಬ್ಬಂದಿ ಹೇಳಿದ್ದರು. ಕೆಲ ಕಾಲ ಮಗುವನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಿದ್ದರು. ಹೆರಿಗೆ ಬಳಿಕ ತಂದೆ ಇಸ್ಮಾಯಿಲ್ ಜಬೀವುಲ್ಲಾನಿಗೆ ಹಾಗೂ ಆತನ ಸಂಬಂಧಿಗೆ ಮಗುವಿಗೆ ಬಟ್ಟೆ ತರಲು ಆಸ್ಪತ್ರೆ ಸಿಬ್ಬಂದಿ ಹೇಳಿದ್ದರೆನ್ನಲಾಗಿದೆ. ತಂದೆ ಬಟ್ಟೆ ತರುವಷ್ಟರಲ್ಲಿ ಮಕ್ಕಳ ತೀವ್ರ ನಿಗಾ ಘಟಕದಲ್ಲಿ ಇದ್ದ ಮಗು ನಾಪತ್ತೆಯಾಗಿದೆ ಎಂದು ಹೇಳಲಾಗಿದೆ.

ಬುರ್ಖಾ ಹಾಕಿಕೊಂಡ ಮಹಿಳೆಯೊಬ್ಬಳಿಗೆ ಇವರೂ ಕೂಡ ಅವರ ಕಡೆಯವರೇ ಎಂದು ತಿಳಿದು ಮಗುವನ್ನು ಕೊಟ್ಟಿರುವುದಾಗಿ ಆಸ್ಪತ್ರೆಯ ಸಿಬ್ಬಂದಿಗಳು ಮಾಹಿತಿ ನೀಡಿದ್ದಾರೆ.

ಪೋಷಕರು ಮಗು ಬೇಕೆಂದು ಪಟ್ಟು ಹಿಡಿದಿದ್ದರು. ಆಸ್ಪತ್ರೆಯ ಸಿಸಿ ಕ್ಯಾಮರಾಗಳು ಕೆಲಸ ಮಾಡದೆ ಇರುವುದರಿಂದ ಮತ್ತಷ್ಟು ಆಕ್ರೋಶಗೊಂಡ ಪೋಷಕರು ಮಗು ಸಿಗುವ ತನಕ ಹೋರಾಟ ನಡೆಸಲು ಹಾಗೂ ಆಸ್ಪತ್ರೆ ಹಿರಿಯ ವೈದ್ಯರು ಸ್ಥಳಕ್ಕೆ ಬಾರದೇ ಇರುವುದರಿಂದ ಮಗುವಿನ ಪೋಷಕರು ಆಸ್ಪತ್ರೆ ಸಿಬ್ಬಂದಿ ವಿರುದ್ಧ ಪೊಲೀಸರಿಗೆ ದೂರು ನೀಡಲು ನಿರ್ಧರಿಸಿದ್ದರು.

ಆಸ್ಪತ್ರೆಯ ಸಿಬ್ಬಂದಿ ಹಾಗೂ ವೈದ್ಯರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಮಗುವಿನ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಮಗುವನ್ನು ಮರಳಿ ನಮ್ಮ ಮಡಿಲಿಗೆ ಹಾಕಿ ಎಂದು ಗೋಗರೆದರು. ಈ ಸಂಬಂಧ ಬಸವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಆನೆಕೊಂಡದ ಮಟ್ಟಿಕಲ್ಲು ವಾಸಿ ಹೆಮ್ಮನಬೇತೂರು ಜಡಿಯಪ್ಪ (ಚನ್ನಬಸಪ್ಪ) ಅವರ ಮಗ ಜೆ. ಬಸವರಾಜಪ್ಪ ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 11.03.2022ನೇ ಶುಕ್ರವಾರ ಬೆಳಗಿನ ಜಾವ 3.15ಕ್ಕೆ ನನ್ನ ಧರ್ಮಪತ್ನಿ ಶ್ರೀಮತಿ ಯಶೋಧಮ್ಮನವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 19.03.2022ನೇ ಶನಿವಾರ ಬೆಳಿಗ್ಗೆ 10.30ಕ್ಕೆ ಮೃತರ ಸಹೋದರ ಜ್ಞಾನಮೂರ್ತಿ ಇವರ ಸ್ವಗೃಹ ಬೇತೂರು ರಸ್ತೆ, ಆನೆಕೊಂಡ, (ಪೆಟ್ರೋಲ್ ಬಂಕ್ ಪಕ್ಕ) ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಶ್ರೀ ಜೆ. ಬಸವರಾಜಪ್ಪ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಹನಸಿ ವಂಶಸ್ಥರು, ಹೆಮ್ಮನಬೇತೂರು

ಮೃತರ ತಾಯಿ : ಶ್ರೀಮತಿ ಗೌರಮ್ಮ,

ಮೃತರ ಸಹೋದರ : ಶ್ರೀ ಜ್ಞಾನಮೂರ್ತಿ ಮತ್ತು ಮಕ್ಕಳು ಸಣ್ಣ ಅಣಜಿ ವಂಶಸ್ಥರು, ಆನೆಕೊಂಡ ಹಾಗೂ ಬಂಧು-ಮಿತ್ರರು.

ಮೊಬೈಲ್ : 94827 96960, 96112 45601

ವಿ.ಸೂ : ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.



ದೊಡ್ಡಬಾತಿಯ ಶ್ರೀ ರೇವಣಸಿದ್ದೇಶ್ವರ ಸ್ವಾಮಿ ರಥೋತ್ಸವ

ದಾವಣಗೆರೆ ಸಮೀಪದ ದೊಡ್ಡಬಾತಿಯ ಶ್ರೀ ರೇವಣ ಸಿದ್ದೇಶ್ವರ ಸ್ವಾಮಿಯ ರಥೋತ್ಸವವು ಗುರುವಾರ ರಾತ್ರಿ ಇಚ್ಛಾ ಮುಹೂರ್ತದಲ್ಲಿ ವಿಜೃಂಭಣೆಯಿಂದ ನೆರವೇರಿತು.

# ಸೇವಾದಳವು ಯುವಕರಲ್ಲಿ ದೇಶಭಕ್ತಿ, ಭಾವೈಕ್ಯತೆ ಮೂಡಿಸುತ್ತದೆ

ಜಗಳೂರು, ಮಾ.17 - ವಿದ್ಯಾರ್ಥಿಗಳಿಗೆ ಮತ್ತು ಯುವಕರಿಗೆ ಸೇವಾದಳ ಶಿಕ್ಷಣ ಅಗತ್ಯವಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಪಿ ಠಾಕೂರ್ ತಿಳಿಸಿದರು.

ಜಗಳೂರು ಪಟ್ಟಣದ ಎನ್.ಎಂ.ಕೆ. ಪ್ರೌಢ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕು ಮಟ್ಟದ ಸೇವಾದಳ ಶಿಕ್ಷಕರ ಮತ್ತು ಪ್ರಾಥಮಿಕ ಮತ್ತು ಪ್ರೌಢಶಾಲಾ ದೈಹಿಕ ಶಿಕ್ಷಕರ ಒಂದು ದಿನದ ಕೊರೊನಾ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಭಾರತ ಸೇವಾದಳವು ಸ್ವಾತಂತ್ರ್ಯದ ಪೂರ್ವದಿಂದಲೂ ಯುವಕರಿಗೆ ದೇಶಭಕ್ತಿ, ಭಾವೈಕ್ಯತೆ, ಶಿಸ್ತು, ಸೇವಾ ಮನೋಭಾವನೆಯನ್ನು ಮೂಡಿಸುವ ಕಾರ್ಯವನ್ನು ಮಾಡುತ್ತಿದೆ. ಸ್ವಾತಂತ್ರ್ಯದ ನಂತರ ವಿದ್ಯಾರ್ಥಿಗಳಿಗೆ ಶಾರೀರಿಕ, ಯೋಗ, ನೈತಿಕ ಶಿಕ್ಷಣವನ್ನು ನೀಡುತ್ತಿದ್ದು, ಕೊರೊನಾ ಸಂದರ್ಭದಲ್ಲೂ ಕೂಡ ಸೇವಾದಳ ಉತ್ತಮ ಸೇವೆಯನ್ನು ಸಲ್ಲಿಸಿದೆ. ಜಿಲ್ಲೆಯಲ್ಲಿನ ಎಲ್ಲ ದೈಹಿಕ ಶಿಕ್ಷಕರಿಗೆ ಭಾರತ ಸೇವಾದಳವು ಮಾಸ್ಕ್, ಸ್ಯಾನಿಟೈಸರ್ ಉಚಿತವಾಗಿ ನೀಡಿದೆ. ಶಿಕ್ಷಕರು ಮಕ್ಕಳಿಗೆ ಸೇವಾದಳ ಶಿಕ್ಷಣವನ್ನು ಶಾಲೆಯಲ್ಲಿ ಕಲಿಸಬೇಕು ಎಂದು ತಿಳಿಸಿದರು.



ವಲಯ ಸಂಘಟಕ ಎಂ. ಅಣ್ಣಯ್ಯ ಮಾತನಾಡಿ, ಕಳೆದ 2 ವರ್ಷಗಳಿಂದ ಕೊರೊನಾದಿಂದಾಗಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ಶಿಬಿರ ಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ ಎಂದು ಮಾಹಿತಿ ನೀಡಿದರು. ಕಾರ್ಯಕ್ರಮ ದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣಾಧಿಕಾರಿ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು, ಬಿ.ಎಸ್. ಶಿವಕುಮಾರ್, ದೈಹಿಕ ಶಿಕ್ಷಣ ಅಧಿಕಾರಿ ಸುರೇಶ್ ರೆಡ್ಡಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಪಿ. ಠಾಕೂರ್

ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಕರಿಬಸಪ್ಪ ಸ್ವಾಗತಿಸಿದರು, ಸಿ.ಪಿ.ಎಸ್ ಶಿವಪ್ಪ ನಿರೂಪಿಸಿದರು, ಮುಖ್ಯಶಿಕ್ಷಕಿ ಗೀತಾ ವಂದಿಸಿದರು.

# ಹಳೇಬಾತಿ ಗ್ರಾಮದ ಮುಖ್ಯ ವೃತ್ತಕ್ಕೆ ನಾಮಕರಣ



ದಾವಣಗೆರೆ, ಮಾ.17 - ದಿವಂಗತ ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬದ ಪ್ರಯುಕ್ತ, ಅಪ್ಪು ಅಭಿಮಾನಿಗಳ ಬಳಗದಿಂದ ಹಳೇಬಾತಿ ಗ್ರಾಮದ ಮುಖ್ಯ ವೃತ್ತಕ್ಕೆ ಅಪ್ಪು ಸರ್ಕಲ್ ಎಂದು ನಾಮಕರಣ ಮಾಡಿ ಪುನೀತ್ ರಾಜಕುಮಾರ್ ಭಾವಚಿತ್ರ ಹೊಂದಿರುವ ನಾಮಫಲಕದ ಶಿಲಾನ್ಯಾಸವನ್ನು ಗ್ರಾಮ ಪಂಚಾಯತಿ ಅಧ್ಯಕ್ಷ ಎಸ್.ಆರ್. ಸಿದ್ದೇಶ್ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯರು, ಗ್ರಾಮದ ಮುಖಂಡರು, ಹಿರಿಯರು, ಗ್ರಾಮಸ್ಥರು ಸಮಾರಂಭದಲ್ಲಿ ಭಾಗಿಯಾಗಿದ್ದರು.

# ದೇವಿ ಹೆಸರಿನಲ್ಲಿ ಪ್ರಾಣಿ ಬಲಿ ತಡೆಯಲು ಆಗ್ರಹ



ಹರಿಹರ, ಮಾ. 17 - ದೇವಿ, ದೇವತೆ ಹೆಸರಲ್ಲಿ ಪ್ರಾಣಿ ಬಲಿ ತಡೆಯಬೇಕೆಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷರಾದ ಶ್ರೀ ದಯಾನಂದ ಸ್ವಾಮೀಜಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತಕ್ಕೆ ಆಗ್ರಹಿಸಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.22ರಿಂದ 26ರವರೆಗೆ ನಗರದಲ್ಲಿ ಗ್ರಾಮದೇವತೆ ಉತ್ಸವ ನಡೆಯಲಿದೆ.

ಈ ಸಂದರ್ಭದಲ್ಲಿ ಅಪಾರ ಸಂಖ್ಯೆಯ ಕೋಣ, ಆಡು, ಕುರಿ, ಕೋಳಿಗಳನ್ನು ಕ್ರೂರವಾಗಿ ಹತ್ಯೆ ಮಾಡುವುದನ್ನು ತಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಹೈಕೋರ್ಟ್ ಆದೇಶದಂತೆ ಪ್ರಾಣಿಬಲಿ, ಜೀವಹಿಂಸೆ ತ್ಯಜಿಸಿ ಸಾತ್ವಿಕ, ಅಹಿಂಸಾತ್ಮಕ ಪೂಜಾದಿ ಧಾರ್ಮಿಕ ಸೇವಾ ಕಾರ್ಯಗಳನ್ನು ಮಾತ್ರ ಆಚರಿಸಲು ಜಿಲ್ಲಾ ಮತ್ತು ತಾಲ್ಲೂಕು ಆಡ ಳಿತ ಗಮನಹರಿಸಬೇಕು ಎಂದು ಆಗ್ರಹಿಸಿದ್ದಾರೆ.

ನಾನು ಮಾಡುತ್ತಿರುವ ಜಾಗೃತಿ ಕಾರ್ಯಕ್ರಮ ದಿಂದಾಗಿ ದೇವಾಲಯದ ಆವರಣದಲ್ಲಿ ಕ್ರೂರವಾಗಿ ಪ್ರಾಣಿ ಬಲಿ ನೀಡುವುದು ನಿಂತಿದೆ. ಈ ಮುಂಚೆ ಸಾರ್ವಜನಿಕವಾಗಿ, ಅಮಾನುಷವಾಗಿ ಪ್ರಾಣಿಗಳ ಹತ್ಯೆ ನಡೆಯುತ್ತಿತ್ತು. ಇದು ಸಂಪೂರ್ಣವಾಗಿ ನಿಲ್ಲಬೇಕಿದೆ ಎಂದರು.

ಶಿರಸಿಯಲ್ಲಿನ ಮಾರಿಕಾಂಬಿಕ ದೇವತೆ ಜಾತ್ರೆ ನಿಮಿತ್ತ ಪಟ್ಟದ ಕೋಣದ ಬಲಿ ನೀಡುವ ಬದಲು ಕೋಣದ ದೇಹದಿಂದ ಸಿರಿಂಜ್ ಮೂಲಕ ರಕ್ತ ಪಡೆದು ದೇವಿಗೆ ಅರ್ಪಣೆ ಮಾಡುತ್ತಾರೆ. ಗಾಂಧೀಜಿಯವರು ಸೂಚನೆ ನೀಡಿದಂದಿನಿಂದ ಶಿರಸಿಯಲ್ಲಿ ಕೋಣನ ಬಲಿ ನಿಂತಿದೆ ಎಂದರು.

# ಜಿಗಳಿಯಲ್ಲಿ ಇಂದು ರಂಗನಾಥ ಸ್ವಾಮಿ ತೇರು



ಮಲೇಬೆನ್ನೂರು ಸಮೀಪದ ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ರಿಂದ ದೇವರುಗಳ ಸಮ್ಮುಖದಲ್ಲಿ ಭೂತನ ಸೇವೆ ಮತ್ತು ಉತ್ಸವ ನಡೆಯಲಿದೆ. ದಿನಾಂಕ 22ರ ಮಂಗಳವಾರ ಶ್ರೀ ಚೌಡಮ್ಮ ದೇವಿಯ ಹಬ್ಬವಿರುತ್ತದೆ.

# ಪುನೀತ್ ಕಂಚಿನ ಪ್ರತಿಮೆ ಅನಾವರಣ

**(1ನೇ ಪುಟದಿಂದ)** ಹೊಂದಿದ್ದಾರೆ ಎಂದರು.

ಪುನೀತ್ ನಿಧನ ರಾಜ್ಯಕ್ಕೆ ಆಘಾತಕರವಾದ ಸುದ್ದಿಯಾಗಿತ್ತು. ಈ ವೇಳೆ ಅವರ ಅಭಿಮಾನಿಗಳು ಯಾವುದೇ ಅಹಿತಕರ ಘಟನೆ ಆಗದಂತೆ ಅಭಿಮಾನ ತೋರ್ಪಡಿಸಿದ್ದಾರೆ. ಪುನೀತ್ ಅಭಿನಯದ ಜೇಮ್ಸ್ ಚಿತ್ರ ಇಂದು ಬಿಡುಗಡೆ ಆಗಿದ್ದು, ಅವರ ಅಭಿಮಾನಿಗಳು ಚಿತ್ರಮಂದಿರದ ಬಳಿ ಹಬ್ಬದಂತೆ ವಾತಾವರಣ ಸೃಷ್ಟಿಸಿರುವುದನ್ನು ಶ್ಲಾಘಿಸಿದರು.

ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್ ಮಾತನಾಡುತ್ತಾ, ನಮ್ಮ ವಾರ್ಡ್‌ನಲ್ಲಿ ಪುನೀತ್ ರಾಜಕುಮಾರ್ ಅವರ ಅಭಿಮಾನಿಗಳ ಸಂಖ್ಯೆ ಹೆಚ್ಚಾಗಿದೆ. ಅವರ ಕಂಚಿನ ಪ್ರತಿಮೆ ಸ್ಥಾಪಿಸಲು ಇದೇ ಪ್ರಮುಖ ಕಾರಣ ಎಂದರು.

ಶಾಮನೂರು ಶಿವಶಂಕರಪ್ಪ ಹಾಗೂ ಡಾ. ರಾಜಕುಮಾರ್ ಅವರ ಕುಟುಂಬಕ್ಕೂ ಮೊದಲಿನಿಂದಲೂ ನಂಟಿದೆ ಎಂದರಲ್ಲದೆ, ಈ ಉದ್ಯಾನವನಕ್ಕೆ ಬರುವ ವಾಯುವಿಹಾರಿಗಳು, ಜನರು, ಪುಟ್ಟ ಮಕ್ಕಳು ಅಪ್ಪು ಅವರನ್ನು ನೋಡಿ ಕಣ್ತುಂಬಿಕೊಳ್ಳಬೇಕೆಂಬ ಸದುದ್ದೇಶದಿಂದ ಪ್ರತಿಮೆಯನ್ನು ಇಲ್ಲಿ ಪ್ರತಿಷ್ಠಾಪಿಸಿದ್ದೇವೆ. ನಟನೆ, ಸಾಮಾಜಿಕ ಸೇವೆ, ಬಡವರಿಗೆ ನೆರವು ಸೇರಿದಂತೆ ಪುನೀತ್ ರವರು ಮಾಡಿರುವ ಸೇವೆ ಅನನ್ಯ ಎಂದರು.

**ರಕ್ತದಾನ ಶಿಬಿರ:** ಭಾರತೀಯ ರೆಡ್ ಕ್ರಾಸ್ ಸಂಸ್ಥೆ ರಕ್ತನಿಧಿ ಕೇಂದ್ರ, ಲೈಫ್ ಲೈನ್ ಸ್ವಯಂಪ್ರೇರಿತ ರಕ್ತದಾನಿಗಳ ಸಮೂಹದ ಸಂಯುಕ್ತಾಶ್ರಯದಲ್ಲಿ ಸ್ವಿಮ್ಮಿಂಗ್ ಪೂಲ್ ಆವರಣದಲ್ಲಿ ಪುನೀತ್ ಜನ್ಮದಿನದ ಪ್ರಯುಕ್ತ 47 ಮಂದಿ ರಕ್ತದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಇದೇ ವೇಳೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರ ಜನ್ಮದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಲಾಯಿತು.

ಪಾಲಿಕೆ ವಿಪಕ್ಷ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯ ಎ. ನಾಗರಾಜ್, ಚಮನ್ ಸಾಬ್, ಮಾಜಿ ಸದಸ್ಯರಾದ ಕೆ. ಜಿ.ಶಿವಕುಮಾರ್, ಶೋಭ ಪಲ್ಲಾಗಟ್ಟೆ, ಜ್ಯೋತಿ ಸಿದ್ದೇಶ್, ಅಂದನೂರು ಮುಪ್ಪಣ್ಣ, ಎಸ್.ಟಿ.ಕುಸುಮಶೆಟ್ರು, ಬಿ.ಹೆಚ್. ಪರಶುರಾಮಪ್ಪ, ಗೌಡ್ರು ಚನ್ನಬಸಪ್ಪ, ಪ್ರಮೋದ್, ಅನಿಲ್ ಬಾರೆಂಗಳ್, ಪೃಥ್ವಿ ಬಾದಾಮಿ, ಗೋಪಾಲಕೃಷ್ಣ, ಗಾಯಕವಾಡ್ ಸಂತೋಷ್, ಶೇಷಾಚಲ, ಮಾಧವ ಪದಕಿ, ಮಧುಕೇಶವ, ಜಗನ್, ವಸಂತರಾಜ್, ಉಮೇಶ್ ಶೆಟ್ಟಿ, ಡಿ.ಎಸ್.ಸಾಗರ್, ಡಿ. ಎಸ್.ಸಿದ್ದಣ್ಣ, ಜಾವೆದ್ ಸಾಬ್, ಗುರುಮೂರ್ತಿ, ಅಂಗಡಿ ಸಾಬ್, ಸಿದ್ದೇಶ್, ಚಂದನ್ ಪಲ್ಲಾಗಟ್ಟೆ, ಆಲೂರು ಜ್ಯೋತಿರ್ಲಿಂಗ, ಸತೀಶ್, ಪ್ರಜ್ವಲ್, ಮುರುಗೇಶ್ ಮಂತ್ರಿ, ಮನು, ಭರತ್ ಮೈಲಾರ, ನಿಖಿಲ್ ಮಂತ್ರಿ, ಐನಳ್ಳಿ ಪುಟ್ಟಣ್ಣ, ಲೈಫ್ ಲೈನ್ ಸಮೂಹ ಸ್ವಯಂಪ್ರೇರಿತ ಕಾರ್ಯದರ್ಶಿ ಅನಿಲ್ ಬಾರೆಂಗಳ್, ಉಪಾಧ್ಯಕ್ಷ ಪೃಥ್ವಿ ಬಾದಾಮಿ, ನಿರ್ದೇಶಕರಾದ ಗೋಪಾಲಕೃಷ್ಣ, ಗಾಯಕವಾಡ ಸಂತೋಷ್, ಶೇಷಾಚಲ, ಜಗನ್, ವಸಂತರಾಜು, ಉಮೇಶ್ ಶೆಟ್ಟಿ, ಸಾಗರ್ ಡಿ. ಎಸ್., ಡಿ. ಎಸ್. ಸಿದ್ಧಣ್ಣ ಮತ್ತಿತರರು ಹಾಜರಿದ್ದರು.



'ಅಪ್ಪು ಉತ್ಸವ'

**(1ನೇ ಪುಟದಿಂದ)** ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಪ್ಪು ಉತ್ಸವ ಆಚರಿಸಲಾಯಿತು.

ನಿಟುವಳ್ಳಿಯ ಶ್ರೀ ದುರ್ಗಾಂಬಿಕ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಪುನೀತ್ ಅವರ 47ನೇ ಹುಟ್ಟುಹಬ್ಬದ ಅಂಗವಾಗಿ 47 ಆಟೋಗಳ ಮೇಲೆ ಪುನಿತ್ ಕಟೌಟ್ ಮೆರವಣಿಗೆ ನಡೆಯಿತು. ವಸಂತ ಚಿತ್ರಮಂದಿರದವರೆಗೆ ಮೆರವಣಿಗೆ ತೆರಳಿ, ನಂತರ ಕೇಕ್ ಕತ್ತರಿಸಿ, ಅಭಿಮಾನಿಗಳಿಗೆ ಸಿಹಿ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಒಕ್ಕೂಟದ ಅಧ್ಯಕ್ಷ ಯೋಗೇಶ್, ಪುನೀತ್ ಅಭಿನಯದ ಜೇಮ್ಸ್ ಚಿತ್ರದ ಪ್ರವೇಶ ದರ 50 ರೂ. ಕಡಿಮೆ ಮಾಡಬೇಕು. ಈ ಬಗ್ಗೆ ನಿರ್ಮಾಪಕರಿಗೆ ಮನವಿ ಸಲ್ಲಿಸಲಾಗುವುದು. ಜೊತೆಗೆ ಪುನೀತ್ ಅವರ ಚಿತ್ರಗಳನ್ನು ಟಿವಿಯಲ್ಲಿ ಪ್ರಸಾರ ಮಾಡುವುದನ್ನು ಸ್ಥಗಿತಗೊಳಿಸಿ ಪ್ರತಿ ವರ್ಷ ಅವರ ಜನ್ಮದಿನದಂದು ಚಿತ್ರೋತ್ಸವದ ರೀತಿ ಪ್ರದರ್ಶಿಸಲು ಚಲನಚಿತ್ರ ವಾಣಿಜ್ಯ ಮಂಡಳಿಗೆ ಮನವಿ ನೀಡುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ವೈ. ಭಾಗ್ಯದೇವಿ, ತಿಪ್ಪೇಸ್ವಾಮಿ, ಹರೀಶ್, ನಾಗರಾಜ್, ಮಾರುತಿ, ಆಟೋ ಮಂಜು ಇತರರು ಇದ್ದರು.

# 36 ನೇ ದಿನಕ್ಕೆ ಕಾಲಿಟ್ಟ ರಾಜನಹಳ್ಳಿ ಶ್ರೀಗಳ ಧರಣಿ ಸತ್ಯಾಗ್ರಹ : ಹೆಚ್.ಡಿ.ಕುಮಾರಸ್ವಾಮಿ ಬೆಂಬಲ




ಬೆಂಗಳೂರು, ಮಾ.17 - ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿ ಅನುಷ್ಠಾನಗೊಳಿಸುವಂತೆ ಹಾಗೂ ಸಮುದಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಗುರುವಾರ 36 ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಭಾಗವಹಿಸಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮಾತನಾಡಿ, ಸಮ್ಮಿಶ್ರ ಸರ್ಕಾರ ಇದ್ದಾಗ ಎಸ್ಸಿ-ಎಸ್ಟಿ ಮೀಸಲಾತಿ ಹೆಚ್ಚಳ ಕುರಿತು ಅಧ್ಯಯನ ನಡೆಸಿ, ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಾಧೀಶ ನಾಗಮೋಹನ್ ದಾಸ್ ಆಯೋಗ ರಚನೆ ಮಾಡಿದ್ದೆವು. ಆ ಪ್ರಕಾರ ಆಯೋಗ ಅಧ್ಯಯನ ವರದಿ ಸಲ್ಲಿಸಿ, 2 ವರ್ಷ ಕಳೆದರೂ ಸಹ ಈಗಿನ ಬಿಜೆಪಿ ಸರ್ಕಾರ ವರದಿ ಜಾರಿಗೊಳಿಸಿಲ್ಲ. ಇದರಲ್ಲಿ ಸರ್ಕಾರದ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಈ ಕುರಿತು ವಿಧಾನಸಭೆ ಅಧಿವೇಶನದಲ್ಲಿ ಮಾತನಾಡುವೆ ಎಂದು ಕುಮಾರಸ್ವಾಮಿ ಹೇಳಿದರು. ಈ ಸಂದರ್ಭದಲ್ಲಿ ಶಾಸಕರಾದ ಸಾ. ರಾ. ಮಹೇಶ್, ರಾಜಾ ವೆಂಕಟನಾಯ್ಕ, ವೆಂಕಟ್‌ರಾವ್ ನಾಡಗೌಡ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಹರಿಹರ : ಹಬ್ಬದ ಪೂರ್ವಭಾವಿ ಸಿದ್ಧತೆಯಲ್ಲಿ ವೈಫಲ್ಯ

**(1ನೇ ಪುಟದಿಂದ)** ಸರಿಯಾಗಿ 1 ಗಂಟೆ ನೀರು ಸರಬರಾಜು ಮಾಡಲಾಗುತ್ತಿಲ್ಲ. ಅದರಲ್ಲೂ ಹಲವು ಬಡಾವಣೆಗಳಲ್ಲಿ ಅರ್ಧ ಗಂಟೆ ಮಾತ್ರ ನೀರು ಬಂದು ಬಂದ್ ಆಗುತ್ತಿದೆ.

ಕಸ ಸಂಗ್ರಹ ಮಾಡುವ ಆಟೋ ಟಿಪ್ಪರ್‌ಗಳು ಹಲವು ಬಡಾವಣೆಗಳಲ್ಲಿ 3-4 ದಿನಕ್ಕೊಮ್ಮೆ ಬರುತ್ತಿವೆ. ಕಸದ ಬಕೆಟ್‌ಗಳು ತುಂಬಿ, ತುಳುಕುತ್ತಿವೆ. ಹಲವು ಮನೆಯ ವರು ದುರ್ವಾಸನೆ ಬೀರುತ್ತಿವೆ ಎಂದು ಕಸವನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತುಂಬಿ ರಸ್ತೆಗಳಿಗೆ ತಂದು ಹಾಕುತ್ತಿದ್ದಾರೆ. ಒಂದು ಮಾಹಿತಿ ಪ್ರಕಾರ ಹಲವು ಆಟೋಗಳು ದುರಸ್ತಿಗೆ ಬಂದಿವೆ, ಹಾಗೂ ಕೆಲವು ಆಟೋಗಳಿಗೆ ಡೀಸೆಲ್ ಹಾಕಿಸಲು ನಗರಸಭೆಗೆ ಹಣದ ಕೊರತೆ ಇದೆ ಎಂದು ತಿಳಿದು ಬಂದಿದೆ.

ಫ್ಲೆಕ್ಸ್ ಹಾವಳಿಯನ್ನು ತಡೆಯಲು ನಗರಸಭೆ ಮತ್ತೆ ವಿಫಲವಾಗಿದೆ. ಫ್ಲೆಕ್ಸ್‌ಗಳು ಪ್ಲಾಸ್ಟಿಕ್ ಹಾಳೆಯಿಂದ ಮಾಡಿದ್ದವಾಗಿದ್ದು ಹಬ್ಬದ ನಂತರ ಸಾವಿರಾರು ಫ್ಲೆಕ್ಸ್‌ಗಳಿಂದ ಟನ್‌ಗಟ್ಟಲೆ ಪ್ಲಾಸ್ಟಿಕ್ ತ್ಯಾಜ್ಯ ಸೃಷ್ಟಿಯಾಗುತ್ತದೆ. ಅಂಗಡಿ, ಮನೆ, ವಾಣಿಜ್ಯ ಸಂಕೀರ್ಣ, ಸರ್ಕಲ್‌ಗಳು, ವಿದ್ಯುತ್ ಕಂಬ ಹೀಗೆ ಎಲ್ಲೆಂದರಲ್ಲಿ ರಾತ್ರೋ ರಾತ್ರಿ ನೂರಾರು ಫ್ಲೆಕ್ಸ್ ಅಳವಡಿಸಲಾಗಿದೆ. ಇದರಲ್ಲಿ ಎಷ್ಟು ಜನರಿಂದ ಶುಲ್ಕ ಸಂಗ್ರಹಿಸಲಾಗಿದೆ ಎಂಬುದು ಕ್ಷೇತ್ರಪಾಲಕ ಹರಿಹರೇಶ್ವರನಿಗೆ ಮಾಹಿತಿ ಇರಬಹುದು.

ಚರಂಡಿಗಳು ಯಥಾ ಪ್ರಕಾರ ಕಸದ ತೊಟ್ಟಿಯಾಗಿಯೇ ಇವೆ. ದೊಡ್ಡ ಚರಂಡಿಗಳು ವಿಶೇಷವಾಗಿ ಸ್ವಚ್ಛಗೊಂಡಿಲ್ಲ. ಹಬ್ಬದಂದು ಯಾವ ಚರಂಡಿ ಎಲ್ಲಿ ಕಟ್ಟಿಕೊಂಡು ತ್ಯಾಜ್ಯ ನೀರು ರಸ್ತೆಗಳಿಗೆ ಹರಿಯುತ್ತದೆಯೋ ಗೊತ್ತಿಲ್ಲ. ಹಬ್ಬದ ಕಸವೂ ಸೇರಿ ಚರಂಡಿಗಳೆಲ್ಲಾ ದುರ್ವಾಸನೆ ಬೀರುತ್ತಾ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಆತಂಕವಿದೆ.

ಹಬ್ಬದ ಮೂರ್ನಾಲ್ಕು ದಿನಗಳಂದು ಸುತ್ತಲಿನ ನಗರ, ಗ್ರಾಮಗಳ ಲಕ್ಷಾಂತರ ಜನ ಹರಿಹರಕ್ಕೆ ಬರುತ್ತಾರೆ. ಆ ಸಂದರ್ಭದಲ್ಲಿ ಜನಸಂದಣಿ ತಪ್ಪಿಸಲು ಬದಲಿ ರಸ್ತೆಗಳಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡ ಬೇಕಾಗುತ್ತದೆ. ಈ ಕುರಿತು ಪೊಲೀಸ್ ಇಲಾಖೆಯಿಂದಲೂ ಯಾವ ಮುನ್ಸೂಚನೆಯನ್ನೂ ಜನರಿಗೆ ಈವರೆಗೆ ನೀಡಿಲ್ಲ.

ಹಬ್ಬ ಘೋಷಣೆ ಮಾಡುವಲ್ಲಿ ಅತ್ಯಂತ ಆಸಕ್ತಿ ವಹಿಸಿದ ಶಾಸಕ ಎಸ್.ರಾಮಪ್ಪನವರ ಉತ್ಸಾಹ ಸಿದ್ಧತೆಯಲ್ಲಿ, ಮುಂಜಾಗ್ರತೆಯಲ್ಲಿ ಕಾಣದಂತಾಗಿದೆ. ಒಂದು ಬಾರಿ ನಗರಸಭೆಯಲ್ಲಿ ಪೂರ್ವ ಸಿದ್ಧತೆ ಸಭೆಯಲ್ಲಿ ಭಾಗವಹಿಸಿ ನಂತರ ಶಾಸಕರು ಕಾಣದಂತೆ ಮಾಯವಾಗಿದ್ದಾರೆಂಬ ಆರೋಪ ಕೇಳಿ ಬರುತ್ತಿದೆ.

# ಜನಸ್ಪಂದನೆಗೆ ಮತ್ತೆ ಚಾಲನೆ

**(1ನೇ ಪುಟದಿಂದ)** ನಿಕರಿಂದ ಅನೇಕ ಅಹವಾಲುಗಳನ್ನು ಸ್ವೀಕರಿಸಲಾಯಿತು.

ಮನವಿಗಳನ್ನು ಸ್ವೀಕರಿಸಿದ ನಂತರ ಮಾತನಾಡಿದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಸಾರ್ವಜನಿಕರ ಸಮಸ್ಯೆಗಳನ್ನು ಸ್ಥಳೀಯವಾಗಿ ಪರಿಹರಿಸುವ ಸಲುವಾಗಿ ಜನಸ್ಪಂದನಾ ಸಭೆ ನಡೆಸಲಾಗುತ್ತಿದೆ. ಅಧಿಕಾರಿಗಳು ವಿಳಂಬಕ್ಕೆ ಅವಕಾಶ ನೀಡದೆ ಸಾರ್ವಜನಿಕ ಮನವಿಗಳಿಗೆ ತ್ವರಿತವಾಗಿ ಸ್ಪಂದಿಸುವ ಮೂಲಕ ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಜನಸ್ಪಂದನ ಸಭೆಯ ಮೂಲಕ ಅನೇಕ ಸಮಸ್ಯೆಗಳು ಸ್ಥಳದಲ್ಲಿಯೇ ಇತ್ಯರ್ಥವಾಗುತ್ತವೆ. ಅಲ್ಲದೆ ಅಧಿಕಾರಿಗಳ ಕಾರ್ಯವೈಖರಿಯೂ ತಿಳಿಯುತ್ತದೆ. ಅಧಿಕಾರಿಗಳ ನಡುವೆ ಸಮನ್ವಯವೂ ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಪಂಚಾಯ್ತಿ ನೂತನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಚನ್ನಪ್ಪ ಅವರನ್ನು ಜಿಲ್ಲಾಧಿಕಾರಿ ಬೀಳಗಿ ಈ ಸಂದರ್ಭದಲ್ಲಿ ಹೂಗುಚ್ಛ ನೀಡಿ ಸ್ವಾಗತಿಸಿದರು.


ಸಭೆಯಲ್ಲಿ ಡಿಯುಡಿಸಿ ಯೋಜನಾಧಿಕಾರಿ ನಜ್ಮಾ, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ ಮುದಜ್ಜಿ ಮತ್ತು ಇತರರು ಉಪಸ್ಥಿತರಿದ್ದರು.

## ಉಚಿತ ಶಸ್ತ್ರ ಚಿಕಿತ್ಸೆ

ದಾವಣಗೆರೆ, ಮಾ.17 - ಸೀಳು ತುಟಿ ಮತ್ತು ಸೀಳು ಅಂಗಳ, ಸೀಳು ಮುಖ ಇವುಗಳಿಗೆ ಸಂಬಂಧಿಸಿದಂತೆ ಉಚಿತ ಚಿಕಿತ್ಸೆಯನ್ನು ನೀಡುತ್ತದೆ. ಮಕ್ಕಳನ್ನು ಚಿಗಟೇರಿ ಜಿಲ್ಲಾ ಆಸ್ಪತ್ರೆ, ಡಿ.ಇ.ಐ.ಸಿ ಕೇಂದ್ರದಲ್ಲಿ ನೋಂದಣಿ ಮಾಡಿಸಿ, ರಂಗಾ ದೊರೆ ಮೆಮೋರಿಯಲ್ ಆಸ್ಪತ್ರೆ (ಬಸವನಗುಡಿ, ಬೆಂಗಳೂರು)ಯಲ್ಲಿ ಉಚಿತ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬಹುದು.


॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥







ಶಿವಗಣಾರಾಧನೆ ಹಾಗೂ ಸರ್ವ ಶರಣ ಸಮ್ಮೇಳನ



ಶ್ರೀ ಶ್ರೀ ಶ್ರೀ 1108 ಜಗದ್ಗುರು ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ. ಇವರ ದಿವ್ಯಸಾನ್ನಿಧ್ಯದಲ್ಲಿ

ಶರಣ ಬಸವರಾಜಪ್ಪ ವೈ.ಕೆ.

ಸೂಪರಿಂಟೆಂಡೆಂಟ್ ಇಂಜಿನಿಯರ್ (ನಿ) ಬೆಸ್ಕಾಂ ಬೆಂಗಳೂರು.

ಇವರ ಧರ್ಮಪತ್ನಿ

ಶರಣೆ ಜಿ.ಹೆಚ್. ಕುಸುಮರವರ

ಶಿವಗಣಾರಾಧನೆ ಹಾಗೂ ಸರ್ವ ಶರಣ ಸಮ್ಮೇಳನ

ದಿನಾಂಕ : 19.03.2022ನೇ ಶನಿವಾರ ಮಧ್ಯಾಹ್ನ 3.00ಕ್ಕೆ

ಸ್ಥಳ : ಕೆಂಚಮ್ಮನಾಗತಿಹಳ್ಳಿ.

ಉಪನ್ಯಾಸ : ಚಟ್ನಹಳ್ಳಿ ಮಹೇಶ್ ಮತ್ತು ಆರ್. ತಿಪ್ಪೇಸ್ವಾಮಿ, ಉಪ ಕೃಷಿ ನಿರ್ದೇಶಕರು, ದಾವಣಗೆರೆ. ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳ ಕುರಿತು




ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

ಇಂದ : ಎಸ್.ಕೆ. ಮಂಜುನಾಥ್, ಜಿ.ಪಂ. ಮಾಜಿ ಸದಸ್ಯರು ಮತ್ತು ಸಹೋದರರು-ಸಹೋದರಿಯರು



ಐದನೇ ವರ್ಷದ ಪುಣ್ಯಸ್ಮರಣೆ



ಎಂ.ಬಿ. ಸಂತೋಷ್, ಶ್ಯಾಗಲೆ

(ಶ್ರೀಶೈಲ ಟೂರ್ಸ್ ಅಂಡ್ ಟ್ರಾವೆಲ್ಸ್)

ಜನನ : 28.9.1979, ಲಿಂಗೈಕ್ಯ : 18.3.2017

*'ಹುಲ್ಲಾದೆ ಬೆಟ್ಟದಡಿ ಮನೆಗೆ ಮಲ್ಲಿಗೆಯಾದೆ ಕಲ್ಲಾದೆ ಕಷ್ಟಗಳ ಮಳೆಯ ವಿಧಿ ಸುರಿಯೇ ಬೆಲ್ಲ ಸಕ್ಕರೆಯಾದೆ ಬಂಧು ಬಳಗದವರಿಗೆ ಮತ್ತು ಸ್ನೇಹಿತರಿಗೆ ಎಲ್ಲರಲ್ಲಿಯೂ ಒಂದಾಗಿ ಬಾಳಿದೆ.'*

ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

ಧರ್ಮಪತ್ನಿ : ಹೆಚ್.ಸಿ. ಸುಮಾ ಮತ್ತು ಪುತ್ರಿ : ಬಿ.ಎಸ್. ಚಂದನ

ತಾಯಿ-ತಂದೆ : ಶ್ರೀಮತಿ ನೀಲಾಂಬಿಕ ಮತ್ತು ಎಂ. ಬಸವರಾಜಪ್ಪ ನಿ. ಶಿಕ್ಷಕರು.

ಶ್ರೀಮತಿ ದೀಪಾ ಎಂ.ಬಿ. ಸತೀಶ್ ಮತ್ತು ಮಗಳು : ಕಾವ್ಯಶ್ರೀ

ಶ್ರೀಮತಿ ಕುಮುದಾ ಎಂ.ಬಿ. ಸುಭಾಷ್ ಮತ್ತು ಮಗ : ಪೂರ್ವಿಕ್

ಅತ್ತೆ-ಮಾವ: ಶ್ರೀಮತಿ ಅನ್ನಪೂರ್ಣ ಮತ್ತು ಹೆಚ್. ಚಂದ್ರಶೇಖರಪ್ಪ ನಿ. ಶಿಕ್ಷಕರು.

ಶ್ರೀಮತಿ ರೂಪ, ಹೆಚ್.ಸಿ. ನರೇಂದ್ರ, ಮಗ : ಶಿವಪ್ರಸಾದ್, ಮಗಳು : ಗೌರಿ

ಶ್ರೀಮತಿ ರಂಜಿತ ಹೆಚ್.ಸಿ. ಸಂತೋಷ್, ಮಕ್ಕಳು : ಪೃಥ್ವಿ, ನರೇನ್

ಶ್ರೀಮತಿ ದ್ಯಾಮಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ತೋಳಹುಣಸೆ ಗೌಡರ ಕುಟುಂಬದವರು.

ಶ್ರೀಮತಿ ಹೂವಾಕ್ಷಿ ನಾಗರಾಜಪ್ಪ , ಮಗ : ಅರುಣ, ಮಗಳು : ಆಶಾ

ಶ್ರೀಮತಿ ಸಾವಿತ್ರ, ಬಿ.ಜಿ. ರವಿ, ಶ್ರೀಮತಿ ರೇವತಿ ಮಂಜುನಾಥ್, ಮಗ : ವಿನಯ್, ಮಗಳು : ಪ್ರೀತಿ

ಶ್ರೀಮತಿ ಭಾಗ್ಯ ಕರಿಗೌಡರು ಮಕ್ಕಳು : ಹರೀಶ್, ಆಕಾಶ್

ಶ್ರೀಮತಿ ಲತಾ ಸದಾಶಿವು, ಮಗ : ಕನಿಷ್ಕ, ಮಗಳು : ದಕ್ಷಿಕ, ಶ್ರೀಮತಿ ನಂದಾ ಸೂರಜ್

ಮಕ್ಕಳು: ಅದ್ವಿಕ್, ಅನ್ವಿಕ್, ಶ್ರೀಮತಿ ಶ್ರೀಕಾಂತ, ಅಜ್ಜಪ್ಪ ಮತ್ತು

ಶ್ರೀಮತಿ ರಶ್ಮಿ ಲೋಹಿತ್ ಕುಮಾರ್ ಮಗಳು : ರಿಷಿತ ಹಾಗೂ ಬಂಧುಗಳು


# ಲಾರಿ-ಕಾರು ನಡುವೆ ಡಿಕ್ಕಿ : ಸಾವು



ದಾವಣಗೆರೆ, ಮಾ.17 - ಕ್ಯಾಂಟರ್ ಮತ್ತು ಕಾರು ನಡುವೆ ಮುಖಾಮುಖಿ ಡಿಕ್ಕಿಯಾಗಿ ಇಬ್ಬರು ಸ್ಥಳದಲ್ಲಿಯೇ ಸಾವಿಗೀಡಾಗಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಹಿರೇಮಳಲಿ ಗ್ರಾಮದ ತಿರುಮಲ ಬಾರ್ ಹತ್ತಿರ ನಡೆದಿದೆ.

ದೇಗರಹಳ್ಳಿ ಬಸವಾಪುರ ಶರತ್ ಬಸವ (30) ಮತ್ತು ಕಾಗಿನೆಲೆಯ ಶಿವಯ್ಯ (50) ಸಾವನ್ನಪ್ಪಿದ ದುರ್ದೈವಿಗಳು.

ಕಾರು ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಶರತ್ ಬಸವ ಮತ್ತು ಶಿವಯ್ಯ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸ್ಥಳಕ್ಕೆ ಚನ್ನಗಿರಿ ಪೊಲೀಸರು ಭೇಟಿ ನೀಡಿದ್ದು, ಮೃತ ದೇಹಗಳನ್ನು ಕಾರಿನಿಂದ ತೆಗೆದು ಮರಣೋತ್ತರ ಪರೀಕ್ಷೆಗೆ ಚನ್ನಗಿರಿ ಆಸ್ಪತ್ರೆಗೆ ರವಾನಿಸಿದ್ದಾರೆ.

## ದೊಡ್ಡಬಾತಿಯಲ್ಲಿ ಇಂದು ಓಕುಳಿ

ದೊಡ್ಡಬಾತಿಯಲ್ಲಿ ಶ್ರೀ ರೇವಣಸಿದ್ಧೇಶ್ವರ ಸ್ವಾಮಿಯ ರಥೋತ್ಸವ ನಿನ್ನೆ ಜರುಗಿತು. ಇಂದು ರಾತ್ರಿ ಓಕುಳಿ, ಗಂಗಾ ಪೂಜೆ ನಡೆಯಲಿದೆ.

# ಹಿಜಾಬ್ ಕುರಿತ ಬಂದ್ ಕರೆ ವಿಫಲ

**(1ನೇ ಪುಟದಿಂದ)** ಎಂದಿನಂತೆ ಸಾರಿಗೆ ಸಂಚಾರ ಸುಗಮವಾಗಿತ್ತು, ವಾಣಿಜ್ಯ ಸಂಸ್ಥೆಗಳು ಸಹಜ ಸ್ಥಿತಿಯಲ್ಲಿ ವಹಿವಾಟು ನಡೆಸಿದವು, ಬ್ಯಾಂಕ್, ಸರ್ಕಾರಿ ಕಚೇರಿ ಸೇರಿದಂತೆ ಸಾರ್ವಜನಿಕ ಚಟುವಟಿಕೆಗಳು ಎಂದಿನಂತೆ ಇದ್ದವು.

ಕೆಲವು ಸೂಕ್ಷ್ಮ ಪ್ರದೇಶಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಹೈಕೋರ್ಟ್ ನೀಡಿರುವ ತೀರ್ಪನ್ನು ವಿರೋಧಿಸಿ ಬಂದ್ ಕರೆ ನೀಡಿರುವ ವಿಷಯ ವಿಧಾನಮಂಡಲದಲ್ಲಿ ಚರ್ಚೆಗೆ ಗ್ರಾಸವಾಯಿತು.

## ಪದವಿ ಪೂರ್ವ ಕಾಲೇಜುಗಳಿಗೆ ಸಾವಿರ ಡಿ ಗ್ರೂಪ್ ನೌಕರರ ನೇಮಕ

ಬೆಂಗಳೂರು, ಮಾ. 17 - ಸರ್ಕಾರಿ ಪದವಿಪೂರ್ವ ಕಾಲೇಜುಗಳಿಗೆ ಒಂದು ಸಾವಿರ 'ಡಿ' ಗ್ರೂಪ್ ನೌಕರರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.


ಹೊಸದಾಗಿ ರಾಜ್ಯದಲ್ಲಿ ಸರ್ಕಾರಿ ಐಟಿಐ ಕಾಲೇಜುಗಳನ್ನು ಸದ್ಯಕ್ಕೆ ತೆರೆಯುವುದಿಲ್ಲ, ಇರುವ ಕಾಲೇಜುಗಳಿಗೇ ವಿದ್ಯಾರ್ಥಿಗಳಿಲ್ಲ ಎಂದರು.

ಪ್ರಶ್ನೋತ್ತರ ವೇಳೆಯಲ್ಲಿ ಶಿವಾನಂದ ಎಸ್.ಪಾಟೀಲ್, ಅಖಂಡ ಶ್ರೀನಿವಾಸ ಮೂರ್ತಿ ಅವರ ಪ್ರತ್ಯೇಕ ಪ್ರಸ್ತಾವಗಳಿಗೆ ಉತ್ತರಿಸಿದ ಸಚಿವರು, 1250 ಉಪನ್ಯಾಸಕರ ಹುದ್ದೆಗಳಿಗೆ ನೇಮಕಾತಿ ಪ್ರಾರಂಭವಾಗಿದೆ, 12 ಸಾವಿರ ಅತಿಥಿ ಉಪನ್ಯಾಸಕರ ನೇಮಕವಾಗಿದೆ, ಕಾಲೇಜುಗಳಿಗೆ ರಾತ್ರಿ ಭದ್ರತಾ ಸಿಬ್ಬಂದಿ ಒದಗಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ವಿದ್ಯಾರ್ಥಿಗಳಿಂದ ಸಂಗ್ರಹಿಸಲಾಗುವ ಶುಲ್ಕವನ್ನು ಆಯಾ ಕಾಲೇಜುಗಳ ಬ್ಯಾಂಕ್ ಖಾತೆಗಳಲ್ಲಿ ಜಮೆ ಮಾಡಲು ತೀರ್ಮಾನ ಮಾಡಲಾಗಿದೆ.

ಸರ್ಕಾರಿ ಐಟಿಐ ಕಾಲೇಜುಗಳಲ್ಲಿ ಪೂರ್ಣ ಪ್ರಮಾಣದಲ್ಲಿ ವಿದ್ಯಾರ್ಥಿಗಳು ದಾಖಲಾಗದೆ ಸೀಟುಗಳು ಖಾಲಿ ಉಳಿಯುತ್ತಿವೆ, ರಾಜ್ಯದಲ್ಲಿ 270 ಐಟಿಐ ಕಾಲೇಜುಗಳಿದ್ದು ಪೂರ್ಣವಾಗಿ ಭರ್ತಿಯಾಗುತ್ತಿಲ್ಲ, ಈ ಹಿನ್ನೆಲೆಯಲ್ಲಿ ಹೊಸದಾಗಿ ಐಟಿಐ ಮಂಜೂರು ಮಾಡುವುದಿಲ್ಲ ಎಂದರು.

## ಹಿಜಾಬ್ ತೀರ್ಪಿನ ವಿರುದ್ಧ ಮಲೇಬೆನ್ನೂರಿನಲ್ಲಿ ವ್ಯಾಪಾರ ಬಂದ್



ಮಲೇಬೆನ್ನೂರು, ಮಾ. 17- ಹಿಜಾಬ್‌ಗೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಬೇಸರ ವ್ಯಕ್ತಪಡಿಸಿ ಅಮೀರ್-ಇ-ಶರಿಯ್ಯ ಕರೆ ನೀಡಿದ್ದ ಕರ್ನಾಟಕ ಬಂದ್ ಬೆಂಬಲಿಸಿ, ಪಟ್ಟಣದಲ್ಲೂ ಮುಸ್ಲಿಂ ಸಮಾಜದವರು ವ್ಯಾಪಾರ-ವಹಿವಾಟು ಬಂದ್ ಮಾಡುವ ಮೂಲಕ ಬೆಂಬಲ ವ್ಯಕ್ತಪಡಿಸಿದರು.

ಅಲ್ಲದೇ ಪಟ್ಟಣದಲ್ಲಿರುವ ಮುಸ್ಲಿಂ ಸಮಾಜದ ವಿದ್ಯಾಸಂಸ್ಥೆಗಳನ್ನು ಬಂದ್ ಮಾಡಿ, ಸಂವಿಧಾನದ ಆಶಯದ ವಿರುದ್ಧ ಹೈಕೋರ್ಟ್ ತೀರ್ಪು ನೀಡಿರುವುದು ಬೇಸರ ತಂದಿದೆ ಎಂದು ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಸ್ಲಿಂ ಸಮಾಜದವರ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿದ್ದರಿಂದ ಪಟ್ಟಣದಲ್ಲಿ ಒಂದು ರೀತಿ ಅಘೋಷಿತ ಬಂದ್ ವಾತಾವರಣ ನಿರ್ಮಾಣವಾಗಿತ್ತು. ಶಾಂತಿಯುತವಾಗಿದ್ದರೂ ಮೌನ ಪ್ರತಿಭಟನೆ ಕಂಡು ಬಂತು. ಪಿಎಸ್ಐ ರವಿಕುಮಾರ್ ನೇತೃತ್ವದಲ್ಲಿ ಪಟ್ಟಣದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

## ಓದುಗರ ಪತ್ರ

### ಪ್ರೀತಿ, ಬಾಂಧವ್ಯವನ್ನು ಬೆಳೆಯುವ ಜಾತ್ರೆಗಳು, ಹಬ್ಬಗಳು, ಉರುಸ್...

**ಮಾನ್ಯರೇ,**

ನಗರದೇವತೆ ದುಗ್ಗಮ್ಮ ಜಾತ್ರೆ ಹಿಂದೂ ಸಮುದಾಯದ ಹಬ್ಬದ ಜೊತೆ ಜೊತೆಗೆ ಭಾವೈಕ್ಯತೆಯನ್ನು ಮೆರೆಯುವ ಹಬ್ಬವಾಗಿದೆ.

ವಾಸ್ತವದಲ್ಲಿ ನಾವು ಸಣ್ಣವರಿದ್ದಾಗ ಜಾತ್ರೆಗಳಿಗೆ ಹೋಗುವುದೇ ಒಂದು ವಿಶೇಷವಾಗಿತ್ತು. ವಾರ, ಹದಿನೈದು ದಿನಗಳಿಂದ ಹಣ ಜೋಡಿಸಿಕೊಂಡು ಜಾತ್ರೆಗೆ ಹೋಗುವ ತಯಾರಿ ನಡೆಯುತ್ತಿತ್ತು. ಅಲ್ಲಿಯ ಆಟಿಕೆಗಳನ್ನು ತಂದು ಆಟವಾಡಿ ಸಂತೋಷಪಡುತ್ತಿದ್ದೆವು.

ಹಬ್ಬಗಳಲ್ಲಿ ಮುಸಲ್ಮಾನರು ತಮ್ಮ ಮನೆಗಳಲ್ಲಿ ಸಿಹಿ ಅಡುಗೆ ಮಾಡಿ ಹಿಂದೂ ಬಾಂಧವರಿಗೆ ಹಂಚುತ್ತಿದ್ದರು. ಜಾತ್ರೆಯಲ್ಲಿ ವಿಶೇಷವಾಗಿ ಮುಸ್ಲಿಂ ಸ್ನೇಹಿತರನ್ನು ಊಟಕ್ಕೆ ಕರೆಯುತ್ತಾರೆ. ಇಸ್ಲಾಂ ಪದ್ಧತಿ ಪ್ರಕಾರ 'ಹಲಾಲ್' ಮಾಡದ ಮಾಂಸಾಹಾರ ಸೇವಿಸುವುದು ನಿಷೇಧವಿದೆ. ಹಾಗಾಗಿ ಬಹಳ ಜನ ಹಿಂದೂ ಬಾಂಧವರು ಕುರಿಗಳನ್ನು ಹಲಾಲ್ ಮಾಡಿಸಿ ಅಡುಗೆ ಮಾಡುತ್ತಾರೆ. ಇನ್ನು ಕೆಲವರು ಮುಸಲ್ಮಾನರಿಗಾಗಿ ಮಾಂಸದ ಅಂಗಡಿಯಿಂದ ಮಾಂಸವನ್ನು ತರಿಸಿ ಅಡುಗೆ ಮಾಡಿಸಿ ಉಣಬಡಿಸುತ್ತಾರೆ.

ಹೀಗೆ ಹಿಂದೂ-ಮುಸಲ್ಮಾನರು ಒಬ್ಬರಿಗೊಬ್ಬರು ಮನೆಗಳಿಗೆ ಹೋಗಿ ಆಹಾರವನ್ನು ಸೇವಿಸುವ ಪರಿ ಎರಡೂ ಸಮುದಾಯಗಳ ಮಧ್ಯದ ಬಾಂಧವ್ಯವನ್ನು ಗಟ್ಟಿಗೊಳಿಸುತ್ತದೆ.

ಸಹೋದರತೆ, ಏಕತೆ, ಪ್ರೀತಿ, ವಿಶ್ವಾಸ ಇನ್ನು ಧೃಡ ಗೊಳಿಸುತ್ತದೆ. ಜಾತ್ರೆಗಳು, ಹಬ್ಬಗಳು, ಉರುಸ್ ಎಲ್ಲ ಜನರ ಮಧ್ಯದಲ್ಲಿ ಒಂದು ಭಾವೈಕ್ಯತೆಯನ್ನು ಬೆಸೆದು, ದೇಶವನ್ನು ಗಟ್ಟಿಗೊಳಿಸುತ್ತದೆ. ಹೀಗೆ ಪ್ರೀತಿ, ಬಾಂಧವ್ಯದ ಸಂಕೋಲೆ ಬೆಳೆಯುತ್ತದೆ.

ಪ್ರೀತಿ, ಬಾಂಧವ್ಯಗಳು ದೂರವಾಗುತ್ತಿರುವ ಇಂದಿನ ಸಂದರ್ಭದಲ್ಲಿ ನಾವು ನಮ್ಮ ಎಲ್ಲಾ ಸಮುದಾಯಗಳ ಮಧ್ಯದಲ್ಲಿ ಬಾಂಧವ್ಯವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪ್ರೀತಿಯನ್ನು ಹಂಚುವ ಕೆಲಸ ಮಾಡಬೇಕಾಗಿದೆ.

**- ಅನೀಸ್ ಪಾಷ,** ವಕೀಲರು, ದಾವಣಗೆರೆ.

### ಪಿಜೆ ಬಡಾವಣೆಯಲ್ಲಿ ಹೆಚ್ಚಾದ ಬೀದಿ ನಾಯಿಗಳ ಹಾವಳಿ

**ಮಾನ್ಯರೇ,**

ಪಿ.ಜೆ. ಬಡಾವಣೆಯ ಶ್ರೀರಾಮ ಪಾರ್ಕ್ ಸುತ್ತಮುತ್ತ ಹಾಗೂ ರಾಂ ಅಂಡ್ ಕೋ ಸರ್ಕಲ್ ಸುತ್ತಮುತ್ತ ಬೀದಿ ನಾಯಿಗಳ ಕಾಟ ವಿಪರೀತವಾಗಿದ್ದು ಪಾದಚಾರಿಗಳಿಗೆ ಮತ್ತು ವಾಹನ ಸವಾರರನ್ನು ಬೆನ್ನತ್ತಿ ಕೊಂಡು ಹೋಗಿ ಅಪಘಾತಕ್ಕೆ ಕಾರಣವಾಗುತ್ತಿವೆ. ಸುಮಾರು ಆರು ತಿಂಗಳಿನಿಂದ ಇವುಗಳ ಸಂಖ್ಯೆ ಹೆಚ್ಚುತ್ತಿದ್ದು, ಯಾರೂ ಇದರ ಬಗ್ಗೆ ಗಮನ ಹರಿಸುತ್ತಿಲ್ಲ. ಆದ ಕಾರಣ ಸಂಬಂಧ ಪಟ್ಟ ಮಹಾನಗರ ಪಾಲಿಕೆ ಅಧಿಕಾರಿಗಳು ಇತ್ತ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

**- ಐಗೂರು ಪ್ರಭು ಸಿ.,** ದಾವಣಗೆರೆ.

### ಮಾದರಿ ನಗರಪಾಲಿಕೆಯಾಗಬೇಕು!

**ಮಾನ್ಯರೇ,**

ದಾವಣಗೆರೆ ನಗರಪಾಲಿಕೆ ರಾಜ್ಯಕ್ಕೆ ಮಾದರಿಯಾಗಬೇಕು, ಅನುಭಾವಿಗಳ ಸಲಹೆ, ಮಾರ್ಗದರ್ಶನ ಪಡೆದರೆ ಆಯ್ಕೆ ಮಾಡಿದವರಿಗೆ ಸಂತೋಷ, ನೆಮ್ಮದಿ ಸಿಕ್ಕುತ್ತದೆ. ಹೆಚ್.ಕೆ.ಆರ್. ವೃತ್ತದ ಬಳಿ ಚರಂಡಿ ಕೊಳೆತು ನಾರುತ್ತಿದೆ. ದೊಡ್ಡ ಕಂದಕ ನಿರ್ಮಾಣವಾಗಿ ತಿಂಗಳಾಯಿತು, ದಿನ ಸಾವಿರಾರು ಮಕ್ಕಳು ಓಡಾಡುತ್ತಾರೆ.

ಕಳೆದ ವಾರ ಇಬ್ಬರು ಪುಟ್ಟ ಮಕ್ಕಳು ಅದರಲ್ಲಿ ಜಾರಿಬಿದ್ದರು, ತಕ್ಷಣ ಅಲ್ಲೇ ಇದ್ದ ನಾಗರಿಕರು ಅವರನ್ನು ಮೇಲೆತ್ತಿದರು. ಪಾಲಿಕೆ ಅಧಿಕಾರಿಗಳು ನಗರ ವೀಕ್ಷಣೆ ಮಾಡಿದರೆ ಸಮಸ್ಯೆಗಳು ಅರ್ಥವಾಗುತ್ತವೆ. ಅಧಿಕಾರ ಖಂಡಿತಾ ಶಾಶ್ವತವಲ್ಲ, ಉಪಕಾರ ಶಾಶ್ವತ. ನಗರದಲ್ಲಿ ಇಂತಹ ಹತ್ತು ಹಲವು ಸಮಸ್ಯೆಗಳಿವೆ. ಸಲಹೆಯನ್ನು ಎಲ್ಲರೂ ಸ್ವೀಕರಿಸಿ, ಜನಸೇವೆ ಮಾಡಿದರೆ ನಮ್ಮದು ಮಾದರಿ ನಗರಪಾಲಿಕೆಯಾಗುತ್ತದೆ.

**- ಕೆ.ಎನ್.ಸ್ವಾಮಿ,** ದಾವಣಗೆರೆ.

## ದಿಂಡದಹಳ್ಳಿ: ಭಕ್ತಿ, ಶ್ರದ್ಧೆ, ಸಂಪ್ರದಾಯ ಮೇಳೈಸಿದ ಕಾಳುಹಬ್ಬಕ್ಕೆ ತೆರೆ

**ಜಿ.ಜಗದೀಶ್,** ಮಾಯಕೊಂಡ







ದಿಂಡದಹಳ್ಳಿಯಲ್ಲಿ ಜಿಲ್ಲೆಯಲ್ಲೇ ವೈಶಿಷ್ಟ್ಯಪೂರ್ಣ ಜುಂಜಪ್ಪನ ಜಾತ್ರೆ

ಮಾಯಕೊಂಡ, ಮಾ.17 - ಜುಂಜಪ್ಪನ ಪೌಳಿ ತುಂಬಾ ಉಕ್ಕಿ ಹರಿವ ಉತ್ಸಾಹ, ಹೆಜ್ಜೆ ಹಾಕಿ ದೇವರ ಭೇಟಿ ಮಾಡಿಸುವ ಯುವಕರು, ಭಕ್ತಿಯಿಂದ ಉನ್ಮತ್ತರಾಗಿ ಬಯಲು ಎಡೆ ಸೇವಿಸುವ ದಾಸರು, ಬುಟ್ಟಿತುಂಬಿದ ಕಾಳನ್ನು ಭಕ್ತಿಯಿಂದ ಜುಂಜಪ್ಪನಿಗೆ ಸಮರ್ಪಿಸುವ ಭಕ್ತರು, ಇಡೀ ರಾತ್ರಿ ಜುಂಜಪ್ಪನ ಮಹಿಮೆ ಪಾಡುವ ಮಹಿಳೆಯರು ಭಕ್ತಿ, ಸಂಪ್ರದಾಯ, ಸಂಭ್ರಮದ ದೃಶ್ಯ ಕಂಡುಬಂದದ್ದು, ಸಮೀಪದ ದಿಂಡದಹಳ್ಳಿಯ ಗೊಲ್ಲರಹಟ್ಟಿಯಲ್ಲಿ.

ಇಲ್ಲಿನ ಯಾದವರು (ಕಾಡು ಗೊಲ್ಲರು) ಪ್ರತಿ ವರ್ಷ ಸಂಪ್ರದಾಯದಂತೆ ಕಾಳು ಹಬ್ಬ ಆಚರಿಸಿ ಧನ್ಯತಾ ಭಾವ ಹೊಂದುತ್ತಾರೆ. ಸಂಪ್ರದಾಯದಂತೆ ಶಿವರಾತ್ರಿ ಮುಗಿದ ವಾರದ ನಂತರ ಕಾಳುಹಬ್ಬಕ್ಕೆ ಚಾಲನೆ ನೀಡಲಾಲಾಗುವುದು. ಶನಿವಾರ ದೊಡ್ಡಮಾಗಡಿಯ ನೀರಭತ್ತೇಶ್ವರ ಸ್ವಾಮಿ ಮತ್ತು ದಿಂಡದಹಳ್ಳಿ ಆಂಜನೇಯ ಸ್ವಾಮಿ ಭೇಟಿ ಮುಗಿಸಿ, ದಿಂಡದಹಳ್ಳಿಗೆ ಕರೆತರಲಾಯಿತು. ಭಾನುವಾರ ಜುಂಜೇಶ್ವರ ಮತ್ತು ಕ್ಯಾತಲಿಂಗೇಶ್ವರ ದೇವರ ಹೊಳೆಪೂಜೆ ನಡೆಸಲಾಯಿತು. ಊರಾಚೆಗಿನ ಜುಂಜಪ್ಪನ ಪೌಳಿಯಲ್ಲಿ ದೇವರ ಉತ್ಸವಮೂರ್ತಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿ ಸಂಪ್ರದಾಯದಂತೆ ರಾತ್ರಿ ವಾರದ ಹಾಲು ತರಲಾಯಿತು.

ಸೋಮವಾರ ಹೊಳೆಪೂಜೆಯಿಂದ ಬಂದ ದೇವರುಗಳ ಗ್ರಾಮ ಪ್ರವೇಶ ನಡೆಯಿತು. ಭಕ್ತರು ಅರ್ಪಿಸಿದ ತೊಗರಿ, ಅವರೆಕಾಳನ್ನು ದೇವಾಲಯದ ಆವರಣದಲ್ಲಿ ಯುವಕರು, ಕೈವಾಡದವರು ಕಾಳನ್ನು ಬೇಯಿಸಿ ಭಕ್ತರಿಗೆ ಹಂಚಲಾಯಿತು. ಮಂಗಳವಾರ ಬೆಳಿಗ್ಗೆ ಕ್ಯಾತಲಿಂಗೇಶ್ವರ ಸ್ವಾಮಿಯ ಎಲೆ ಪೂಜೆ ನಡೆಸಲಾಯಿತು. ದೇವಾಲಯದ ಮುಂಭಾಗದಲ್ಲಿ ದೊಡ್ಡ ಎಡೆ ಹಾಕಲಾಯಿತು. ದಾಸಪ್ಪಗಳು ಶಂಖ, ಭುವನಾಸಿ, ಚಾಟಿ ಸಮೇತರಾಗಿ ಉರುಮೆ ವಾದ್ಯಕ್ಕೆ ಹೆಜ್ಜೆಹಾಕಿ ಬಯಲು ಎಡೆ ಸೇವಿಸಿದರು. ಕೆಲವರು ಉರುಮೆ ಸದ್ದಿಗೆ ಉನ್ಮತ್ತರಾದರು. ಪೂಜಾರಪ್ಪ ಉರಿಯುತ್ತಿರುವ ದೀಪದ ಬತ್ತಿ ನುಂಗಿ, ಸಂಪ್ರದಾಯದಂತೆ ಎಡೆ ಸೇವಿಸಿದೊಡನೆ ಭಕ್ತರ ಉದ್ಘೋಷ ಮುಗಿಲು ಮುಟ್ಟಿತು.

ಬುಧವಾರ ದೇವಾಲಯದ ಆವರಣದಲ್ಲಿ ಗ್ರಾಮಸ್ಥರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಗುರುವಾರ ಹರಕೆ ಹೊತ್ತವರು ಪಾನಕ ಗಾಡಿಗಳೊಂದಿಗೆ ಬಂದು ಭಕ್ತರಿಗೆ ಮತ್ತು ಗ್ರಾಮಸ್ಥರಿಗೆ ಪಾನಕ ವಿತರಿಸಿದರು. ದಾವಣಗೆರೆ ಜಿಲ್ಲೆಯಲ್ಲಿ ಯಾದವರು ಹೆಚ್ಚಿನ ಸಂಖ್ಯೆಯಲ್ಲಿದ್ದರೂ, ಈ ವಿಶೇಷ ಆಚರಣೆ ನಡೆಯುವುದು ದಿಂಡದಹಳ್ಳಿಯಲ್ಲಿ ಮಾತ್ರ. ಪ್ರತೀ ಮನೆಯಿಂದಲೂ ಕಾಣಿಕೆ ಸಂಗ್ರಹಿಸಿ ಹಬ್ಬ ಮಾಡುತ್ತೇವೆ. ಈ ಜಾತ್ರೆಯು ನಮ್ಮ ಸಂಪ್ರದಾಯದ ಪ್ರತೀಕ ಎನ್ನುತ್ತಾರೆ, ಗೊಲ್ಲರಹಟ್ಟಿಯ ಮುಖಂಡರಾದ ಸಣ್ಣ ಕ್ಯಾತಪ್ಪ, ಬಸವರಾಜಪ್ಪ, ದೊಡ್ಡ ಕ್ಯಾತಪ್ಪ, ಶೇಖರಪ್ಪ, ರಾಜಪ್ಪ, ಪ್ರವೀಣ, ದೊಡ್ಡ ಕಾಟಪ್ಪ ಮತ್ತಿತರರು.

**ಹಲವು ವೈಶಿಷ್ಟ್ಯಗಳ ಕಾಳುಹಬ್ಬ**

**ವಾರದ ಹಾಲು:** ಭಾನುವಾರ ಹೊಳೆಪೂಜೆ ಮುಗಿಸಿಕೊಂಡು ಬಂದ ಜುಂಜೇಶ್ವರ ಮತ್ತು ಆಂಜನೇಯ ಸ್ವಾಮಿಯನ್ನು ಊರಾಚಿನ ಜುಂಜಪ್ಪನ ಪೌಳಿಗೆ ತಂದು ಕೂರಿಸಲಾಗುತ್ತದೆ. ಗ್ರಾಮದ ಎಲ್ಲಾ ಕುರಿ, ಮೇಕೆ ಮೇಯಿಸಿಕೊಂಡು ಸಂಜೆ ಅಲ್ಲಿಯೇ ತರುಬಲಾಗುತ್ತದೆ. ಮರಿಗಳೂ ಕೂಡಾ ಹಾಲು ಕುಡಿಯದಂತೆ ಮೇಕೆ ಕುರಿಗಳ ಮೊಲೆಗಳಿಗೆ ಕೆಮ್ಮಣ್ಣಿನ ಬಟ್ಟೆ ಸುತ್ತಿ, ಮಡಿಯಿಂದ ಹಾಲು ಕರೆದು, ಕಾಯಿಸಿ, ಹೆಪ್ಪು ಹಾಕಿದ ಗಡಿಗೆ ಹೊತ್ತು, ವಾದ್ಯ ಸಮೇತ ದೇವಾಲಯಕ್ಕೆ ತರಲಾಗುತ್ತದೆ. ಮೊಸರನ್ನು ಅನ್ನ ಸಂತರ್ಪಣೆಗೆ,ತುಪ್ಪ ದೀಪಕ್ಕೆ ಬಳಸಲಾಗುತ್ತದೆ.

**ಮದ್ಯ, ಮಾಂಸಾಹಾರ ವರ್ಜ್ಯ:** ಈ ಹಬ್ಬ ಆರಂಭದಿಂದ ಯುಗಾದಿ ಕಳೆಯುವವರೆಗೂ ಯಾದವ ಜನಾಂಗದವರು ಮಾಂಸಾಹಾರ ಸೇವಿಸುವುದಿಲ್ಲ. ಬಹುತೇಕರು ಈ ಹಬ್ಬ ಮುಗಿಯುವವರೆಗೆ ಮದ್ಯಪಾನವನ್ನೂ ಮಾಡುವುದಿಲ್ಲ. ಸಂಪ್ರದಾಯ, ಆಚರಣೆ ಹಾಸ್ಯಾಸ್ಪದವಾಗುತ್ತಿರುವ ದಿನಮಾನದಲ್ಲೂ ದಿಂಡದಹಳ್ಳಿಯಲ್ಲಿ ಯಾದವ ಜನಾಂಗದವರು ಸಂಪ್ರದಾಯ ಪಾಲಿಸಿ, ಮುಂದಿನ ಪೀಳಿಗೆಗೆ ಉಳಿಸಿಕೊಳ್ಳುತ್ತಿದ್ದಾರೆ ಎಂದು ಅಕ್ಕಪಕ್ಕದ ಗ್ರಾಮದವರು ಪ್ರಶಂಸಿಸುತ್ತಾರೆ.

## ಮಹಿಳೆಯರು ಸ್ವ ಸಾಮರ್ಥ್ಯದಿಂದ ಎಲ್ಲಾ ಕ್ಷೇತ್ರಗಳಲ್ಲೂ ಮುಖ್ಯವಾಹಿನಿಗೆ ಬರಬೇಕು



### ಹರಪನಹಳ್ಳಿ : ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಲತಾ ಮಲ್ಲಿಕಾರ್ಜುನ್ ಆಶಯ

ಹರಪನಹಳ್ಳಿ, ಮಾ. 17- ಮಹಿಳೆಯರು ಅಡುಗೆ ಮನೆಗೆ ಸೀಮಿತವಾಗದೇ ತಮ್ಮ ಸ್ವಂತ ಸಾಮರ್ಥ್ಯದಿಂದ ಎಲ್ಲಾ ಕ್ಷೇತ್ರಗಳಲ್ಲೂ ಮುಖ್ಯವಾಹಿನಿಗೆ ಬರುತ್ತಿರುವುದು ಸಂತಸದ ಸಂಗತಿಯಾಗಿದೆ ಎಂದು ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ಹೇಳಿದರು.

ಇಲ್ಲಿನ ಕಾಂಗ್ರೆಸ್ ಭವನದಲ್ಲಿ ಎಂ.ಪಿ. ರವೀಂದ್ರ ಪ್ರತಿಷ್ಠಾನದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಹಾಗೂ ವಿಕಲಚೇತನ ಮಹಿಳೆಯರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಇತಿಹಾಸದ ಪುಟವನ್ನು ತಿರುವಿ ನೋಡಿದಾಗ ವೀರ ವನಿತೆಯರಾದ ಅಕ್ಕಮಹಾದೇವಿ, ಕಿತ್ತೂರು ರಾಣಿ ಚೆನ್ನಮ್ಮ, ಮದರ್ ತೆರೆಸಾ, ಲತಾ ಮಂಗೇಶ್ಕರ್, ಗಂಗೂಬಾಯಿ ಹಾನಗಲ್, ಕಲ್ಪನಾ ಚಾವ್ಲಾ, ಇಂದಿರಾಗಾಂಧಿ, ಸಾಲುಮರದ ತಿಮ್ಮಕ್ಕ ಸೇರಿದಂತೆ ಸಾಧನೆ ಮಾಡಿದ ಮಹಿಳೆಯರ ದೊಡ್ಡ ಪಟ್ಟಿಯೇ ಸಿಗುತ್ತದೆ. ಮಹಿಳೆ ಸಹನೆ, ತಾಳ್ಮೆಯ ಪ್ರತಿರೂಪ. ಮಹಿಳೆಯರು ಸಹ ಗಟ್ಟಿತನ ರೂಢಿಸಿಕೊಳ್ಳಬೇಕು. ಜಗತ್ತಿನಲ್ಲಿ ಮಹಿಳೆಯರಿಗೆ ಅತ್ಯಂತ ಗೌರವವನ್ನು ಭಾರತದಲ್ಲಿ ನೀಡಲಾಗುತ್ತದೆ. ತಾಲ್ಲೂಕಿನಲ್ಲಿ ಸಾವಿರ ವಿಕಲಚೇತನ ಮಹಿಳೆಯರು ಇದ್ದು, ಅದರಲ್ಲಿ ಸದ್ಯ ಗ್ರಾಮ ಪಂಚಾಯ್ತಿಗೆ ಇಬ್ಬರಂತೆ ಮಹಿಳೆಯರನ್ನು ಗೌರವಿಸಲಾಗುತ್ತದೆ ಎಂದರು.

ಖೋ-ಖೋ ಕ್ರೀಡೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆಗೈದ ಪ್ರಸ್ತುತ ರಾಷ್ಟ್ರೀಯ ತಂಡಕ್ಕೆ ಖೋ -ಖೋ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿರುವ ನಂದಿನಿ ಒಡೆಯರ್, ಚಿಗಟೇರಿ ಬ್ಲಾಕ್ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಭಾಗ್ಯಮ್ಮ, ನಂದಿಬೇವೂರು ಗ್ರಾ.ಪಂ. ಅಧ್ಯಕ್ಷೆ ಸುಜಾತ ಹಾವಿನ, ಉಪಾಧ್ಯಕ್ಷೆ ಲಕ್ಷ್ಮಿ ಚಂದ್ರಶೇಖರ್, ಹಲುವಾಗಲು ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಎನ್.ಟಿ. ರತ್ನಮ್ಮ ಸೋಮಣ್ಣ, ಪುರಸಭಾ ಮಾಜಿ ಸದಸ್ಯೆ ಕವಿತಾ ಸುರೇಶ್, ಗ್ರಾ.ಪಂ. ಸದಸ್ಯೆ ರೇಣುಕಾ ಮಂಜುನಾಥ, ಉಮಾ ಶಂಕರ್, ಯುವ ಕಾಂಗ್ರೆಸ್ ಅಧ್ಯಕ್ಷ ಮತ್ತೂರು ಬಸವರಾಜ, ಚಿಗಟೇರಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಹರಿಯಮ್ಮನಹಳ್ಳಿ ಶಿವರಾಜ, ಎನ್.ಎಸ್.ಯು.ಐ. ಅಧ್ಯಕ್ಷ ಶ್ರೀಕಾಂತ ಯಾದವ್, ಮುಖಂಡರಾದ ಮೈದೂರು ರಾಮಣ್ಣ, ಕಡಬಗೇರಿ ಮಲ್ಲಿಕಾರ್ಜುನ, ಪ್ರಸಾದ್ ಕಾವಡಿ ಉಪಸ್ಥಿತರಿದ್ದರು.

## ಜಿಗಳಿಯಲ್ಲಿ ವಿಜೃಂಭಣೆಯ ರಥೋತ್ಸವ



ಮಲೇಬೆನ್ನೂರು, ಮಾ. 17- ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಗುರುವಾರ ಬೆಳಗಿನ ಜಾವ ವಿಜೃಂಭಣೆಯಿಂದ ಜರುಗಿತು.

ರಥದಲ್ಲಿ ಶ್ರೀ ರಂಗನಾಥ ಸ್ವಾಮಿ ದೇವರ ಮೂರ್ತಿಯನ್ನು ಇರಿಸಿ, ನಂತರ ರಥಕ್ಕೆ ಪೂಜೆ ಸಲ್ಲಿಸಿ ಗೋವಿಂದಾ ಗೋವಿಂದಾ ಎಂಬ ಜಯಘೋಷದೊಂದಿಗೆ ಭಕ್ತರು ರಥ ಎಳೆದು ಸಂಭ್ರಮಿಸಿದರು. ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿ ಜಿ. ಬೇವಿನಹಳ್ಳಿ ಮತ್ತು ಯಲವಟ್ಟಿಯ ಶ್ರೀ ಹನುಮಂತ ದೇವರುಗಳ ಸಮ್ಮುಖದಲ್ಲಿ ನಡೆದ ರಥೋತ್ಸವಕ್ಕೆ ವೀರಗಾಸೆ, ಡೊಳ್ಳು ವಾದ್ಯ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರಗು ತಂದವು.

ಅಂಬಾಭವಾನಿ ದೇವಸ್ಥಾನದ ಆವರಣದಲ್ಲಿ ಮರಾಠ ಸಮಾಜದವರು 4ನೇ ಬಾರಿಗೆ ಅನ್ನ ಸಂತರ್ಪಣೆ ಏರ್ಪಡಿಸಿದ್ದರು. ಗ್ರಾಮ ಸಹಾಯಕ ರಂಗನಾಥ್, ಧರ್ಮರಾಜ್, ಪ್ರವೀಣ್, ಚಮನ್ ಸಾಬ್ ಮತ್ತು ಸ್ನೇಹಿತರು ರಥೋತ್ಸವ ಹಾಗೂ ನಟ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದ ಅಂಗವಾಗಿ ಅನ್ನ ಸಂತರ್ಪಣೆ ನಡೆಸಿಕೊಟ್ಟರು.

ಗ್ರಾಮದ ಉದ್ಯೋಗಸ್ಥ ಯುವಕರ ತಂಡವೊಂದು ಈ ವರ್ಷವೂ ಜಾತ್ರೆಗೆ ಬರುವ ಜನರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದರು. ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಯಿತು. ಶುಕ್ರವಾರ ಬೆಳಗಿನ ಜಾವ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ ಭೂತನ ಸೇವೆ ಹಾಗೂ ದೇವರುಗಳು ಉತ್ಸವ ನಡೆಯಲಿದೆ.

## ಬಸಾಪುರದ ಸ. ಶಾಲಾ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ





ದಾವಣಗೆರೆ, ಮಾ.17- ಶಾಲಾ ಮಕ್ಕಳಲ್ಲಿ ದೇಶದ ಬಗ್ಗೆ ಅರಿವು ಮೂಡಿಸಲು ಭಾರತದ ಸ್ವಾತಂತ್ರ್ಯದ 75 ವರ್ಷಗಳ ಸಂಭ್ರಮಾಚರಣೆಯ 'ಆಜಾದಿ ಕಾ ಅಮೃತ ಮಹೋತ್ಸವ' ಕಾರ್ಯಕ್ರಮದಡಿಯಲ್ಲಿ ತಾಲ್ಲೂಕು, ಜಿಲ್ಲಾ ವಿಭಾಗ ಹಾಗೂ ರಾಜ್ಯಮಟ್ಟದಲ್ಲಿ ಆನ್‌ಲೈನ್ ಮೂಲಕ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿತ್ತು.

ದಾವಣಗೆರೆ ಉತ್ತರ ವಲಯದ ತಾಲ್ಲೂಕು ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಬಸಾಪುರ, ವಾರ್ಡ್ 21, ಶಾಲೆಯ ವಿದ್ಯಾರ್ಥಿಗಳಾದ ಚೈತ್ರ (7ನೇ ತರಗತಿ) ಭಾಗ್ಯಲಕ್ಷ್ಮಿ (7ನೇ ತರಗತಿ) ಹಾಗೂ ನೀಲಾಂಬರಿ (8ನೇ ತರಗತಿ) ಆಯ್ಕೆಯಾಗಿದ್ದರು.

ಜಿಲ್ಲಾ ಮಟ್ಟದ ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯಲ್ಲಿ ಇದೇ ಶಾಲೆಯ ಚೈತ್ರ (7ನೇ), ನೀಲಾಂಬರಿ (8ನೇ ತರಗತಿ) ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕೆ.ಎಲ್.ಹರೀಶ್ ಬಸಾಪುರ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ನಗದು ಬಹುಮಾನ ನೀಡಿ ಅಭಿನಂದಿಸಿದರು.

## ರಾಣೇಬೆನ್ನೂರಿನಲ್ಲಿ ಪುನೀತ್ ಹುಟ್ಟುಹಬ್ಬ : ರಕ್ತದಾನ, ನೇತ್ರದಾನ



ರಾಣೇಬೆನ್ನೂರು, ಮಾ.17- ರೈಲು ನಿಲ್ದಾಣದ ಬಳಿಯ ಡಾ. ರಾಜಕುಮಾರ್ ಆಟೋ ಚಾಲಕ ಹಾಗೂ ಮಾಲೀಕರ ಸಂಘದಿಂದ ದಿ. ಪುನೀತ್ ರಾಜಕುಮಾರ್ ಹುಟ್ಟು ಹಬ್ಬದ ಪ್ರಯುಕ್ತ ರಕ್ತದಾನ, ನೇತ್ರದಾನ ಮತ್ತು ಅನ್ನ ಸಂತರ್ಪಣೆ ಏರ್ಪಾಡು ಮಾಡಲಾಗಿತ್ತು.

ಸಂಘದ ಆಟೋ ಚಾಲಕ, ಮಾಲೀಕರು ಪುನೀತ್ ಭಾವಚಿತ್ರದೊಂದಿಗೆ ಶೃಂಗರಿಸಿದ ತಮ್ಮ ಆಟೋಗಳೊಂದಿಗೆ ನಗರಾದ್ಯಂತ ಮೆರವಣಿಗೆ ನಡೆಸಿದರು. ಸಂಘದ ಸದಸ್ಯರು ಹಾಗೂ ಕೆಲ ಅಭಿಮಾನಿಗಳು ರಕ್ತದಾನ ಮಾಡಿದರು. ನಂತರ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

## ನಾಳೆ 'ಅನುಪಮ ಸೇವಾ ರತ್ನ' ಪ್ರಶಸ್ತಿ ಪ್ರದಾನ

ದಾವಣಗೆರೆ, ಮಾ. 17- ಕರ್ನಾಟಕ ಸಾವಿತ್ರಿ ಬಾಯಿ ಪುಲೆ ಶಿಕ್ಷಕಿಯರ ಸಂಘದ ವತಿಯಿಂದ ನಾಡಿದ್ದು ದಿನಾಂಕ 19 ರ ಶನಿವಾರ ಬೆಳಿಗ್ಗೆ 10.30 ಕ್ಕೆ ನಗರದ ಗುರುಭವನದಲ್ಲಿ ವಿಶ್ವ ಮಹಿಳಾ ದಿನಾಚರಣೆ, ಸಾಧಕಿಯರಿಗೆ 'ಅನುಪಮ ಸೇವಾ ರತ್ನ' ಪ್ರಶಸ್ತಿ ಪ್ರದಾನ ಹಾಗೂ ಶೈಕ್ಷಣಿಕ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷರಾದ ಕಲ್ಪನಾ ರವೀಂದ್ರನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಸಮಾರಂಭವನ್ನು ಉದ್ಘಾಟಿಸುವರು. ಸಂಘದ ರಾಜ್ಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಲತಾ ಎಸ್. ಮುಳ್ಳೂರು ಆಶಯ ನುಡಿಗಳನ್ನಾಡುವರು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ 'ಮಹಿಳಾ ಸಬಲೀಕರಣ ಮತ್ತು ಕಾನೂನು ಅರಿವು' ಕುರಿತು ಉಪನ್ಯಾಸ ನೀಡಲಿದ್ದಾರೆ.

ಎಂ.ಪಿ. ರೇಣುಕಾಚಾರ್ಯ, ಜಿ.ಎಂ. ಸಿದ್ದೇಶ್ವರ, ಡಾ. ಶಾಮನೂರು ಶಿವಶಂಕರಪ್ಪ, ಎಸ್.ವಿ. ರಾಮಚಂದ್ರ, ಪ್ರೊ.ಲಿಂಗಣ್ಣ, ಎಸ್.ಎ. ರವೀಂದ್ರನಾಥ್, ಎಸ್. ರಾಮಪ್ಪ, ವೈ.ಎ. ನಾರಾಯಣಸ್ವಾಮಿ, ಎಂ. ಚಿದಾನಂದಗೌಡ, ಜಯಮ್ಮ ಗೋಪಿನಾಯ್ಕ, ಬಿ.ಜಿ. ಅಜಯ್‌ಕುಮಾರ್, ಮಹಾಂತೇಶ್ ಬೀಳಗಿ, ಸಿ.ಬಿ. ರಿಷ್ಯಂತ್, ಡಾ. ವಿಜಯಮಹಾಂತೇಶ್ ದಾನಮ್ಮನವರ್, ವಿಶ್ವನಾಥ ಪಿ. ಮುದಜ್ಜಿ, ಜಿ.ಆರ್. ತಿಪ್ಪೇಶಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ ಅವರನ್ನೊಳಗೊಂಡಂತೆ 10 ಜನರಿಗೆ ಅನುಪಮ ಸೇವಾ ರತ್ನ ಪ್ರಶಸ್ತಿ, ಮೂವರಿಗೆ ಜಿಲ್ಲಾ ಮಟ್ಟದ ಅನುಪಮ ಸೇವಾ ಶಿಕ್ಷಕಿ ಪ್ರಶಸ್ತಿ, ವಿವಿಧ ಸಂಘಟನೆಗಳಲ್ಲಿ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿರುವ ಮೂವರು ಶಿಕ್ಷಕಿಯರಿಗೆ, ಸರ್ಕಾರಿ ಪ್ರಾಥಮಿಕ, ಪ್ರೌಢಶಾಲಾ, ಉರ್ದು ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದ ಶಿಕ್ಷಕಿಯರಿಗೆ ಜಿಲ್ಲಾಮಟ್ಟದ ಅನುಪಮ ಸೇವಾ ಶಿಕ್ಷಕಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಕೆ.ಜಿ. ಸೌಭಾಗ್ಯ, ಹೆಚ್.ಎಂ. ಮಂಗಳಾ, ಸಿ. ಪದ್ಮ ಜ್ಯೋತಿ, ಡಿ. ಸರೋಜಮ್ಮ ಮತ್ತಿತರರಿದ್ದರು.

## ಕುಂಬಳೂರಿನಲ್ಲಿ ಇಂದು ಕಬಡ್ಡಿ ಪಂದ್ಯಾವಳಿ

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಶ್ರೀ ಹನುಮಂತ ದೇವರ ರಥೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ 10 ಕ್ಕೆ ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ ಕಬಡ್ಡಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ.

ಉದ್ಘಾಟನೆ : ಎಸ್.ರಾಮಪ್ಪ, ಮುಖ್ಯ ಅತಿಥಿಗಳು: ಮಾಗಾನಹಳ್ಳಿ ಹಾಲಪ್ಪ, ಜಿ.ಮಂಜುನಾಥ್ ಪಟೇಲ್, ಎಂ.ನಾಗೇಂದ್ರಪ್ಪ, ನಂದಿಗಾವಿ ಶ್ರೀನಿವಾಸ್, ಶ್ರೀಮತಿ ಲೀಲಾ ಶಿವಕುಮಾರ್, ಎ.ಕೆ. ಹನುಮಂತಪ್ಪ ಮತ್ತಿತರರು.

## ಕೊಡದಗುಡ್ಡದಲ್ಲಿ ನಾಳೆ ರಥೋತ್ಸವ

ಜಗಳೂರು ತಾಲ್ಲೂಕು ಕೊಡದಗುಡ್ಡದ ಶ್ರೀ ವೀರಭದ್ರಸ್ವಾಮಿ ರಥೋತ್ಸವವು ನಾಳೆ ಶನಿವಾರ ಜರುಗಲಿದೆ. ಇಂದು ವೃಷಭ ವಾಹನೋತ್ಸವ ನಡೆಯಲಿದ್ದು, ನಾಳೆ ಶನಿವಾರ ಬೆಳಿಗ್ಗೆ 6 ಗಂಟೆಗೆ ಅಗ್ನಿಕುಂಡ ಮಹೋತ್ಸವ, ಸಂಜೆ 4.30ಕ್ಕೆ ಮಹಾರಥೋತ್ಸವ ನಡೆಯಲಿದೆ.


## ಕಾಣೆಯಾಗಿದ್ದಾರೆ



**ಶ್ರೀಮತಿ ಸರೋಜಾ ಕೋಂ ಪ್ರಕಾಶಯ್ಯ ಹಿರೇಮಠ,** ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ವಾಸಿಯಾದ ನಮ್ಮ ಮೂರನೇ ಮಗನಾದ **ರಜತ್** ಇವರು, ದಿನಾಂಕ : 19.01.2020 ರಂದು ಸಂಜೆ 5.00 ರಿಂದ 5.30 ಗಂಟೆ ಮಧ್ಯದಲ್ಲಿ ಮನೆಯಿಂದ ದೇವಸ್ಥಾನಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವರು ಇದುವರೆಗೂ ಬಂದಿರುವುದಿಲ್ಲ. ಇವನಿಗೆ 23 ವರ್ಷ ವಯಸ್ಸು, ಜಂಗಮರು, ಬಿಸಿಎ 3ನೇ ವರ್ಷದ ವಿದ್ಯಾರ್ಥಿ, 6 ಅಡಿ ಎತ್ತರ, ಗೋದಿ ಮೈ ಬಣ್ಣ, ಸದೃಢ ಮೈಕಟ್ಟು, ಗ್ರೇ ಕಲರ್ ಪಟ್ಟಾ ಪಟ್ಟಿ ಟೀ ಶರ್ಟ್, ಗ್ರೇ ಕಲರ್ ಪ್ಯಾಂಟ್ ಧರಿಸಿರುತ್ತಾರೆ. ಸೀಳು ತುಟಿಯ ಆಪರೇಷನ್ ಗುರುತು ಇದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆ ಬಲ್ಲ ಇವರ ಸುಳಿವು ಯಾರಿಗಾದರೂ ತಿಳಿದರೆ, ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.

**ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ಫೋ. : 08192 272012**
**ಪೊಲೀಸ್ ನಿರೀಕ್ಷಕರು, ದಾವಣಗೆರೆ ಬಡಾವಣೆ ಪೊಲೀಸ್ ಠಾಣೆ, ಫೋ. : 94808 03249**
**ಡಿವೈಎಸ್‌ಪಿ ನಗರ ಉಪವಿಭಾಗ ಕಛೇರಿ, ದಾವಣಗೆರೆ ಫೋ. : 08192 259213**
**ಎಸ್‌ಪಿ ಕಛೇರಿ ದಾವಣಗೆರೆ, ಫೋ. : 08192 253400, ಕಂಟ್ರೋಲ್ ರೂಂ. 08192 253100**

## ಶ್ರೀ ಹೊಯ್ಸಳ ವಿದ್ಯಾಸಂಸ್ಥೆ (ರಿ.) ನೇರ್ಲಿಗೆ, ದಾವಣಗೆರೆ ತಾಲ್ಲೂಕು

### ನೇಮಕಾತಿ ಪ್ರಕಟಣೆ

ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಕೆ.ಆರ್. ವೃತ್ತ ಬೆಂಗಳೂರು.ಇವರ ಆದೇಶ ಸಂಖ್ಯೆ : ಸಿ8 (4) ಶಾ.ಶಿ.ಅ.ಖಾ. ಹು.ಭ/ 58/2019-20 ದಿನಾಂಕ 07.02.2020 ಹಾಗೂ ಸಿ8(4) ಶಾ:ಶಿ:ಆ.ನೇ.ಅನು/30/2020-21 ದಿನಾಂಕ 09.02.2022ರ ಅನ್ವಯ ಮೇಲ್ಕಾಣಿಸಿದ ಸಂಸ್ಥೆಯ ಅಧೀನದಲ್ಲಿ ನಡೆಯುತ್ತಿರುವ ಶ್ರೀ ಮಂಜುನಾಥೇಶ್ವರ ಪ್ರೌಢಶಾಲೆ, ಆವರಗೆರೆ ದಾವಣಗೆರೆ ಉತ್ತರ ವಲಯ, ಇಲ್ಲಿ ಖಾಲಿ ಇರುವ ಕಲಾ ಸಹ ಶಿಕ್ಷಕರ (ಸಮಾಜ ವಿಜ್ಞಾನ) ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ಹುದ್ದೆಯ ವಿವರ | ವಿದ್ಯಾರ್ಹತೆ | ಅನುಮತಿಸಿದ ವಿಷಯ | ಮೀಸಲಾತಿ ಗುಂಪು | ಹುದ್ದೆಗಳ ಸಂಖ್ಯೆ | ಮಾಧ್ಯಮ | ವೇತನ ಶ್ರೇಣಿ |
|---|---|---|---|---|---|---|---|
| 1 | ಸಹ ಶಿಕ್ಷಕರು | ಬಿ.ಎ ಬಿ.ಇಡಿ | ಕಲಾ | ಪರಿಶಿಷ್ಟ ಪಂಗಡ (ಬ್ಯಾಕ್ ಲಾಗ್ ಹುದ್ದೆ) | 01 | ಕನ್ನಡ | 33450-62800 |

ಅರ್ಹ ಅಭ್ಯರ್ಥಿಗಳು ತಮ್ಮ ಸಂಪೂರ್ಣ ವಿವರಗಳೊಂದಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಗು 500/-ರೂ.ಗಳ ಹುಂಡಿ (ಡಿ.ಡಿ) ಯನ್ನು ರಾಷ್ಟ್ರೀಕೃತ ಬ್ಯಾಂಕಿನಲ್ಲಿ, ಕಾರ್ಯದರ್ಶಿಗಳು ಶ್ರೀ ಹೊಯ್ಸಳ ವಿದ್ಯಾಸಂಸ್ಥೆ (ರಿ) ನೇರ್ಲಿಗೆ, ದಾವಣಗೆರೆ ತಾಲ್ಲೂಕು ಇವರ ಹೆಸರಿನಲ್ಲಿ ಜೊತೆಗೆ ಲಗತ್ತಿಸಬೇಕು. ಈ ಪ್ರಕಟಣೆ ಪ್ರಕಟಗೊಂಡ 21 ದಿನಗಳೊಳಗಾಗಿ ಅರ್ಜಿಯನ್ನು ಸಂಸ್ಥೆಯ ಶಾಖಾ ಕಛೇರಿಯ ವಿಳಾಸ ಕಾರ್ಯದರ್ಶಿಗಳು ಶ್ರೀ ಹೊಯ್ಸಳ ವಿದ್ಯಾಸಂಸ್ಥೆ (ರಿ), ಡಿ.ಸಿ.ಎಂ ಟೌನ್ ಶಿಪ್, ದಾವಣಗೆರೆ-577003, ಈ ವಿಳಾಸಕ್ಕೆ ಸಲ್ಲಿಸತಕ್ಕದ್ದು. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಯ ಒಂದು ಪ್ರತಿಯನ್ನು ದಾಖಲೆ ಸಹಿತ ಮಾನ್ಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ಇವರಿಗೆ ಸಲ್ಲಿಸಬೇಕು. ಆಯ್ಕೆಯು ಇಲಾಖೆಯ ನಿಯಮಕ್ಕೆ ಒಳಪಟ್ಟಿರುತ್ತದೆ. ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು.

ಸಹಿ /-
ಕಾರ್ಯದರ್ಶಿಗಳು
ಸ್ಥಳ : ದಾವಣಗೆರೆ
ಶ್ರೀ ಹೊಯ್ಸಳ ವಿದ್ಯಾಸಂಸ್ಥೆ (ರಿ.) ನೇರ್ಲಿಗೆ, ದಾವಣಗೆರೆ ತಾಲ್ಲೂಕು

## ಪುನೀತ್ ರಾಜ್‌ಕುಮಾರ್ ಜನ್ಮದಿನ : ಅನ್ನ ಸಂತರ್ಪಣೆ



**ಹರಪನಹಳ್ಳಿ**

ಹರಪನಹಳ್ಳಿ, ಮಾ. 17- ಪಟ್ಟಣದ ಸುಣಗಾರಗೇರಿಯ ಗಂಗಾ ಪರಮೇಶ್ವರಿ ದೇವಸ್ಥಾನದ ಆವರಣದಲ್ಲಿ ಶಶಿಧರ್ ಪೂಜಾರ್ ಅಭಿಮಾನಿ ಬಳಗದ ವತಿಯಿಂದ ಕರ್ನಾಟಕ ರತ್ನ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಹುಟ್ಟು ಹಬ್ಬದ ಪ್ರಯುಕ್ತ ಅನ್ನ ಸಂತರ್ಪಣೆ ನಡೆಯಿತು.

ಈ ವೇಳೆ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್, ಪುರಸಭೆ ಸದಸ್ಯ ಲಾಟಿ ದಾದಾಪೀರ್, ವಿ.ಎಸ್. ಎಸ್.ಎನ್ ಅಧ್ಯಕ್ಷ ಟಿ.ಎಚ್.ಎಂ. ಮಂಜುನಾಥ, ಮುಖಂಡರುಗಳಾದ ಫಕ್ಕೀರಪ್ಪ, ಜಲಗಾರ ಕೊಟ್ರೇಶ್, ಹನುಮಂತಪ್ಪ, ರಿಯಾಜ್ ಅಹಮದ್, ಲಾಟಿ ಸಲೀಂ ಸೇರಿದಂತೆ ಇತರರು ಇದ್ದರು.

ಪಟ್ಟಣದ ಬಾಪೂಜಿ ನಗರದಲ್ಲಿ ಅಪ್ಪು ಅಭಿಮಾನಿ ಬಳಗ ಹಾಗೂ ದಲಿತ ಸಂಘರ್ಷ ಸಮಿತಿ ವತಿಯಿಂದ ಪುನೀತ್ ಅವರ ಹುಟ್ಟು ಹಬ್ಬವನ್ನು ಕೇಕ್ ಕತ್ತರಿಸಿ ಅದ್ಧೂರಿಯಾಗಿ ಆಚರಿಸಲಾಯಿತು.

ಬೃಹತ್ ಅಪ್ಪು ಕಟೌಟ್ ಗೆ ಹೂವಿನ ಸುರಿಮಳೆಗೈದು, ಕೇಕ್ ಕತ್ತರಿಸಿ ಹುಟ್ಟು ಹಬ್ಬಕ್ಕೆ ಶುಭ ಕೋರಿ ಅಪ್ಪು ಅಮರ್ ಹೈ ಎಂದು ಘೋಷಣೆ ಕೂಗಿದರು.

ನಂತರ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಕೈಗೊಳ್ಳಲಾಯಿತು. ಈ ವೇಳೆ ಡಿಎಸ್ ಎಸ್ ಜಿಲ್ಲಾಧ್ಯಕ್ಷ ಯಲ್ಲಪ್ಪ, ತಾಲ್ಲೂಕು ಅಧ್ಯಕ್ಷ ಸುಭಾಶ್, ಪ್ರಕಾಶ್, ಜೈರಾಜ್, ರಮೇಶ, ಲಿಂಗಪ್ಪ, ಮರಿಯಪ್ಪ, ಛತ್ರಪತಿ, ಎ.ನಿಂಗಪ್ಪ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಜೀವನ ಪರೀಕ್ಷೆ ಗೆಲ್ಲುವಂತಹ ಶಿಕ್ಷಣ ಇಂದಿನ ಅವಶ್ಯ

### ಎಂ.ಎಂ.ಶಿಕ್ಷಣ ಮಹಾವಿದ್ಯಾಲಯದ ದೀಪದಾನ ಕಾರ್ಯಕ್ರಮದಲ್ಲಿ ಎಚ್.ಬಿ.ಮಂಜುನಾಥ

ದಾವಣಗೆರೆ, ಮಾ. 17- ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತಹ ಶಿಕ್ಷಣವನ್ನು ಕೊಟ್ಟರೆ ಸಾಲದು, ಜೀವನ ಪರೀಕ್ಷೆಯಲ್ಲೂ ಗೆಲ್ಲುವಂತಹ ಶಿಕ್ಷಣವನ್ನು ಕೊಡಬೇಕಾಗಿದೆ ಎಂದು ಹಿರಿಯ ವ್ಯಂಗ್ಯ ಚಿತ್ರಕಾರ ಹೆಚ್. ಬಿ. ಮಂಜುನಾಥ ಹೇಳಿದರು.

ನಗರದ ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯದ ದೀಪದಾನ ಕಾರ್ಯಕ್ರಮದ ಮುಖ್ಯ ಅಭ್ಯಾಗತರಾಗಿ ಮಾತನಾಡಿದ ಅವರು, ಭಾವೀ ಶಿಕ್ಷಕರಾಗುವ ಇಂದಿನ ಪ್ರಶಿಕ್ಷಣಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಂಡರೆ ಸಾಲದು ವಿದ್ಯಾರ್ಥಿಗಳ ಭವಿಷ್ಯವನ್ನೂ ರೂಪಿಸಬೇಕು ಎಂದರು.

ಅಧ್ಯಾಪಕರುಗಳು ಪಠ್ಯದಲ್ಲಿರುವುದು ಇಷ್ಟೇ ಎಂದು ಸೀಮಿತಗೊಳ್ಳದೇ ಸಮಕಾಲೀನದ ವಿದ್ಯಮಾನಗಳನ್ನೂ ಉದಾಹರಿಸುತ್ತಾ ಪಾಠ ಮಾಡುವುದು ಸಾಧ್ಯವಿದೆ ಎಂದರು.

ವಿದ್ಯಾರ್ಥಿ ಸಂಘದ ಸಮಾರೋಪ ನುಡಿಗಳನ್ನಾಡಿದ ಕಾಲೇಜಿನ ಸ್ಥಳೀಯ ಸಲಹಾ ಸಮಿತಿ ಸದಸ್ಯ ಪ್ರೊ.ಎಸ್. ಹಾಲಪ್ಪ, ಸಂವಹನಾ ಸಾಮರ್ಥ್ಯ ಪಡೆಯದೇ ಯಶಸ್ವಿ ಅಧ್ಯಾಪಕರಾಗಲು ಸಾಧ್ಯವಿಲ್ಲ. ಇದಕ್ಕೆ ಜ್ಞಾನದೊಂದಿಗೆ ಭಾಷಾಪ್ರೌಢಿಮೆಯೂ ಬೇಕು. ಆಧುನಿಕವಾದ ಡಿಜಿಟಲ್ ತಂತ್ರಜ್ಞಾನವನ್ನು ಅಧ್ಯಾಪನದ ಗುಣಮಟ್ಟ ವೃದ್ಧಿಗೆ ಬಳಸಿಕೊಳ್ಳಬಹುದಾಗಿದೆ ಎಂದರು.



ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಪ್ರೊ. ಬಿ.ಸಿದ್ದಲಿಂಗಯ್ಯ, ಓರ್ವ ವೈದ್ಯನ ತಪ್ಪಿನಿಂದ ಒಂದು ಸಾವಾಗಬಹುದು, ಓರ್ವ ಇಂಜಿನಿಯರ್ ತಪ್ಪಿನಿಂದ ಒಂದು ನಿರ್ಮಾಣ ಬಿದ್ದು ಹೋಗಬಹುದು. ಆದರೆ, ಒಬ್ಬ ಉಪಾಧ್ಯಾಯನ ತಪ್ಪಿನಿಂದ ಒಂದು ಸಮಾಜವೇ ಹಾಳಾಗಬಹುದು, ಶಿಕ್ಷಕರ ಮೇಲೆ ಗುರುತರ ಜವಾಬ್ದಾರಿ ಇದ್ದು, ಮಾದರಿ ಶಿಕ್ಷಕರಾಗಬೇಕು ಎಂದರು ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಟಿ.ನಾಗರಾಜ್ ನಾಯ್ಕರವರು ದತ್ತಿ ನಿಧಿ ಬಹುಮಾನ ವಿತರಣೆ ನಡೆಸಿಕೊಟ್ಟರು.

ಮಂಜುಳಾ ಮತ್ತು ದೀಪಾ ನಿರೂಪಿಸಿದ ಕಾರ್ಯಕ್ರಮದಲ್ಲಿ ಪ್ರಾರ್ಥನೆಯನ್ನು ಅನುಷಾ ಮತ್ತು ಸಂಗಡಿಗರು ಹಾಡಿದರು. ಸ್ವಾಗತವನ್ನು ಸಹಾಯಕ ಪ್ರಾಧ್ಯಾಪಕ ಡಾ. ಹಾಲೇಶಪ್ಪ ಟಿ. ಕೋರಿದರು.

ಪ್ರಶಿಕ್ಷಣಾರ್ಥಿಗಳ ಅನಿಸಿಕೆಗಳನ್ನು ರಾಘವೇಂದ್ರ, ಭಾಗ್ಯಶ್ರೀ, ಅಮೃತ, ಕೃಷ್ಣವೇಣಿ ವ್ಯಕ್ತಪಡಿಸಿದರು. ದೀಪದಾನ ಪ್ರಮಾಣ ವಚನವನ್ನು ಸಹಾಯಕ ಪ್ರಾಧ್ಯಾಪಕರಾದ ಪ್ರೊ. ಡಾ. ಜಿ.ಎಂ. ಶಶಿಕಲಾ ನೆರವೇರಿಸಿಕೊಟ್ಟರು. ಸಹಾಯಕ ಪ್ರಾಧ್ಯಾಪಕ ಡಾ. ಸಂತೋಷ್ ಕುಮಾರ್ ಆರ್. ವಂದಿಸಿದರು.

## ರೇಣುಕಾಚಾರ್ಯ ಮೂರ್ತಿಗೆ ಅಭಿಷೇಕ



**ಹರಿಹರ**

ಹರಿಹರ, ಮಾ. 17 - ನಗರದ ದೇವಸ್ಥಾನ ರಸ್ತೆಯ ರೇಣುಕಾ ಮಂದಿರದಲ್ಲಿ ಶ್ರೀ ಜಗದ್ಗುರು ರೇಣುಕಾ ಚಾರ್ಯರ ಜಯಂತಿ ಆಚರಣೆ ನಿಮಿತ್ತವಾಗಿ ಬೆಳಗ್ಗೆ ರೇಣುಕಾಚಾರ್ಯ ಮೂರ್ತಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜೆ ನಂತರ ಅನ್ನ ಸಂತರ್ಪಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೊಂಡಜ್ಜಿ ಪಂಚಾಕ್ಷರಿ, ಮೂರ್ಕಲ್ ಜಯಣ್ಣ, ಸಮಳದ ಚಂದ್ರಪ್ಪ, ವೀರೇಂದ್ರ ಕೊಂಡಜ್ಜಿ, ರುದ್ರಮುನಿ, ರಾಚಪ್ಪ, ಹಾಲಪ್ಪ, ಹಾಲಸ್ವಾಮಿ, ವಜ್ರೇಶ್, ರೇಣುಕಾಸ್ವಾಮಿ, ಹೆಚ್.ಎಂ ಕುಮಾರ್ ಸ್ವಾಮಿ, ರೇಖಾ, ಶೈಲಾ, ವಿಶಾಲ, ನಿರ್ಮಲಾ, ಅನುಷಾ, ಜಯ್ಯಮ್ಮ ಜೈಮಾಲ, ವಿಜಯ ಮತ್ತಿತರರು ಉಪಸ್ಥಿತರಿದ್ದರು.

## ಉದಯ್‌ಕುಮಾರ್‌ಗೆ ಪಿಹೆಚ್‌ಡಿ ಪದವಿ



ಹಗರಿಬೊಮ್ಮನಹಳ್ಳಿ, ಮಾ. 17- ತಾಲ್ಲೂಕಿನ ಸೊನ್ನೆ ಗ್ರಾಮದವರಾದ ಪ್ರೊ. ಎಚ್.ಎಂ ಉದಯ್ ಕುಮಾರ್ ಅವರಿಗೆ ಬೆಂಗಳೂರು ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ.

ಪ್ರೊ. ಉದಯ್‌ಕುಮಾರ್ ಬೆಂಗಳೂರಿನ ಪ್ರತಿಷ್ಠಿತ ಎಂ.ಎಸ್.ರಾಮಯ್ಯ ತಾಂತ್ರಿಕ ಮಹಾ ವಿದ್ಯಾಲಯದಲ್ಲಿ ಆಂಗ್ಲ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರು ಬೆಂಗಳೂರು ಪ್ರೆಸಿಡೆನ್ಸಿ ಕಾಲೇಜಿನ ಪ್ರಾಧ್ಯಾಪಕ ಡಾ.ಇರ್ಷಾದ್ ಅವರ ಮಾರ್ಗದರ್ಶನದಲ್ಲಿ 'ದಿ ಇಂಪಾಕ್ಟ್ ಆಫ್ ಡಿಜಿಟಲ್ ವರ್ಕ್‌ಪ್ಲೇಸ್ ಆನ್ ಎಂಪ್ಲಾಯೀಸ್, ಪರ್ಫಾರ್ಮೆನ್ಸ್ ಇನ್ ಐಟಿ ಇಂಡಸ್ಟ್ರಿ' ವಿಷಯದ ಮೇಲೆ ಸಂಶೋಧನಾ ಪ್ರಬಂಧ ಮಂಡಿಸಿದ್ದರು.

## ಕಲಾವಿದ ಸಿ.ಎಚ್. ಉಮೇಶ್‌ಗೆ ಬಿರುದು



ದಾವಣಗೆರೆ, ಮಾ.17- ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದೊಡ್ಡಣ್ಣೆಗೆರೆ ಗ್ರಾಮದಲ್ಲಿ ಅಖಿಲ ಭಾರತ ಬಂಜಾರ ಯಾತ್ರಾ ಸ್ಥಳ ಪುಣ್ಯಕ್ಷೇತ್ರ ಸಮಿತಿಯಿಂದ ನಿನ್ನೆ ನಡೆದ ಶ್ರೀ ಭೀಮಾಸತಿ ತೀರ್ಥರಾಜ ಸ್ವಾಮೀಜಿಯವರ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ದಾವಣಗೆರೆಯ ಜನಪದ ಕಲಾವಿದ ಸಿ.ಎಚ್. ಉಮೇಶ್ ಅವರನ್ನು 'ಬಣಜಾರ ಗಾನಕೋಗಿಲೆ' ಬಿರುದು ನೀಡಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಪಿ. ರಾಮನಾಯ್ಕ ಹಾಗೂ ಕಾರ್ಯ ದರ್ಶಿ ರಘುನಾಥ ಹಾಗೂ ನಿರ್ದೇಶಕರಾದ ಈಶ್ವರ್ ನಾಯ್ಕ್ ಹಾಗೂ ಸಿದ್ದನಾಯ್ಕ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರೈತರು ಕಡಲೆ ಕೇಂದ್ರದ ಸದುಪಯೋಗ ಪಡೆದುಕೊಳ್ಳಬೇಕು : ಎಸ್.ವಿ.ಆರ್



**ಜಗಳೂರು**

ಜಗಳೂರು, ಮಾ.17- ತಾಲ್ಲೂಕಿನಲ್ಲಿ ಈ ವರ್ಷದಲ್ಲಿ ಕಡಲೆ ಬೆಳೆ ಉತ್ತಮ ಇಳುವರಿ ಬಂದಿದೆ. ಆದ್ದರಿಂದ ರೈತರ ಅನುಕೂಲಕ್ಕಾಗಿ ಸರ್ಕಾರ ಖರೀದಿ ಕೇಂದ್ರ ಆರಂಭಿಸಿ ಎಂದರು.

ಎಪಿಎಂಸಿ ಮಾರುಕಟ್ಟೆ ಆವರಣದಲ್ಲಿ ಕಡಲೆ ಖರೀದಿ ಕೇಂದ್ರದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಸರ್ಕಾರ ಕ್ವಿಂಟಾಲ್‌ಗೆ 5230 ರೂ ಬೆಂಬಲ ಬೆಲೆಯಲ್ಲಿ ಖರೀದಿಸಲಾಗುವುದು. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ರಾಗಿ ಖರೀದಿ ಸಂದರ್ಭದಲ್ಲಿ ಮಧ್ಯವರ್ತಿಗಳ ಹಾವಳಿ ಬಗ್ಗೆ ಬೇಸರ ವ್ಯಕ್ತಪಡಿಸಿದ ಶಾಸಕರು, ರೈತರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

## ಫಿಸಿಕ್ ಸ್ಪರ್ಧೆ : ಮಂಜುನಾಥ್ ಪ್ರಥಮ



ದಾವಣಗೆರೆ, ಮಾ. 17- ಈಚೆಗೆ ಚಂಡಿಘಡದಲ್ಲಿ ನಡೆದ ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಮಟ್ಟದ ಬೆಸ್ಟ್ ಫಿಜಿಕ್ಯೂ ಸ್ಪರ್ಧೆಯಲ್ಲಿ ಡಿ. ಮಂಜುನಾಥ್ 60 ಕೆಜಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ.

## ಇಂದು ಶ್ರೀ ಯೋಗಿ ನಾರೇಯಣ ಜಯಂತಿ

ಜಿಲ್ಲಾ ಬಲಿಜ ಸಂಘ ಹಾಗೂ ಟ್ರಸ್ಟ್ ವತಿಯಿಂದ ದಾವಣಗೆರೆಯ ಬಲಿಜ ಹಾಸ್ಟೆಲ್‌ನಲ್ಲಿ ಶ್ರೀ ಯೋಗಿ ನಾರೇಯಣ ಯತೀಂದ್ರರ ಜಯಂತ್ಯೋತ್ಸವವನ್ನು ಇಂದು ಆಚರಿಸಲಾಗುವುದು ಎಂದು ಸಮಾಜದ ಅಧ್ಯಕ್ಷರು ತಿಳಿಸಿದ್ದಾರೆ.

## ಶ್ರೀ ಕೃಷ್ಣ ಮಿತ್ರ ವೃಂದದವರಿಂದ ವಿಶೇಷ ಕಲಶ ಸೇವೆ



ದಾವಣಗೆರೆ, ಮಾ. 17- ನಗರದ ಶ್ರೀ ಕೃಷ್ಣ ಮಿತ್ರ ವೃಂದದವರ ವತಿಯಿಂದ ಶಿವರಾತ್ರಿ ಪ್ರಯುಕ್ತ ಎಂ.ಸಿ.ಸಿ 'ಎ' ಬ್ಲಾಕ್‌ನ ಶ್ರೀ ಕೃಷ್ಣ ಕಲಾ ಮಂದಿರದಲ್ಲಿ ಪ್ರಾರ್ಥನೆ, ಸಾಮೂಹಿಕ ಶಿವಭಜನೆ, ರುದ್ರದೇವರಿಗೆ ಎಳನೀರು ಅಭಿಷೇಕ, ನಿರಂತರ ಕನಕಾಭಿಷೇಕ, ಬಿಲ್ವಾರ್ಚನೆ ಸೇವೆ ಮಹಾಮಂಗಳಾರತಿ ನಡೆಯಿತು. ನಂತರ ಕಲಶ ಸೇವಾ ಕರ್ತರಿಗೆ ಅಭಿಷೇಕದ ಬಳಿಕ ಕಲಶ ವಿತರಣೆ ಮಾಡಲಾಯಿತು.

## ರಾಜರಾಜೇಶ್ವರಿ ಕಾಲೇಜಿನ 10 ವಿದ್ಯಾರ್ಥಿನಿಯರು ಬ್ಲೂ ಆಗಿ ಆಯ್ಕೆ



**ರಾಣೇಬೆನ್ನೂರು**

ರಾಣೇಬೆನ್ನೂರು, ಮಾ. 17- ಸ್ಥಳೀಯ ಕೆಎಲ್‌ಇ ಸಂಸ್ಥೆಯ ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರದ 2021-22 ನೇ ಸಾಲಿನಲ್ಲಿ ನಡೆದ ಖೋ-ಖೋ, ಬಾಲ್ ಬ್ಯಾಡ್ಮಿಂಟನ್ ಮತ್ತು ಅಥ್ಲೆಟಿಕ್‌ನಲ್ಲಿ ಒಟ್ಟು 10 ವಿದ್ಯಾರ್ಥಿನಿಯರು ಬ್ಲೂ ಆಗಿ ಹೊರಹೊಮ್ಮಿದ್ದಾರೆ.

ಕ್ರೀಡಾಪಟುವಿನ ಸಾಧನೆಗೆ ಸ್ಥಾನಿಕ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ವಿ. ಪಿ. ಲಿಂಗನಗೌಡ್ರು ಮತ್ತು ಸದಸ್ಯರಾದ ಬಿ.ಎಸ್.ಪಟ್ಟಣಶೆಟ್ಟಿ, ವೀರಣ್ಣ ಅಂಗಡಿ, ಜಿ.ಸಿ. ಹುಲಮನಿ, ಪ್ರಾಚಾರ್ಯ ಪ್ರೊ. ನಾರಾಯಣ ನಾಯಕ, ಕ್ರೀಡಾ ನಿರ್ದೇಶಕ ಸಿ.ಎಸ್. ಮಂಜಪ್ಪ ಅಭಿನಂದಿಸಿದ್ದಾರೆ.

## ಕೂಳೆ ಕಬ್ಬು ಬೆಳೆ ನಿರ್ವಹಣೆ : ಸಲಹೆ

ದಾವಣಗೆರೆ, ಮಾ.17- ವರದಾ ಕೃಷಿಕರ ವೇದಿಕೆಯ ಸೇವೆ ವತಿಯಿಂದ, ನಿವೃತ್ತ ಕೃಷಿ ಅಧಿಕಾರಿ ಆರ್.ಜಿ.ಗೊಲ್ಲರ್ ಅವರು ಕೂಳೆ ಕಬ್ಬು ಬೆಳೆ ನಿರ್ವಹಣೆ ಕುರಿತಂತೆ ಮಾಹಿತಿ ನೀಡಿದ್ದಾರೆ.

ಕಟಾವು ಆದ ತಕ್ಷಣ, ಟ್ರ್ಯಾಶ್ ಕಟ್ಟರ್ ಬಳಸಿ ರವದಿ ಪುಡಿ ಮಾಡಬೇಕು.

ಬೆಳೆಯ ಕೊನೆಯ ಸಾಲುಗಳಲ್ಲಿ ಇರುವ ಬುಡಗಳನ್ನು ಇಡಿಯಾಗಿ ಕಿತ್ತು, ಗ್ಯಾಪ್ ಇರುವಲ್ಲಿ (ಸಂಜೆ ಸಮಯ), ಸಾಕಷ್ಟು ನೀರುಣಿಸಿ ನೆಡಬೇಕು. ಈಗಾಗಲೇ ಬುಡ ಸವರಿದ ನಂತರ, ಕಂತುಗಳಲ್ಲಿ ರಸ ಗೊಬ್ಬರ ಬಳಕೆ (30:30:75 ಸಾರಂಪೊ, 30 ಸಾ@ 6 ವಾರ, 30 ಸಾ@ 10 ವಾರ, ಕೆಜಿ/ ಎ), ಜಿಪ್ಸಂ (200), ಜಿಂಕ್ ಸಲ್ಫೇಟ್ (5), ಬೋರಾನ್ (1) (ಕೆಜಿ/ಎ) ಕೊಡಬೇಕು.

ಸಾರಂಪೊ (ಶಿಫಾರಿತ ಪ್ರಮಾಣದಲ್ಲಿ ಒಟ್ಟಿಗೆ) ಮತ್ತು ಜಿಜಿಂಬೋ (ಶಿಫಾರಿತ ಪ್ರಮಾಣದಲ್ಲಿ ಒಟ್ಟಿಗೆ) ಪ್ರತ್ಯೇಕವಾಗಿ ನೇಗಿಲು ಸಾಲಿನಲ್ಲಿ ಕೊಡಬೇಕು ಮತ್ತು ಬೋದು ಏರಿಸಬೇಕು.

ಹಂತ ಹಂತವಾಗಿ ಎಡೆ ಹೊಡೆಯುವ , ಬೋದು ಏರಿಸುವ ಕಾರ್ಯ ಅತ್ಯಗತ್ಯ.

ಬುಡ ಸವರಿದ ಒಂದು ತಿಂಗಳಿಂದ ಆರಂಭಿಸಿ ಪ್ರತಿ 12-15 ದಿನಗಳ ಹಂತದಲ್ಲಿ ಪೋಷಕಾಂಶ ( 13:0:45 , 19:19:19 (ತಲಾ 3 - 5 ಗ್ರಾಂ/ಲೀ), ಲಘು ಪೋಷಕಾಂಶ ಸಿಂಪಡಣೆ ಅಗತ್ಯ.

ಪ್ರತಿ ಸಲ ನೀರುಣಿಸುವಾಗ ಸಗಣಿ ರಾಡಿ (ಆಯಾ ದಿನ ಸಂಗ್ರಹಿಸಿದ್ದು ಮಾತ್ರ) ಬಿಡಬೇಕು.

ಆರಂಭಿಕ ಸುಳಿ ಕೊರಕ ಹತೋಟಿಗೆ ಕ್ರಮ ಅಗತ್ಯ. ಕಾಡಿಗೆ ಮತ್ತು ನಂಜು ರೋಗ ಬಾಧಿತ ಬುಡಗಳನ್ನು ಕಿತ್ತು ನಾಶಪಡಿಸಬೇಕು. ಬಾಧಿತ ಪ್ರದೇಶ/ಬೆಳೆ ಉಪಚರಿಸಬೇಕು.

## ಪುನೀತ್ ರಾಜ್‌ಕುಮಾರ್ ಜನ್ಮ ದಿನ : ಅನ್ನ ಸಂತರ್ಪಣೆ



**ಮಲೇಬೆನ್ನೂರು**

ಮಲೇಬೆನ್ನೂರು, ಮಾ. 17- ಪಟ್ಟಣದ ಜ್ಯೋತಿ ಚಿತ್ರಮಂದಿರದಲ್ಲಿ 'ಜೇಮ್ಸ್' ಚಲನಚಿತ್ರ ಪ್ರದರ್ಶನ ಹಾಗೂ ನಟ ಪುನೀತ್ ರಾಜ್‌ಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಡಾ. ರಾಜ್‌ಕುಮಾರ್ ಮತ್ತು ಡಾ. ಶಿವರಾಜ್‌ಕುಮಾರ್ ಹಾಗೂ ಪುನಿತ್ ರಾಜ್‌ಕುಮಾರ್ ಅಭಿಮಾನಿ ಬಳಗದ ವತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ನಟ ಪುನೀತ್ ಅವರ ಭಾವಚಿತ್ರಕ್ಕೆ ಬಹಳ ವಿಶೇಷವಾಗಿ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು.

ಮಾಜಿ ಶಾಸಕ ಬಿ. ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಹರಿಹರ ತಾ. ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಹಿಂಡಸಘಟ್ಟಿ ಲಿಂಗರಾಜ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಬಿ. ಮಂಜುನಾಥ್, ಪಿ.ಆರ್. ರಾಜು, ಎಂ.ಕೆ. ಲೋಕೇಶ್, ಮುಖಂಡರಾದ ಕೆ.ಜಿ. ವೀರನಗೌಡ್ರು, ಜಿಗಳೇರ ಹಾಲೇಶಪ್ಪ, ಪಾಳೇಗಾರ ನಾಗರಾಜ್, ಬೆಣ್ಣೆಹಳ್ಳಿ ಬಸವರಾಜ್, ಕುಂಬಳೂರು ಅಶೋಕ್, ಕೊಮಾರನಹಳ್ಳಿ ಸುನೀಲ್, ಜಿ.ಪಿ. ಹನುಮಗೌಡ, ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದ ಕಿರಣ, ದೊರೆ, ಶಶಿ, ಶಿವು, ಕುಮಾರ, ರಾಮು, ಕಿಟ್ಟಿ, ಮಣಿಕಂಠ, ರಾಮಚಂದ್ರ, ಮೈಲಾರಿ ಮತ್ತಿತರರು ಭಾಗವಹಿಸಿದ್ದರು.

ನಂತರ ಪಿಡಬ್ಲ್ಯೂಡಿ ಶಾಲೆಯ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಿಸಲಾಯಿತು.

## ನಾಳೆ ಭಾವಸಾರ ದೈವ ಮಂಡಳಿಯ ಸಭೆ

ದಾವಣಗೆರೆ, ಮಾ.17– ನಗರದ ಮಹಾರಾಜಪೇಟೆ ಶ್ರೀ ವಿಠ್ಠಲ ಮಂದಿರದ ದಾವಣಗೆರೆ ಭಾವಸಾರ ಕ್ಷತ್ರಿಯ ದೈವಮಂಡಳಿ ನಂ.7 ರ ಸರ್ವಸದಸ್ಯರ ಮಹಾಸಭೆಯು ದಿನಾಂಕ 19 ರ ಶನಿವಾರ ಸಂಜೆ 5 ಗಂಟೆಗೆ ಶ್ರೀ ವಿಠ್ಠಲ ರುಕ್ಮಾಯಿ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಸಭೆಯಲ್ಲಿ ಮೂರು ವರ್ಷಗಳ ಲೆಕ್ಕಪತ್ರ ಹಾಗೂ ಮುಂದಿನ ಸಮಾಜದ ಕಾರ್ಯಗಳ ಅಭಿವೃದ್ಧಿ ಕುರಿತಂತೆ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

**ಸೈಟ್ ಮಾರಾಟಕ್ಕೆ (KHB)**
1) 30X40 ಉತ್ತರ, 24 ಲಕ್ಷಕ್ಕೆ
2) 30x40 ಉತ್ತರ, 23 ಲಕ್ಷಕ್ಕೆ
3) 30x40 ವೆಸ್ಟ್, 21 ಲಕ್ಷಕ್ಕೆ
4) 30x50 ಸೌತ್, 22 ಲಕ್ಷಕ್ಕೆ
5) 30x50 ಪೂರ್ವ, 26 ಲಕ್ಷಕ್ಕೆ
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಸೈಟು, ಮನೆ ಮಾರಾಟಕ್ಕೆ (ಹಳೆದು)**
ಸಿದ್ಧವಿರಪ್ಪ ಬಡಾವಣೆಯಲ್ಲಿ 30x40 ಪೂರ್ವ (30 ವರ್ಷ), 30x42 ದಕ್ಷಿಣ (25 ವರ್ಷ), 30x40 (ಸೈಟು) ಉತ್ತರ, 40x60 (ಪೂರ್ವ), 30x40 ದಕ್ಷಿಣ,
ಕಿರಣ್ ಬೂಸ್ನರ್ (ಏಜೆಂಟ್)
98440 63409, 97315 63409
[ದಾವಣಗೆರೆಯಲ್ಲಿ ಮನೆ, ಸೈಟು ಖರೀದಿಗೆ ಬೇಕೇ ವಿಚಾರಿಸಿ]

**ಬೇಕಾಗಿದ್ದಾರೆ**
ಸಸ್ಯಹಾರಿ ಹೋಟೆಲ್‌ಗೆ ಭಟ್ಟರು ಬೇಕಾಗಿದ್ದಾರೆ.
ಶಾಮನೂರು ರಸ್ತೆ, ದಾವಣಗೆರೆ.
ಮೊ. 97434-82356

**ಮನೆಗಳು ಬಾಡಿಗೆಗೆ / ಲೀಸ್‌ಗೆ ಇವೆ**
ಸಿಂಗಲ್ ಬೆಡ್ ರೂಂ, ಡಬಲ್ ಬೆಡ್ ರೂಂ, ವಿದ್ಯಾನಗರ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ವಾಚ್‌ಮ್ಯಾನ್ ಬೇಕಾಗಿದ್ದಾರೆ**
ದಾವಣಗೆರೆ ಲೋಕಿಕೆರೆ ಇಂಡಸ್ಟ್ರಿಯಲ್ ಏರಿಯಾದಲ್ಲಿ ವಾಚ್‌ಮ್ಯಾನ್ ಕೆಲಸಕ್ಕೆ ಬೇಕಾಗಿದ್ದಾರೆ. ಕುಟುಂಬದವರಿಗೆ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ.
94481 50174

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ನಿಮ್ಮ ಪೂರ್ವಜರ ಆಸ್ತಿ ಬಗ್ಗೆ**
ನಿಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಪೂರ್ವಜರ ಆಸ್ತಿಗಳಲ್ಲಿ ನಿಮ್ಮ ಹಕ್ಕುನ್ನು ಮರೆಮಾಚಿ ತಮ್ಮ ಹೆಸರಿಗಷ್ಟೇ ಮಾಡಿಸಿಕೊಂಡಿರತಕ್ಕ ಆಸ್ತಿಗಳಿಂದ ನಿಮಗೆ ಬರಬೇಕಾದ ಭಾಗ ಪಡೆಯಲು ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಜಮೀನು ಮಾರಾಟಕ್ಕಿದೆ**
ನೀರಾವರಿ ಜಮೀನು 10 ಎಕರೆ ಮಾರಾಟಕ್ಕಿದೆ. @ ಕುಣೆಬೆಳಕೆರೆ ಶಾಮನೂರಿನಿಂದ 12 ಕಿ.ಮೀ
@ Rs 30 ಲ್ಯಾಕ್ಸ್ / ಎಕರೆ
M: 76769 61630

**ಮನೆ ಬಾಡಿಗೆಗೆ ಇದೆ**
2 ಬೆಡ್‌ರೂಂ, 2 ಬಾತ್‌ರೂಂ, ಲಿಫ್ಟ್ ಇರುವ 2 ಮನೆಗಳು ಮಹಾಲಕ್ಷ್ಮಿ ಲೇಔಟ್‌ನ ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ಇವೆ. ಸಂಪರ್ಕಿಸಿ:
96388 17967
73380 43912

**ಇನ್‌ಚಾರ್ಜ್ ಬೇಕಾಗಿದ್ದಾರೆ.**
ಗೋಡೌನ್ ಇನ್‌ಚಾರ್ಜ್ ಬೇಕಾಗಿದ್ದಾರೆ. ನಿವೃತ್ತ ಬ್ಯಾಂಕ್ ನೌಕರರಿಗೆ ಆದ್ಯತೆ. ಸಂಪರ್ಕಿಸಿ.
94481 50174

**ಮನೆ ಮಾರಾಟಕ್ಕಿದೆ**
40x60 ನಿವೇಶನದಲ್ಲಿ 3 ಬೆಡ್ ರೂಂ RCC ಕಟ್ಟಡ, # 521, 'ಸಿರಿ' ಆಂಜನೇಯ ದೇವಸ್ಥಾನದ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ.
ಫೋ. : 94486 61467

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಮತ್ತು ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ.
ಸಂಬಳ : 7000, 8000, 8500.
ESI & PF ಸೌಲಭ್ಯವಿರುತ್ತದೆ.
63612 00513
63667 28552

**ಸಂಘ-ಸಂಸ್ಥೆಗಳ**
ಬೈಲಾ ನೋಂದಣಿ, ನವೀಕರಣ ಮತ್ತು ಆಡಿಟ್‌ಗಾಗಿ ಸಂಪರ್ಕಿಸಿ.
MEGHANA ASSOCIATES. (R)
99809 16126

**ತಕ್ಷಣ ಬೇಕಾಗಿದ್ದರೆ**
ಕೋರಿಯಾರ್ ಆಫೀಸ್ ನಲ್ಲಿ ಡೆಲಿವರಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 2 ವಿಲರ್ ಬೈಕ್ ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು ಇಂಗ್ಲಿಷ್ ಓದಲು, ಬರೆಯಲು ಬರಬೇಕು . ಮೂಲ ದಾಖಾಲಾತಿ ಗಳೊಂದಿಗೆ ಸಂಪರ್ಕಿಸಿ.
Call 98800 42597, 89711 19130
Whatsapp 7019983025

**ಚೆಕ್ ನೀಡಿ ವಂಚಿಸಿರುವ ಬಗ್ಗೆ**
ನಿಮ್ಮಿಂದ ಹಣ ಸಾಲ ಪಡೆದು ಭದ್ರತೆ ಬಗ್ಗೆ ಚೆಕ್ ನೀಡಿ ಈವರೆಗೂ ಮರಳಿ ಹಣ, ಬಡ್ಡಿ ನೀಡದೆ ವಂಚಿಸಿರುವ ಬಗ್ಗೆ ಸಂಪರ್ಕಿಸಿರಿ.
ಹೊನ್ನೂರಸ್ವಾಮಿ ವಾಂಜ್ರೆ
87926 04196

**ಬೇಕಾಗಿದ್ದಾರೆ**
ಓಲ್ಡೇಜ್ ಕೇರ್ ಸೆಂಟರ್‌ನಲ್ಲಿ ಕೆಲಸ ಮಾಡಲು ಗಂಡ - ಹೆಂಡತಿ & ಪುರುಷ & ಮಹಿಳೆ ಅಡುಗೆ ಭಟ್ಟರು ಬೇಕಾಗಿದ್ದಾರೆ. ಊಟ, ವಸತಿ ಇರುತ್ತದೆ.
89711 92936

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ. ಅನುಭವವುಳ್ಳ ನುರಿತ A.N.M ಮತ್ತು G.N.M. ಆದವರು ಮತ್ತು ಆಯಾಗಳು ಬೇಕಾಗಿದ್ದಾರೆ. ಈ ಕೆಳಗಿನ ಮೊಬೈಲ್ ನಂಬರ್‌ಗೆ ತಮ್ಮ ಬಯೋಡಾಟಾದೊಂದಿಗೆ ಸಂಪರ್ಕಿಸಿ.
M: 98450 35710

**HOUSE FOR RENT**
15x50 single bedroom house, ground floor with parking facility is at 5th Cross, K.B Extn Near Jayadeva Circle.
MOHAMMED IMTIAZ
90355 01898

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 'ಲಲಿತ ನಿಲಯ' #5628/C-18, 4ನೇ ಮೇನ್, 7 ನೇ ಕ್ರಾಸ್ ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸೋಲಾರ್, ಬೋರ್ ಹಾಗೂ ಕಾರ್ಪೋರೇಷನ್ ನೀರಿನ ಸೌಲಭ್ಯವಿದೆ.
90084 18081

**GPSTR, KPTCL COACHING**
ಹೊಸ ಬ್ಯಾಚ್‌ಗಳು ಪ್ರಾರಂಭ
ಸಮೃದ್ಧಿ ಕೋಚಿಂಗ್ ಅಕಾಡೆಮಿ, ಸೆಂಟ್‌ಪಾಲ್ ಕಾನ್ವೆಂಟ್ ರೋಡ್, ದಾವಣಗೆರೆ
63646 40296

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಹೊಸ ಜೀವನ**
ಲಿಂಗಾಯುತ 54 ವರ್ಷದ ವಿಧುರನಿಗೆ (ಹೆಂಡತಿ ಇಲ್ಲದಿರುವ), ಆರ್ಥಿಕವಾಗಿ ಸಬಲರಾಗಿರುವವರಿಗೆ, ವಿಧವೆ, ವಿಚ್ಛೇದಿತ ವಧು ಬೇಕಾಗಿದೆ. (ಮಕ್ಕಳಿದ್ದರೂ ನಡೆಯುತ್ತದೆ)
98807 29108

**ಸೈಟುಗಳು ಮಾರಾಟಕ್ಕಿವೆ**
ಸಿದ್ಧವೀರಪ್ಪ ಬಡಾವಣೆ 50x100 ಪೂರ್ವ, 50x50 ಪಶ್ಚಿಮ, 40x70 ದಕ್ಷಿಣ, 40x70 ದಕ್ಷಿಣ-ಪಶ್ಚಿಮ ಕಾರ್ನರ್.
ರಿಯಲ್ ಎಸ್ಟೇಟ್ ಏಜೆಂಟ್
86181 82332
(ಸೈಟು ಕೊಳ್ಳಲು, ಮಾರಲು ಸಂಪರ್ಕಿಸಿ)

**ನೇರ ಪರೀಕ್ಷೆಗಳು**
SSLC, PUC-ARTS / COMM / SCIENCE. BA, BCOM, MA, MCOM, MBA.
NTC: ನರ್ಸರಿ ಟೀಚರ್ ಟ್ರೆನಿಂಗ್. ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ.
ಸಂಪರ್ಕಿಸಿ : ಗಂಗೋತ್ರಿ ಎಜುಕೇಷನ್ ಟ್ರಸ್ಟ್ ಲಾಯರ್ ರೋಡ್, ದಾವಣಗೆರೆ.
86602 35013

**ಮನೆ ಬಾಡಿಗೆಗೆ**
1ನೇ ಫ್ಲೋರ್‌ನಲ್ಲಿ, 3 ಬೆಡ್ ರೂಂ ಹಾಗೂ 2 ಬೆಡ್ ರೂಂ, ಹೊಸ ಮನೆ, ವಿಳಾಸ : ಸಿದ್ಧವೀರಪ್ಪ ಬಡಾವಣೆ, 8 ನೇ ಕ್ರಾಸ್, ಡೋ. ನಂ. 1663/1-2, ಕಲ್ಪವೃಕ್ಷ, ದಾವಣಗೆರೆ.
ಸಂಪರ್ಕಿಸಿ : 70198 78789
(Pets Not Allowed)

**HOUSE FOR RENT**
2BHK House 1st Floor, Behind Indoor Stadium, S.S Layout, `B' Block Davanagere.
98446 44718
70190 50911

**GST Registration**
INCOME TAX cases, Audit and for Account Maintenances
MEGHANA ASSOCIATES (R)
99809 16126

**ಬೇಕಾಗಿದ್ದಾರೆ**
ಸೂಪರ್ ಮಾರ್ಕೆಟ್ ಕೆಲಸ-2, ಬೇಕರಿ ಕೌಂಟರ್-2, ಅನುಭವವಿರುವ ಬಿಲ್ಲಿಂಗ್ ಕ್ಲರ್ಕ್-2, ಡೆಲಿವರಿ ಬಾಯ್-2, ಯುವಕರು/ಯುವತಿಯರು ಬೇಕಾಗಿದ್ದಾರೆ.
ಎಸ್ & ಎಸ್ ಸೂಪರ್ ಮಾರ್ಕೆಟ್. ಹೈಟೆಕ್ ಹಾಸ್ಪಿಟಲ್ ರೋಡ್, ದಾವಣಗೆರೆ.
98441 07062

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ನ್ಯೂ ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ (ರಿ)**
ಸೇವೆಗಳು:
* 24 ಗಂಟೆ ಕೇರ್ ಟೇಕಿಂಗ್
* ಸ್ಪೆಷಲ್ ರೂಮ್ಸ್ ವಿತ್ ಅಟ್ಯಾಚ್ ಬಾತ್ ರೂಂ * ಶುಚಿ & ರುಚಿಯಾದ ಊಟ, ಇನ್ನೂ ಇತ್ಯಾದಿ ಸೇವೆಗಳನ್ನು ನೀಡಲಾಗವುದು.
ಮನೆಯಲ್ಲಿ ನೋಡಿಕೊಳ್ಳಲಾಗದ ಮತ್ತು ನಿವೃತ್ತಿ ಹೊಂದಿರುವ ವಯೋವೃದ್ಧರಿಗೆ ಮೇಲೆ ಸೂಚಿಸಿರುವ ಸೇವೆಗಳನ್ನು ನೀಡಿ, ಅವರಿಗೆ ಉತ್ತಮ ಆರೈಕೆ ಮಾಡಲಾಗವುದು. ಸಂಪರ್ಕಿಸಿ
89711 92936
76250 15036

**TO LET**
Office or Gowdown or Commercial Building for Rent 30 HP power speciality available Ground Floor & II Floor 20 sqft Opp. : Sub Register Office Behind Malabar Tyre, P.B. Road, Davangere.
98862 55308, 96111 14244

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**PRINCE COLLEGE**
DAVANGERE
SSLC, PUC, BA, B.Com, B.Sc, M.A, M.Com, M.Sc, B.Lib, B.Lisc, M.B.A, M.C.A, LL.B, Diploma, B.Tech., D. Farm & All Courses
77609 55550, 96200 28627

**WANTED TEACHER**
Play Group, LKG, UKG with Computer Knowledge
Little Millennium Pre School, Siddaveerappa Layout, Davangere.
Ph. : 83100 69167

**ENGLISH CLASS**
1st std to 9th std
Bruit Abacus and vedic Maths
Nijalingappa Badavane.
M:96201 53806

**WANTED**
1) Lab Technician- 2.
2) Recepionist- 2. Pooja Diagnostics and Health Care Center. 8th Main, 8th Cross, P.J Extn, DVG.
98443 26560, 08192 232075

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

## ಮಳಲ್ಕೆರೆಯಲ್ಲಿ ಹಿರಿಯರಿಗೆ ಸನ್ಮಾನ



ದಾವಣಗೆರೆ, ಮಾ.17- ತಾಲ್ಲೂಕಿನ ಮಳಲ್ಕೆರೆ ಗ್ರಾಮದ ಶ್ರೀ ಮಲ್ಲೇಶ್ವರ ನೀರು ಬಳಕೆದಾರರ ಸಹಕಾರ ಸಂಘದ ಹಿರಿಯ ಸದಸ್ಯರುಗಳಾದ ಪ್ರೊ. ಬಿ. ಆರ್. ಸಿದ್ದಲಿಂಗಯ್ಯ, ಡಾ|| ಸೋಮಶೇಖರಪ್ಪ, ಡಾ|| ಎಂ.ಜಿ ರಾಜಶೇಖರಪ್ಪ, ಮತ್ತು ಜಿ ವಿರೂಪಾಕ್ಷಪ್ಪ ಅವರುಗಳು ಸಂಘದ ಅಭಿವೃದ್ದಿಗೆ ಸಹಕಾರ, ಪ್ರೋತ್ಸಾಹ, ಮಾರ್ಗದರ್ಶನ ನೀಡುತ್ತಿದ್ದು, ಅವರನ್ನು ಅಮೂಲ್ಯ ರತ್ನಗಳನ್ನು ಗುರುತಿಸಿ ಸಂಘದ ಆಡಳಿತ ಮಂಡಳಿಯಿಂದ ನಿನ್ನೆ ಸನ್ಮಾನಿಸಲಾಯಿತು ಎಂದು ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ ಮಳಲಕೆರೆ ತಿಳಿಸಿದ್ದಾರೆ.

ಸಂಘದ ಅಧ್ಯಕ್ಷ ಜಿ. ಮುರಿಗೇಂದ್ರಪ್ಪ, ಉಪಾಧ್ಯಕ್ಷ ಎಂ.ಎಸ್. ನಾಗರಾಜ್, ಮುಖ್ಯಕಾರ್ಯನಿರ್ವಾಹಕ ಜಿ. ತಿಪ್ಪೇಸ್ವಾಮಿ, ನಿರ್ದೇಶಕರುಗಳಾದ ಎಸ್.ಎಸ್. ಸುರೇಶ್, ವೈ.ಜಿ. ಚಂದ್ರಶೇಖರಪ್ಪ, ಪಿ.ಡಿ. ಸೋಮಣ್ಣ, ನಾಗನಗೌಡ, ಜಿ.ಎಂ. ಗಿರೀಶ್, ಕೆ.ಸಿ. ಚಮನ್ ಸಾಬ್, ಶ್ರೀಮತಿ ಪಾರ್ವತಮ್ಮ, ಶ್ರೀಮತಿ ಜಿ. ಗಿರಿಜಮ್ಮ, ಬಿ. ಶ್ರೀನಿವಾಸ್ ಹಾಗು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಕೃಷಿ ವಿರೋಧಿ ಕಾಯ್ದೆ ವಾಪಸ್‌ಗೆ ಆಗ್ರಹಿಸಿ ವಿವಿಧ ಹಂತದ ಚಳವಳಿ

ದಾವಣಗೆರೆ, ಮಾ. 17- ರಾಜ್ಯದಲ್ಲೂ ಸಹ ಮೂರು ಕೃಷಿ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ, ಇದೇ ದಿನಾಂಕ 21 ರಂದು ಬೆಂಗಳೂರು ಚಲೋ, 22 ಮತ್ತು 23 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ, ಪರ್ಯಾಯ ಅಧಿವೇಶನ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ನುಲೇನೂರು ಶೇಖರಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ರಾಜ್ಯ ಸರ್ಕಾರವೇ ಎಂಎಸ್‌ಪಿ ಖಾತ್ರಿ ಮಾಡಲು ಒತ್ತಾಯಿಸಿ ರಾಗಿ, ಜೋಳ, ಭತ್ತವನ್ನು ಯಾವುದೇ ಮಿತಿ ಇಲ್ಲದೆ ಖರೀದಿ ಕೇಂದ್ರಗಳ ಮೂಲಕ ಖರೀದಿಸಲು ಆಗ್ರಹಿಸಿ, ವಿದ್ಯುತ್ ಖಾಸಗೀಕರಣ ಮಾಡದಂತೆ ಎಚ್ಚರಿಸಲು ಸಂಯುಕ್ತ ಹೋರಾಟ - ಕರ್ನಾಟಕ ಬೃಹತ್ ಕಾರ್ಯಕ್ರಮಗಳನ್ನು ಆಯೋಜಿಸಿದೆ ಎಂದರು.

ಕೇಂದ್ರ ಸರ್ಕಾರ ಈಗಾಗಲೇ ರೈತ ವಿರೋಧಿ ಕೃಷಿ ಕಾಯಿದೆಗಳನ್ನು ವಾಪಸ್ ಪಡೆದಿದೆ. ಆದರೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನಿರ್ದೇಶನದಂತೆ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿರುವ ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯನ್ನು ವಾಪಾಸ್ ಪಡೆದಿಲ್ಲ. ಇವೆರಡೂ ಕಾಯ್ದೆಗಳಲ್ಲದೇ ಜಾನುವಾರು ಹತ್ಯೆ ನಿಷೇಧ ಕಾಯ್ದೆ ಕೂಡ ರೈತ ವಿರೋಧಿಯಾಗಿದ್ದು, ಈ ಮೂರೂ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಬೃಹತ್ ಸಮಾವೇಶದ ಮೂಲಕ ಒತ್ತಾಯಿಸಲಾಗುವುದು ಎಂದು ಹೇಳಿದರು.

ರಾಜ್ಯ ಸರ್ಕಾರ ವಿದ್ಯುತ್ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಕೃಷಿ ಪಂಪ್‌ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸಲು ಮುಂದಾಗಿತ್ತು. ರೈತರ ವಿರೋಧದಿಂದ ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಈಗ ಮತ್ತೆ ಸ್ಮಾರ್ಟ್ ಮೀಟರ್ ವಿಷಯ ಪ್ರಸ್ತಾಪ ಮಾಡುತ್ತಿದೆ. ಯಾವುದೇ ಕಾರಣಕ್ಕೂ ಕೃಷಿ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸಬಾರದು ಎಂದು ಆಗ್ರಹಿಸಿದರು.

ದಾವಣಗೆರೆ - ಚಿತ್ರದುರ್ಗ - ತುಮಕೂರು-ಬೆಂಗಳೂರು ನೇರ ರೈಲು ಮಾರ್ಗ ಯೋಜನೆಗೆ ಸರ್ಕಾರ ಬಜೆಟ್‌ನಲ್ಲಿ ಅನುದಾನ ನೀಡಿಲ್ಲ. ಕೂಡಲೇ ಅನುದಾನ ನೀಡಬೇಕು. ಉತ್ತರ ಭಾರತದಲ್ಲಿ ರೈಲ್ವೆ ಯೋಜನೆಗೆ ರಾಜ್ಯ ಸರ್ಕಾರಗಳು 13,500 ಕೋಟಿ ರೂ. ಅನುದಾನ ನೀಡಿವೆ. ದಕ್ಷಿಣ ಭಾರತದಲ್ಲಿ ಅತಿ ಕಡಿಮೆ ಅನುದಾನ ನೀಡುತ್ತಿದೆ ಎಂದು ತಿಳಿಸಿದರು.

ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬುಳ್ಳಾಪುರದ ಹನುಮಂತಪ್ಪ ಮಾತನಾಡಿ, ಸಮರ್ಪಕ ವಿದ್ಯುತ್ ಪೂರೈಸಬೇಕು. ಟ್ರಾನ್ಸ್‌ಫಾರ್ಮರ್ ಸುಟ್ಟರೆ ಬದಲಾಯಿಸಿಕೊಡಬೇಕು. ಇಲ್ಲವಾದಲ್ಲಿ ಕಾರ್ಯಪಾಲಕ ಇಂಜಿನಿಯರ್ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕೆ.ಎಲ್. ಪ್ರಸಾದ್, ಈಚಘಟ್ಟ ಚನ್ನಬಸಪ್ಪ, ಕೊಗ್ಗನೂರು ಹನುಮಂತಪ್ಪ, ಚನ್ನಗಿರಿ ಕರಿಬಸಪ್ಪ, ಈಚಘಟ್ಟ ಕರಿಬಸಪ್ಪ ಮತ್ತಿತರರಿದ್ದರು.

> ರಾಜ್ಯದ ಹನ್ನೆರಡು ಜಿಲ್ಲೆಗಳ ಮಳೆಯಾಶ್ರಿತ ಪ್ರದೇಶದಲ್ಲಿ ಬೆಳೆಯುತ್ತಿರುವ ಮೆಕ್ಕೆಜೋಳವನ್ನು ರಾಜ್ಯ ಸರ್ಕಾರ ಕೂಡಲೇ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಬೇಕು. ಬೆಲೆ ಯೋಜನೆಗೆ ಕಾನೂನು ಮಾನ್ಯತೆ ನೀಡಬೇಕು.
>
> **- ಟಿ. ನುಲೇನೂರು ಶೇಖರಪ್ಪ,** ಪ್ರಧಾನ ಕಾರ್ಯದರ್ಶಿ, ರಾಜ್ಯ ರೈತ ಸಂಘ

> ಕೃಷಿ ಪಂಪ್‌ಸೆಟ್‌ಗಳಿಗೆ 8 ತಾಸು ವಿದ್ಯುತ್ ಪೂರೈಸಬೇಕು. ಚನ್ನಗಿರಿ ಸೇರಿದಂತೆ ಹಲವೆಡೆ ಮೂರು-ನಾಲ್ಕು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡದ ಕಾರಣ ಅಡಿಕೆ ತೋಟಗಳನ್ನು ಉಳಿಸಿಕೊಳ್ಳಲು ಆಗುತ್ತಿಲ್ಲ. ತರಕಾರಿ ಬೆಳೆಯುವುದೇ ಕಷ್ಟವಾಗುತ್ತಿದೆ.
>
> **-ಬುಳ್ಳಾಪುರದ ಹನುಮಂತಪ್ಪ,,** ಪ್ರಧಾನ ಕಾರ್ಯದರ್ಶಿ, ಜಿಲ್ಲಾ ರೈತ ಸಂಘ

## ದಿನೇಶ್ ಕೆ.ಶೆಟ್ಟಿ ಜನ್ಮ ದಿನ : ಸೇವಾ ಕಾರ್ಯಕ್ರಮ



ದಾವಣಗೆರೆ, ಮಾ. 17- ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರ ಹುಟ್ಟುಹಬ್ಬದ ಅಂಗವಾಗಿ ದಿನೇಶ್ ಕೆ. ಶೆಟ್ಟಿ ಅಭಿಮಾನಿ ಬಳಗದಿಂದ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಪಿ.ಜೆ. ಬಡಾವಣೆ 5 ನೇ ಕ್ರಾಸ್‌ನಲ್ಲಿ ಸಿದ್ದಗಂಗಾಶ್ರೀ ಸ್ವಯಂ ಪ್ರೇರಿತ ರಕ್ತ ಕೇಂದ್ರ ಮತ್ತು ವಿಭಜನಾ ಘಟಕದ ಸಹಯೋಗ ದೊಂದಿಗೆ ರಕ್ತದಾನ ಶಿಬಿರ ಉದ್ಘಾಟನೆ ಮಾಡಿದರು. ಶ್ರೀ ಓಂಕಾರ ಹುಚ್ಚನಾಲಿಂಗಸ್ವಾಮಿ ಅನಾಥ ಸೇವಾಶ್ರಮದ ಮಕ್ಕಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

ವನಿತಾ ಸಮಾಜದ ವೃದ್ಧಾಶ್ರಮದ ಹಿರಿಯರಿಗೆ ಹಣ್ಣು - ಹಂಪಲು ವಿತರಿಸಲಾಯಿತು. ಹಿರಿಯ ವನಿತೆಯರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅಲ್ಲದೇ, ವಿಕಲಚೇತನರಿಗೆ ವ್ಹೀಲ್ ಚೇರ್ ವಿತರಣೆ ಮಾಡಲಾಯಿತು. ಪಾಲಿಕೆಯ ಮಾಜಿ ವಿರೋಧ ಪಕ್ಷದ ನಾಯಕರಾದ ಎ. ನಾಗ ರಾಜ್, ಎನ್. ಜಿ. ಪುಟ್ಟಸ್ವಾಮಿ, ಎಸ್. ಮಲ್ಲಿಕಾ ರ್ಜುನ್, ಬುನಿಯನ್ ಭಾಸ್ಕರ್, ವಾರ್ಡ್ ಮುಖಂಡ ರಾದ ಪಂಚಪ್ಪ ತೆರದಾಳ್, ಪರಸಪ್ಪ, ಮಧು ಪವಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ತಿಪ್ಪೇರುದ್ರಸ್ವಾಮಿ ರಥೋತ್ಸವಕ್ಕೆ 60 ಹೆಚ್ಚುವರಿ ವಿಶೇಷ ಬಸ್

ದಾವಣಗೆರೆ, ಮಾ.17- ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯಲ್ಲಿ ನಾಡಿದ್ದು ದಿನಾಂಕ 20ರ ಭಾನುವಾರ ಜರುಗಲಿರುವ ಶ್ರೀ ಗುರು ತಿಪ್ಪೇರುದ್ರಸ್ವಾಮಿ ರಥೋತ್ಸವಕ್ಕೆ ಭಕ್ತಾದಿಗಳ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ನಿಗಮವು ದಾವಣಗೆರೆ ವಿಭಾಗದ ವಿವಿಧ ಘಟಕಗಳಿಂದ 60 ಹೆಚ್ಚುವರಿ ವಿಶೇಷ ಬಸ್‌ಗಳನ್ನು ಓಡಿಸಲಿದೆ ಎಂದು ವಿಭಾಗಿಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

# ದುಗ್ಗಮ್ಮನ ಜಾತ್ರೆ : ಇಂದಿನಿಂದ ಜಟ್ಟಿಗಳ ಕಾದಾಟ

ದಾವಣಗೆರೆ, ಮಾ.17- ನಾಳೆ 18 ರಿಂದ ಮೂರು ದಿನಗಳ ಕಾಲ ದುಗ್ಗಮ್ಮನ ಜಾತ್ರೆಯ ಅಂಗವಾಗಿ ನಗರದ ಶ್ರೀ ಬೀರಲಿಂಗೇಶ್ವರ ವ್ಯಾಯಾಮ ಶಾಲೆ ಅಖಾಡದಲ್ಲಿ ಪ್ರಸಿದ್ಧ ಪೈಲ್ವಾನರುಗಳಿಂದ ಜಂಗೀ ಕುಸ್ತಿಗಳು ನಡೆಯಲಿವೆ. ಎರಡು ಕೆ.ಜಿ. ತೂಕದ ಬೆಳ್ಳಿ ಗದೆಗಾಗಿ ಕುಸ್ತಿ ಕಲಿಗಳು ಕಾದಾಡಲಿದ್ದು, ಕುಸ್ತಿ ಪ್ರೇಮಿಗಳಿಗೆ ರಸದೌತಣ ನೀಡಲಿದ್ದಾರೆ. ಅಲ್ಲದೇ ದುರ್ಗಾಂಬಿಕಾ ದೇವಸ್ಥಾನದ ಮುಂಭಾಗದಲ್ಲಿರುವ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಾಳೆಯಿಂದ ಆರಂಭವಾಗಲಿವೆ.

ನಿನ್ನೆ ಬಲಿ ಪೂಜೆ ನಂತರ ದುಗ್ಗಮ್ಮನಿಗೆ ಕುರಿ-ಕೋಳಿಗಳನ್ನು ಬಲಿ ನೀಡಿ, ಮನೆಗಳಿಗೆ ಬಂದಂತಹ ಅತಿಥಿ, ಅಭ್ಯಾಗತರಿಗೆ ಬಾಡೂಟದ ವ್ಯವಸ್ಥೆ ಮಾಡಿ, ಸಂತುಷ್ಟಗೊಳಿಸಲಾಗಿತ್ತು. ಇಂದು ಗುರುವಾರವೂ, ಬಂಧುಗಳು ಮತ್ತು ಅತಿಥಿಗಳಿಗೆ ಭರ್ಜರಿ ಭೋಜನದ ವ್ಯವಸ್ಥೆ ಬಹಳಷ್ಟು ಮನೆಗಳಲ್ಲಿ ಮುಂದುವರೆದಿತ್ತು.

ಹಬ್ಬಕ್ಕೆ ಬಂದಿರುವ ನೆಂಟರು, ಅಮ್ಮನ ದರ್ಶನ ಪಡೆಯದೇ ಇದ್ದ ಬಹಳಷ್ಟು ಭಕ್ತರು ಇಂದು ದೊಡ್ಡ ಸರತಿ ಸಾಲಲ್ಲಿ ನಿಂತು ಅಮ್ಮನಿಗೆ ಹೂವು, ಬಳೆ, ಉಡಕ್ಕಿ ಸಲ್ಲಿಸಿ, ಹಣ್ಣು-ಕಾಯಿ ಮಾಡಿಸಿ ದರುಶನ ಪಡೆದರು.

ಅಲ್ಲದೇ ಜಾತ್ರಾ ವಹಿವಾಟು ಪೂರ್ಣ ಪ್ರಮಾಣದಲ್ಲಿ ಆರಂಭವಾಗಿದ್ದು, ಪರಸ್ಥಳಗಳಿಂದ ಬಂದಿರುವ ಜನರು ಜಾತ್ರೆಯಲ್ಲಿ ಸುತ್ತು ಹಾಕುತ್ತಾ, ತಮಗೆ ಬೇಕಾದ ವಸ್ತುಗಳ ಖರೀದಿಯಲ್ಲಿ ನಿರತರಾಗಿದ್ದರು. ಹಬ್ಬಕ್ಕೆ ಬಂದಿದ್ದ ಬಹಳಷ್ಟು ಜನರು ತಮ್ಮ ತಮ್ಮ ಊರುಗಳಿಗೆ ಮರಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಶಿವಾಜಿನಗರದ ದುರ್ಗಾಂಬಿಕಾ ದೇವಸ್ಥಾನದ ಸುತ್ತ, ಹಳೇಪೇಟೆ, ಹಗೇದಿಬ್ಬ ಸರ್ಕಲ್, ಕನ್ನಿಕಾ ಪರಮೇಶ್ವರಿ ರಸ್ತೆ, ದೊಡ್ಡ ಪೇಟೆ, ಹೊಂಡದ ಸರ್ಕಲ್‌ವರೆಗೂ ಜಾತ್ರಾ ಮಳಿಗೆಗಳು, ತಳ್ಳು ಗಾಡಿಗಳು, ರಸ್ತೆ ಬದಿಗಳಲ್ಲಿ ವಿವಿಧ ಪೂಜಾ ಸಾಮಾನುಗಳು, ಬಳೆಗಳು, ಅರಿಶಿಣ ಕುಂಕುಮ, ಫ್ಯಾನ್ಸಿ ಸರ, ಬಳೆಗಳು, ಕಿವಿಯೋಲೆ, ರಿಬ್ಬನ್, ಬಗೆ ಬಗೆಯ ಆಟಿಕೆಗಳು ಸೇರಿದಂತೆ ಅನೇಕ ತಿಂಡಿ-ತಿನಿಸುಗಳ ಅಂಗಡಿಗಳು ಆರಂಭವಾಗಿದ್ದು, ಭರ್ಜರಿ ವಹಿವಾಟು ನಡೆಸುವ ನಿರೀಕ್ಷೆಯಲ್ಲಿವೆ.

## ಚಿತ್ರಮಂದಿರದ ಮೇಲೆ ರಷ್ಯಾ ದಾಳಿ

**(1ನೇ ಪುಟದಿಂದ)** ತಿಳಿಸಿದ್ದಾರೆ. ರಷ್ಯಾ ಫಿರಂಗಿ ದಾಳಿ ನಡೆಸಿದ್ದು ಹಲವಾರು ನಾಗರಿಕ ಕಟ್ಟಡಗಳ ಮೇಲೆ ದಾಳಿ ನಡೆಸಿದೆ. ಇಂತಹ ದಾಳಿಗೆ ಗುರಿಯಾದ ಮರಿಯುಪೊಲ್ ನಗರದ ಚಿತ್ರಮಂದಿರ ಧ್ವಂಸವಾಗಿದೆ. ಕೆಲವರು ಚಿತ್ರಮಂದಿರದಿಂದ ಹೊರ ಬಂದು ಜೀವ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮೂರು ಅಂತಸ್ತಿನ ಚಿತ್ರ ಮಂದಿರ ದಾಳಿಗೆ ಸಿಲುಕಿ ಸಂಪೂರ್ಣವಾಗಿ ಕುಸಿದಿದೆ. ನೂರಾರು ಜನರು ಈ ಕಟ್ಟಡದ ನೆಲಮಾಳಿಗೆಯಲ್ಲಿ ಆಶ್ರಯ ಪಡೆದಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಗರದ ಈಜುಕೊಳ ಸಂಕೀರ್ಣದ ಮೇಲೂ ದಾಳಿ ನಡೆಸಲಾಗಿದೆ. ಇಲ್ಲಿ ಮಹಿಳೆಯರು ಹಾಗೂ ಮಕ್ಕಳು ರಕ್ಷಣೆ ಪಡೆದಿದ್ದರು. ಅವಶೇಷಗಳಡಿ ಗರ್ಭಿಣಿ ಮಹಿಳೆಯರೂ ಸಿಲುಕಿಕೊಂಡಿದ್ದಾರೆ. ಸಾವು ನೋವಿಗೆ ಸಿಲುಕಿದವರ ಸಂಖ್ಯೆ ಸ್ಪಷ್ಟವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದರೆ ಚಿತ್ರಮಂದಿರ ಸೇರಿದಂತೆ ಮರಿಯುಪೊಲ್‌ನ ಎಲ್ಲೂ ದಾಳಿ ನಡೆಸಿಲ್ಲ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಹೇಳಿದೆ.

## ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಮಳಿಗೆಗಳಿಗೆ ಅವಕಾಶ

ದಾವಣಗೆರೆ, ಮಾ.17- ತಾಲ್ಲೂಕಿನ ಎಲೆಬೇತೂರಿನಲ್ಲಿ ಇದೇ ದಿನಾಂಕ 26 ಮತ್ತು 27 ರಂದು ನಡೆಯಲಿರುವ ದಾವಣಗೆರೆ ಜಿಲ್ಲಾ 11 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಮಾರಾಟ ಮಳಿಗೆಗಳಿಗೆ ಅವಕಾಶ ಕಲ್ಪಿಸಿಕೊಡಲಾಗುವುದು ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ತಿಳಿಸಿದ್ದಾರೆ.

ಪುಸ್ತಕ ಮಾರಾಟ ಮಳಿಗೆಗಳು ಮತ್ತು ಇನ್ನಿತರೆ ಮಳಿಗೆಗಳನ್ನು ಹಾಕಲು ಇಚ್ಚಿಸುವವರು ಇದೇ ದಿನಾಂಕ 22 ರೊಳಗಾಗಿ ನೋಂದಾಯಿಸಿಕೊಳ್ಳಬೇಕು. ಬೇರೆ ವ್ಯವಹಾರಿಕ ಮಳಿಗೆಗಳಿಗೂ ಅವಕಾಶವಿರುತ್ತದೆ. ವಿವರಕ್ಕೆ ಹೆಚ್.ಎಸ್.ಚೇತನ್‌ಕುಮಾರ್ (8050401090), ಬಿ.ಎಸ್. ಗಿರೀಶ್ (9620380588) ಅವರನ್ನು ಸಂಪರ್ಕಿಸುವಂತೆ ಬಿ.ವಾಮದೇವಪ್ಪ ತಿಳಿಸಿದ್ದಾರೆ.

## ಸಿರಿಧಾನ್ಯ ಪ್ರೋತ್ಸಾಹ ಧನ ಮುಂದುವರೆಸಲು ಒತ್ತಾಯ

ಬೆಂಗಳೂರು, ಮಾ. 17 - ಸಿರಿಧಾನ್ಯ ಬೆಳೆಯುವ ರೈತರಿಗೆ ನೀಡುತ್ತಿದ್ದ ಪ್ರೋತ್ಸಾಹ ಧನವನ್ನು ಸರ್ಕಾರ ಮುಂದುವರೆಸಬೇಕು ಎಂದು ಕಾಂಗ್ರೆಸ್‌ನ ಕೃಷ್ಣಭೈರೇಗೌಡ ವಿಧಾನಸಭೆಯಲ್ಲಿಂದು ಒತ್ತಾಯಿಸಿದ್ದಾರೆ.

ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರವಿದ್ದಾಗ ಪ್ರತಿ ಹೆಕ್ಟೇರ್‌ಗೆ 10 ಸಾವಿರ ರೂ. ಆರ್ಥಿಕ ನೆರವು ನೀಡುತ್ತಿತ್ತು, ಈಗ ಅದನ್ನು ನಿಲ್ಲಿಸಲಾಗಿದೆ, ಇದು ಸರಿಯಲ್ಲ ಎಂದರು.

ಒಣ ಬೇಸಾಯ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು, ಕೃಷಿ ಹೊಂಡ ನಿರ್ಮಾಣ ಅಂತರ್ಜಲವೃದ್ಧಿಗೆ ಸಹಕಾರಿಯಾಗಿತ್ತು, ಅದನ್ನೂ ನಿಲ್ಲಿಸಲಾಗಿದೆ, ಇವುಗಳನ್ನೂ ಮುಂದುವರೆಸಬೇಕು, ಸಿರಿಧಾನ್ಯ ಮೇಳಗಳ ಮೂಲಕ ಮಾರುಕಟ್ಟೆ ಸೌಲಭ್ಯ ಕಲ್ಪಿಸಬೇಕು, ಹನಿ ನೀರಾವರಿ ಹಾಗೂ ತುಂತುರು ನೀರಾವರಿಗೆ ನೀಡುವ ಸಹಾಯಧನವನ್ನು ಹೆಚ್ಚಿಸಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲ್, ಅಧಿಕಾರಿಗಳೊಂದಿಗೆ ಚರ್ಚಿಸಿ, ಸಿರಿಧಾನ್ಯ ಮೇಳ ಆಯೋಜಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

## ನಗರದಲ್ಲಿ ನಾಡಿದ್ದು ರಕ್ತ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ಲಭ್ಯ

ದಾವಣಗೆರೆ, ಮಾ. 17 - ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಮೂರು ದಶಕಗಳಿಂದ ಅನುವಂಶಿಕ ರಕ್ತಸ್ರಾವ ರೋಗಿಗಳ ಚಿಕಿತ್ಸೆ ಮತ್ತು ಪುನರ್ ವಸತಿಗಾಗಿಯೇ ವ್ಯವಸ್ಥೆಗೊಳಿಸಿರುವ ಸೌಲಭ್ಯಗಳನ್ನು ಇತರೆ ರೋಗಿಗಳಿಗೂ ದೊರಕಿಸುವ ಹಂಬಲದಿಂದ ಇದೇ ದಿನಾಂಕ 20 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ಸೊಸೈಟಿಯ ಆವರಣದಲ್ಲಿ ರಕ್ತ ಹೀನತೆ, ರಕ್ತ ಉತ್ಪತ್ತಿಯ ವ್ಯತ್ಯಯ ರೋಗಗಳು ಮತ್ತು ರಕ್ತ ಕ್ಯಾನ್ಸರ್ ರೋಗಿಗಳಿಗೆ ತಮ್ಮ ವೈದ್ಯಕೀಯ ಸೇವೆ ನೀಡಲಾಗುವುದು.

ಬೆಂಗಳೂರಿನ ಸಂತ ಜಾನ್ಸ್ ಮೆಡಿಕಲ್ ಕಾಲೇಜಿನ ವೈದ್ಯರೂ, ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಸ್ವಯಂ ಸೇವಕರೂ ಆಗಿರುವ ಡಾ. ಸೀತಾರಾಮ್ ಅವರು ಚಿಕಿತ್ಸೆ ನೀಡಲಿದ್ದಾರೆ ಎಂದು ಸೊಸೈಟಿಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಜಿ.ಸಿ. ಸದಾಶಿವಪ್ಪ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 77952-87877.

## ನಗರಕ್ಕೆ ಇಂದು ಕೋಡಿಹಳ್ಳಿ ಶ್ರೀಗಳು, ಬರಗೂರು ರಾಮಚಂದ್ರಪ್ಪ





ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಮಟ್ಟದ ಪದಾಧಿಕಾರಿಗಳ, ಕಾರ್ಯಕರ್ತರ ಸಮಾವೇಶ (ದಾವಣಗೆರೆ ಚಲೋ) ಇಂದು ಮತ್ತು ನಾಳೆ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂದಿರದಲ್ಲಿ ನಡೆಯಲಿದೆ.

ಇಂದು ಮಧ್ಯಾಹ್ನ 12 ಗಂಟೆಗೆ ನಡೆಯುವ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ (ಮೈಸೂರು), ಶ್ರೀ ಷಡಕ್ಷರಿ ಮುನಿ ದೇಶೀಕೇಂದ್ರ ಮಹಾಸ್ವಾಮೀಜಿ (ಕೋಡಿಹಳ್ಳಿ) ವಹಿಸುವರು.

ಕಾರ್ಯಕ್ರಮವನ್ನು ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟಿಸುವರು. ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಎಸ್.ಎಸ್. ಮಲ್ಲಿಕಾರ್ಜುನ್, ಮಹಾಂತೇಶ ಬೀಳಗಿ, ಮುಂಡರಗಿ ನಾಗರಾಜ್, ಹೂಡಿ ಮಂಜುನಾಥ್ ಆಗಮಿಸುವರು. ಬಿ.ಎನ್. ಗಂಗಾಧರಪ್ಪ, ಹನುಮಂತಪ್ಪ, ಎಸ್.ಪಕ್ಕೀರಪ್ಪ ಮುಂಡಗೋಡ, ಶ್ರೀಮತಿ ರತ್ನಮ್ಮ ಜೀವಿಕ ಉಪಸ್ಥಿತರಿರುವರು.

ಇಂದು ಮಧ್ಯಾಹ್ನ 3 ಗಂಟೆಗೆ 'ಚರಿತ್ರೆಯ ಕಣ್ಣಲ್ಲಿ ದಲಿತರು' ಕುರಿತು ಗೋಷ್ಠಿ ನಡೆಯುವುದು. ವಿಷಯ ಮಂಡನೆ : ವಿ.ಎಲ್. ನರಸಿಂಹಮೂರ್ತಿ. ಅಧ್ಯಕ್ಷತೆ : ಮಂಜಣ್ಣ. ಪ್ರತಿಕ್ರಿಯೆ : ಆರಡಿ ಮಲ್ಲಯ್ಯ.

ಸಂಜೆ 4 ಗಂಟೆಗೆ 'ಪ್ರೊ. ಬಿ. ಕೃಷ್ಣಪ್ಪ ಮತ್ತು ದಲಿತ ಚಳವಳಿ ಹೋರಾಟದ ದಾರಿ ಮತ್ತು ಗುರಿ' ಕುರಿತು ಗೋಷ್ಠಿ ನಡೆಯುವುದು. ವಿಷಯ ಮಂಡನೆ : ಕೋಟಗಾನಹಳ್ಳಿ ರಾಮಯ್ಯ. ಅಧ್ಯಕ್ಷತೆ : ಡಾ. ಸಣ್ಣರಾಮ. ಪ್ರತಿಕ್ರಿಯೆ : ಕೊಟ್ಟ ಶಂಕರ್.

## 20ರಂದು ನಾಯಕನಹಟ್ಟಿ ತೇರು

ಚಳ್ಳಕೆರೆ ತಾಲ್ಲೂಕು ನಾಟಕನಹಟ್ಟಿ ಶ್ರೀ ಗುರು ತಿಪ್ಪೇರುದ್ರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 20ರ ಭಾನುವಾರ ಜರುಗಲಿದೆ. ಇಂದು ಅಶ್ವವಾಹನೋತ್ಸವ, ದಿನಾಂಕ 19ರ ಶನಿವಾರ ಶ್ರೀಗಳ ರಥಕ್ಕೆ ತೈಲಾಭಿಷೇಕವಿರುತ್ತದೆ.

## ಸೋಂಕು ದಾಖಲೆ, ಸಾವು ಇಳಿಕೆ

**(1ನೇ ಪುಟದಿಂದ)** ಸಹ ಒಂದಾಗಿದೆ. ಇದರಿಂದಾಗಿ ಸೋಂಕಿನಿಂದ ಸಾವನ್ನಪ್ಪುವವರ ಪ್ರಮಾಣ ಶೇ.0.14ರಷ್ಟಾಗಿದೆ. ಇದು ಅಮೆರಿಕ ಹಾಗೂ ಬ್ರಿಟನ್‌ಗಳಿಗೆ ಹೋಲಿಸಿದರೆ ಹತ್ತು ಪಟ್ಟು ಕಡಿಮೆ. ಎರಡು ತಿಂಗಳ ಹಿಂದೆ ಸೋಂಕಿನಿಂದ ಸಾವನ್ನಪ್ಪುವವರ ಸಂಖ್ಯೆ ದೇಶದಲ್ಲಿ ಶೇ.0.88ರಷ್ಟಿತ್ತು. ಸಾವನ್ನಪ್ಪುತ್ತಿರುವವರಲ್ಲಿ ಬಹುತೇಕರು ವೃದ್ಧರಾಗಿದ್ದಾರೆ.

ಕೊರೊನಾ ಸೋಂಕು ಕಂಡು ಬಂದ ಆರಂಭದಿಂದಲೂ ದೇಶದಲ್ಲಿ ಟೆಸ್ಟಿಂಗ್ ಪ್ರಮಾಣ ಅತಿ ಹೆಚ್ಚಾಗಿದೆ. ಆರಂಭದಲ್ಲಿ ಲಸಿಕೆ ನೀಡುವ ಪ್ರಮಾಣ ಕಡಿಮೆ ಇತ್ತಾದರೂ, ನಂತರ ಚುರುಕಾಯಿತು. ದಕ್ಷಿಣ ಕೊರಿಯಾದಲ್ಲಿ ಇದುವರೆಗೂ 80 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ. ಆದರೆ, ದೇಶದಲ್ಲಿ ಎಂದೂ ಲಾಕ್‌ಡೌನ್ ಕ್ರಮ ತೆಗೆದುಕೊಂಡಿಲ್ಲ.

ಪಿ.ಸಿ.ಆರ್. ಪರೀಕ್ಷೆಗಾಗಿ ದೇಶದಲ್ಲಿ ಇದುವರೆಗೂ 1.3 ಶತಕೋಟಿ ಡಾಲರ್ ವೆಚ್ಚ ಮಾಡಲಾಗಿದೆ. ದೇಶದ ಜನಸಂಖ್ಯೆ 5.18 ಕೋಟಿ ಆಗಿದೆ. ಪ್ರತಿದಿನ 10 ಲಕ್ಷ ಟೆಸ್ಟ್ ಮಾಡುವ ಸಾಮರ್ಥ್ಯ ಇಲ್ಲಿನ ಆರೋಗ್ಯ ವ್ಯವಸ್ಥೆಗೆ ಇದೆ.

ಜನವರಿ ಕೊನೆ ವಾರದಲ್ಲಿ ದೇಶದಲ್ಲಿ ಓಮಿಕ್ರಾನ್ ಸೋಂಕು ಕಂಡು ಬಂದಿತ್ತು. ಸೋಂಕು ವ್ಯಾಪಕವಾಗಿ ಹರಡಿ ಗುರುವಾರ 6.21 ಲಕ್ಷ ಸೋಂಕಿತರು ಕಂಡು ಬಂದಿದ್ದಾರೆ. ಓಮಿಕ್ರಾನ್‌ಗೆ ಮುಂಚೆ ದೇಶದಲ್ಲಿ ಪ್ರತಿದಿನ 9 ಸಾವಿರದಷ್ಟು ಸೋಂಕಿತರು ಕಂಡು ಬರುತ್ತಿದ್ದರು.

ಆಸಕ್ತಿಕರ ಅಂಶವೆಂದರೆ, ಸೋಂಕಿತರ ಸಂಖ್ಯೆ ಇಷ್ಟೊಂದು ಹೆಚ್ಚಾದರೂ, ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣ ಜನವರಿಗೆ ಹೋಲಿಸಿದರೆ ಎರಡು ಪಟ್ಟು ಮಾತ್ರ ಹೆಚ್ಚಾಗಿದೆ. ಐ.ಸಿ.ಯು. ಗಳಲ್ಲಿ ಈಗಲೂ ಶೇ.35ರಷ್ಟು ಬೆಡ್‌ಗಳು ಖಾಲಿ ಇವೆ.

ಕೊರೊನಾ ಸಾವಿನ ಸಂಖ್ಯೆ ಕಡಿಮೆ ಇರುವ ಹಿನ್ನೆಲೆಯಲ್ಲಿ, ಸೋಂಕಿತರ ಸಂಖ್ಯೆ ವಿಶ್ವ ದಾಖಲೆಯಾಗಿದ್ದರೂ ನಿರ್ಬಂಧಗಳನ್ನು ಕಡಿಮೆ ಮಾಡಲು ಸರ್ಕಾರ ಮುಂದಾಗಿದೆ. ಖಾಸಗಿ ಸಮಾರಂಭದಲ್ಲಿ ಆರು ಜನರು ಮಾತ್ರ ಇರಬೇಕು ಎಂಬ ನಿಯಮ ಸಡಿಲಿಸಲು ಹಾಗೂ ರೆಸ್ಟೋರೆಂಟ್ ಕಾರ್ಯನಿರ್ವಹಣೆ ಅವಧಿ ವಿಸ್ತರಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಕೊರೊನಾ ಸಾವುಗಳು ಹಾಗೂ ಐ.ಸಿ.ಯು. ರೋಗಿಗಳ ಸಂಖ್ಯೆ ಕಡಿಮೆ ಇದೆ ಎಂಬ ಮಾತ್ರಕ್ಕೆ ನಿರ್ಬಂಧಗಳನ್ನು ಸಡಿಲಿಸಬಾರದು. ಮುನ್ನೆಚ್ಚರಿಕೆ ಕ್ರಮ ಮುಂದುವರೆಸಬೇಕು ಎಂದು ಕೊರಿಯಾ ಯೂನಿವರ್ಸಿಟಿ ಕಾಲೇಜ್ ಆಫ್ ಮೆಡಿಸಿನ್‌ನ ಖೋಯ್ ಒತ್ತಾಯಿಸಿದ್ದಾರೆ.

## ತೀರ್ಪಿನ ನಂತರವೂ ಪ್ರತಿಭಟನೆ

**(1ನೇ ಪುಟದಿಂದ)** ಬಂದ್ ಕರೆ ಕೊಟ್ಟಿದ್ದಾರೆ ಎಂದರು.

ಬಿಜೆಪಿಯ ಸಿ.ಟಿ.ರವಿ ಮಾತನಾಡಿ, ಓಟ್ ಬ್ಯಾಂಕ್ ರಾಜಕಾರಣ ಮಾಡುವುದು ಮಹಾ ಪಾಪದ ಕೆಲಸ. ಶಾಲೆಗಳಲ್ಲಿ ಸಮವಸ್ತ್ರ ಏಕಿರಬೇಕು ಎಂಬ ಬಗ್ಗೆ ಹತ್ತು ದಿನ ವಾದ-ಪ್ರತಿವಾದ ನಡೆದ ನಂತರವೇ ಕೋರ್ಟ್ ತೀರ್ಪು ಕೊಟ್ಟಿದೆ. ಅದನ್ನು ಧಿಕ್ಕರಿಸಿ ಪ್ರತಿಭಟನೆ, ಬಂದ್ ಮಾಡೋದು ಸರಿಯಲ್ಲ ಎಂದರು.

ಇದಕ್ಕುತ್ತರಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಕೋರ್ಟ್ ತೀರ್ಪು ಕೊಟ್ಟ ಮೇಲೆ ಅದನ್ನು ಒಪ್ಪಿಕೊಂಡು ಜಾರಿ ಮಾಡಲೇಬೇಕು, ಸುಪ್ರಿಂ ಕೋರ್ಟ್ ತೀರ್ಪು ಬರುವವರೆಗೆ ಹೈಕೋರ್ಟ್ ಆದೇಶವನ್ನು ಸರ್ಕಾರ ಜಾರಿ ಮಾಡಲೇಬೇಕಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ಧರಿಸುವಿಕೆ ವಿವಾದ ಕುರಿತಂತೆ ಹೈಕೋರ್ಟ್ ತೀರ್ಪಿಗೂ ಮುನ್ನ ವಿದ್ಯಾರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗಿದ್ದರೆ ಅಂತಹವರಿಗೆ ಮರುಪರೀಕ್ಷೆಗೆ ಅವಕಾಶ ನೀಡುವ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳುತ್ತೇವೆ ಎಂದರು.

ವಿಧಾನ ಪರಿಷತ್‌ನಲ್ಲಿ ಬಜೆಟ್ ಮೇಲೆ ಚರ್ಚೆ ಮಾತನಾಡುತ್ತಿದ್ದ ಸಲೀಂ ಅಹಮ್ಮದ್, ಶಾಲೆಯಲ್ಲಿ ಎಲ್ಲಾ ಧರ್ಮದ ವಿದ್ಯಾರ್ಥಿಗಳು ಅಣ್ಣ-ತಮ್ಮಂದಿರಂತೆ ಇದ್ದರು. ಅವರ ನಡುವೆ ವಿಷ ಬೀಜ ಬಿತ್ತಿದ್ದಾರೆ. ಮಕ್ಕಳಲ್ಲಿ ಭೇದ-ಭಾವ ತುಂಬಿದ್ದಾರೆ ಎಂದು ಹೇಳಿದರು.

ನ್ಯಾಯಾಲಯವೂ ತೀರ್ಪು ನೀಡಿದೆ, ಸಂವಿಧಾನವನ್ನು ಗೌರವಿಸುವ ನಾವು ತೀರ್ಪನ್ನು ಗೌರವಿಸುತ್ತೇವೆ. ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಸರ್ಕಾರವೇ ಹಿಜಾಬ್ ವಿವಾದಕ್ಕೆ ಕುಮ್ಮಕ್ಕು ನೀಡಿದೆ ಎಂದಾಗ ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಮಾತಿನ ಚಕಮಕಿ ನಡೆಯಿತು.

ಹಿಜಾಬ್ ವಿಷಯದಲ್ಲಿ ಹೈಕೋರ್ಟ್ ನೀಡಿರುವ ತೀರ್ಪನ್ನು ಮೊದಲು ಪಾಲನೆ ಮಾಡಿ, ನಿಮ್ಮವರಿಂದಲೇ ಗಲಾಟೆ ಹೆಚ್ಚಾಗಿದೆ, ಶಾಂತಿಗೆ ಭಂಗವಾಗಿದೆ, ಮೊದಲು ನಿಮ್ಮ ಸಂಘಟನೆಗಳಿಗೆ ತಿಳಿಹೇಳಿ ಎಂದು ಬಿಜೆಪಿ ಸದಸ್ಯರು ಆಗ್ರಹಿಸಿದರು.

## ಶಿವಪುರದಲ್ಲಿ ಇಂದು ಉಪನ್ಯಾಸ

ಶ್ರೀ ರೇವಣಸಿದ್ದ ಜಯಂತ್ಯೋತ್ಸವವು ಹೊಳಲ್ಕೆರೆ ತಾಲ್ಲೂಕು ಶಿವಪುರದ ಶ್ರೀ ಶಿವಕುಮಾರ ಸ್ವಾಮಿ ಬಯಲು ರಂಗ ಮಂದಿರದಲ್ಲಿ ಇಂದು ಬೆಳಿಗ್ಗೆ ನಡೆಯಲಿದೆ. ಸಂಜೆ 6.30ಕ್ಕೆ ತರಳಬಾಳು ಜಗದ್ಗುರುಗಳ ಸಾನ್ನಿಧ್ಯದಲ್ಲಿ ಸಭಾ ಕಾರ್ಯಕ್ರಮ ಏರ್ಪಾಡಾಗಿದ್ದು, ಕೇಂದ್ರ ಸಚಿವ ಎ.ನಾರಾಯಣ ಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ.

ಶಾಸಕ ಎಂ. ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರುಗಳಾದ ಕೆ. ಎಸ್. ನವೀನ್, ಎಂ. ಚಿದಾನಂದ ಗೌಡ, ಮಾಜಿ ಸಚಿವ ಹೆಚ್.ಆಂಜನೇಯ, ಜಿಲ್ಲಾ ವೈದ್ಯಾಧಿಕಾರಿ ಡಾ. ರಂಗನಾಥ್, ಶಿವಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷ ಎಸ್. ಓ. ಜಗದೀಶ್ ಅತಿಥಿಗಳಾಗಿದ್ದು, ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಉಪನ್ಯಾಸ ನೀಡಲಿದ್ದಾರೆ.

## ತಾರೇಹಳ್ಳಿಯಲ್ಲಿ ಇಂದು ಓಕುಳಿ

ಜಗಳೂರು ತಾಲ್ಲೂಕಿನ ತಾರೇಹಳ್ಳಿಯಲ್ಲಿ ಶ್ರೀ ರಂಗನಾಥಸ್ವಾಮಿ ರಥೋತ್ಸವ ನಿನ್ನೆ ನಡೆದಿದ್ದು, ಇಂದು ಓಕಳಿ ಉತ್ಸವ ನಡೆಯಲಿದೆ.

## ಗುರಗುಂಟಾದಲ್ಲಿ ಇಂದು ರಥೋತ್ಸವ

ಲಿಂಗಸಗೂರು ತಾಲ್ಲೂಕು ಗುರುಗುಂಟಾ ಸುಕ್ಷೇತ್ರ ಶ್ರೀ ಅಮರೇಶ್ವರ ರಥೋತ್ಸವವು ಇಂದು ಸಂಜೆ 5 ಗಂಟೆಗೆ ಜರುಗಲಿದೆ.

## ಕೋಡಿ ಚೌಡೇಶ್ವರಿ ದೇವಿಗೆ ಇಂದು ಅಭಿಷೇಕ

ದಾವಣಗೆರೆ ತಾಲ್ಲೂಕು ಬಸವನಾಳ್ ಗೊಲ್ಲರಹಟ್ಟಿ ಚೌಡೇಶ್ವರಿ ದೇವಸ್ಥಾನದ ಆರಾಧನಾ ಮಹೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಶ್ರೀ ದೇವಿಗೆ ಅಭಿಷೇಕ. ಬೆಳಿಗ್ಗೆ 9ಕ್ಕೆ ಅಗ್ನಿಕೆಂಡ, ಬೇವು ಉಡುವುದು, ಜವಳ, ಹರಕೆ ಮತ್ತು ತುಲಾಭಾರ ಕಾಣಿಕೆ, ಉಡಿ ತುಂಬುವ ಕಾರ್ಯಕ್ರಮ ನಡೆಯುವುದು. ಇಂದು ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ ನಡೆಯುವುದು. ಸಂಜೆ 4 ಗಂಟೆಗೆ ಎತ್ತಿನಗಾಡಿಯಿಂದ ಬೆಲ್ಲದಬಂಡಿ ನಡೆಯಲಿದೆ.

# ಹೃದಯದ ಆರೋಗ್ಯಕ್ಕಾಗಿ ಶುದ್ಧ ಆಹಾರ ಸೇವಿಸಿ



**ಹರಪನಹಳ್ಳಿ : ಕಾನೂನು ಅರಿವು ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹಿತನುಡಿ**

ಹರಪನಹಳ್ಳಿ, ಮಾ. 17- ಪ್ರತಿಯೊಬ್ಬರೂ ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ಶುದ್ಧವಾದ ಆಹಾರ ಸೇವಿಸಬೇಕು. ಸಮಾಜದಲ್ಲಿ ಇರುವಷ್ಟು ದಿನ ಏನಾದರೂ ಒಂದು ಸಾಧನೆ ಮಾಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹೇಳಿದರು.

ಪಟ್ಟಣದ ನ್ಯಾಯಾಲಯದಲ್ಲಿರುವ ವಕೀಲರ ಸಂಘದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಹೃದಯ ಸಂಬಂಧಿತ ರೋಗ ಲಕ್ಷಣಗಳು ಮತ್ತು ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಆರೋಗ್ಯಕ್ಕಾಗಿ ಧ್ಯಾನ ಮಾಡುತ್ತಾ ಭಗವಂತನನ್ನು ಆರಾಧಿಸಿಕೊಂಡಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ. ಜಗದಪ್ಪ ಮಾತನಾಡಿ, ಸದೃಢವಾದ ದೇಹಕ್ಕೆ ಸದೃಢವಾದ ಆಹಾರ ಸೇವಿಯಬೇಕು. ನಮ್ಮ ಮನಸ್ಸನ್ನು ಶುದ್ಧವಾಗಿ ನಿಯಂತ್ರಿಸಲು ನೆಮ್ಮದಿ ಬಹಳ ಮುಖ್ಯ. ಆದ್ದರಿಂದ ನಾವುಗಳು ಆರೋಗ್ಯದ ಹಿತ ದೃಷ್ಟಿಯಿಂದ ಆರೋಗ್ಯಕ್ಕಾಗಿ ಒಳ್ಳೆಯ ಸ್ನೇಹಿತರನ್ನು ಆಯ್ಕೆ ಮಾಡಿಕೊಂಡು ನಮ್ಮ ಆರೋಗ್ಯದ ಹಿತ ಕಾಪಾಡಿಕೊಳ್ಳಬೇಕೆಂದರು.

ವಕೀಲರಾದ ಬಿ. ಕೃಷ್ಣಮೂರ್ತಿ, ಡಾ|| ಮಹಮ್ಮದ್ ಸಮೀರ್ ಹೆಚ್. ಹೃದಯ ಕಾಯಿಲೆಗೆ ಸಂಬಂಧಿಸಿದಂತೆ ಮಾತನಾಡಿದರು.

ಈ ಸಂದರ್ಭದಲ್ಲಿ ಕಿರಿಯ ಸಿವಿಲ್ ನ್ಯಾಯಧೀಶರಾದ ಫಕ್ಕೀರವ್ವ ಕೆಳಗೇರಿ, ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ನಿರ್ಮಲ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್‌ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಡಿ.ಬಿ. ವಾಸುದೇವ, ಜಂಟಿ ಕಾರ್ಯದರ್ಶಿ ಎಂ. ನಾಗೇಂದ್ರಪ್ಪ, ಖಜಾಂಚಿ ಹುಲಿಯಪ್ಪ, ವಕೀಲರಾದ ಕೆ. ಚಂದ್ರಗೌಡ, ಜಿ. ಗಂಗಾಧರ ಗುರುಮಠ್, ಬಿ. ರೇವನಗೌಡ, ಆರ್. ರಾಮನಗೌಡ, ಕೆ.ಎಂ. ಚಂದ್ರಮೌಳಿ, ಎಂ. ಅಜ್ಜಪ್ಪ, ಕೆ.ಬಸವರಾಜ್, ಬಿ. ಹಾಲೇಶ್, ಎಂ. ಮೃತ್ಯುಂಜಯ ಸೇರಿದಂತೆ ಇತರರು ಇದ್ದರು.


## ಬೇಕಾಗಿದ್ದಾರೆ

**ಜೈನ್ ಮೋಟರ್ಸ್**

**ದಾವಣಗೆರೆಗೆ ಪಿ.ಬಿ ರಸ್ತೆ ಮತ್ತು ಹದಡಿ ರಸ್ತೆ ಬ್ರಾಂಚ್ ಹಾಗೂ ಹರಿಹರ ಬ್ರಾಂಚ್**

- **ಜನರಲ್ ಮ್ಯಾನೇಜರ್ ಸರ್ವೀಸ್ - 1**
  ವಿದ್ಯಾರ್ಹತೆ : ಆಟೋಮೊಬೈಲ್ ಡಿಪ್ಲೋಮಾ/ಬಿಇ ಮತ್ತು ಮೂಲ ಕಂಪ್ಯೂಟರ್ ತಿಳುವಳಿಕೆ
- **ಮೆಕ್ಯಾನಿಕ್ಸ್ - 4** (ಕನಿಷ್ಠ ಎರಡು ವರ್ಷ ಅನುಭವ)
- **ಮೆಕ್ಯಾನಿಕ್ ಹೆಲ್ಪರ್ - 4** (ಕನಿಷ್ಠ ಒಂದು ವರ್ಷ ಅನುಭವ)
- **ಸ್ಪೇರ್ಸ್ ಮ್ಯಾನೇಜರ್ - 1**
  ವಿದ್ಯಾರ್ಹತೆ : ಪಿಯುಸಿ ಹಾಗೂ ಬೇಸಿಕ್ ಕಂಪ್ಯೂಟರ್ ತಿಳುವಳಿಕೆ
- **ಸೇಲ್ಸ್ ಎಕ್ಸಿಕ್ಯೂಟಿವ್ - 4**
  ವಿದ್ಯಾರ್ಹತೆ : ಪಿಯುಸಿ ಮತ್ತು ಬೇಸಿಕ್ ಕಂಪ್ಯೂಟರ್ ತಿಳುವಳಿಕೆ
- **ರಿಸೆಪ್ಷನಿಸ್ಟ್ - 2**
  ವಿದ್ಯಾರ್ಹತೆ : ಪಿಯುಸಿ ಮತ್ತು ಬೇಸಿಕ್ ಕಂಪ್ಯೂಟರ್ ತಿಳುವಳಿಕೆ
- **ಟೆಲಿಕಾಲರ್ - 2**
  ವಿದ್ಯಾರ್ಹತೆ : ಪಿಯುಸಿ ಮತ್ತು ಬೇಸಿಕ್ ಕಂಪ್ಯೂಟರ್ ತಿಳುವಳಿಕೆ
- **ಸೇಲ್ಸ್ ಮ್ಯಾನೇಜರ್ - 1**
  ವಿದ್ಯಾರ್ಹತೆ : ಪದವಿ ಮತ್ತು ಬೇಸಿಕ್ ಕಂಪ್ಯೂಟರ್ ತಿಳುವಳಿಕೆ
- **ಸರ್ವೀಸ್ ಅಡ್ವೈಸರ್ - 3** ವಿದ್ಯಾರ್ಹತೆ : ಡಿಪ್ಲೋಮಾ/ಐಟಿಐ
- **ಅಕೌಂಟೆಂಟ್ - 1** ವಿದ್ಯಾರ್ಹತೆ : ಬಿಕಾಂ, ಟ್ಯಾಲಿ ಪರಿಣಿತಿ. ಆಡಿಟರ್ ಕಚೇರಿಯಲ್ಲಿ ಅನುಭವ ಹೊಂದಿದವರಿಗೆ ಆದ್ಯತೆ.

**ಜೈನ್ ಮೋಟರ್ಸ್**

868/ಎನ್3 ಎನ್7, ಶಂಕರ್ ವಿಹಾರ್ ಎಕ್ಸ್‌ಟೆನ್‌ಷನ್
ಪಿ.ಬಿ. ರಸ್ತೆ, ದಾವಣಗೆರೆ - 577 006.

**ಮೊಬೈಲ್ : 81050 04554**

# ಹೆಣ್ಣನ್ನು ಕಡೆಗಣಿಸಿದರೆ ನಿಂತ ನೀರಾಗುತ್ತೇವೆ

**ಬಾಡ : ಮಹಿಳಾ ಸಮಾವೇಶದಲ್ಲಿ ಸಾಹಿತಿ ಎಂ.ಬಿ.ನಾಗರಾಜ್ ಕಾಕನೂರು ಅಭಿಮತ**



ದಾವಣಗೆರೆ, ಮಾ.17 - ಸಮಾಜದಲ್ಲಿ ಇಂತಹ ಸಭೆ ಸಮಾರಂಭಗಳು ನಡೆಯುತ್ತಲೇ ಇರುತ್ತವೆ. ಸಭೆ, ಸಮಾರಂಭ ನಡೆಯುವುದರ ಹಿಂದೆ ದೇಶ ಒಗ್ಗೂಡಿಸುವ, ಸಮಾಜ ಕಟ್ಟುವ, ಕಟ್ಟಕಡೆಯ ವ್ಯಕ್ತಿಯನ್ನು ಮುನ್ನೆಲೆಗೆ ತರುವ ಪ್ರಯತ್ನ ಇರುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.

ದಾವಣಗೆರೆ ತಾಲ್ಲೂಕು ಬಾಡ ಗ್ರಾಮದಲ್ಲಿ ಬಿ. ಎಂ. ವಾಗೀಶ್ ಸ್ವಾಮಿ ಅಭಿಮಾನಿ ಬಳಗದಿಂದ ಇಂದು ಸಂಜೆ ಹಮ್ಮಿಕೊಳ್ಳಲಾಗಿದ್ದ ಮಹಿಳಾ ಸಮಾವೇಶ ಮತ್ತು ನಗೆಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯಾವುದೇ ಒಬ್ಬ ವ್ಯಕ್ತಿಗೆ ಉತ್ತಮ ಕಾರ್ಯ ಮಾಡುವ ಮನಸ್ಸಿರಬೇಕು. ಮಾಡಿರುವ ಕಾರ್ಯವನ್ನು ಮಾಡಿಲ್ಲವೆಂಬಂತೆ ಇರಬೇಕು. ಮಾಡಿದ್ದನ್ನು, ನೀಡಿದ್ದನ್ನು ಮರೆತು ಬಿಡಬೇಕು. ಅಂತಹ ಮನಸ್ಥಿತಿ ವಾಗೀಶ್ ಸ್ವಾಮಿ ಅವರದು ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

> **ಸಭೆ, ಸಮಾರಂಭದ ಹಿಂದೆ ದೇಶ ಕಟ್ಟುವ ಮಹತ್ಕಾರ್ಯ ಇದೆ.**
>
> **- ಮಹಾಂತೇಶ್ ಬೀಳಗಿ, ಜಿಲ್ಲಾಧಿಕಾರಿ**

ಇನ್ನು ನೆರೆದಿದ್ದ ಜನರನ್ನು ಉದ್ದೇಶಿಸಿ ಹಾಸ್ಯ ಚಟಾಕಿ ಹಾರಿಸಿದ ಜಿಲ್ಲಾಧಿಕಾರಿಗಳು ಜೀವನದಲ್ಲಿ ಮನುಷ್ಯ ನಗಬೇಕು. ನಕ್ಕಷ್ಟು ಆರೋಗ್ಯದಿಂದ ನೆಮ್ಮದಿಯಿಂದ ಇರುತ್ತೇವೆ ಎಂದರು.


ಪುರುಷನ ಪ್ರತಿಯೊಂದು ಕೆಲಸದಲ್ಲಿ ಮಹಿಳೆ ಬೆನ್ನೆಲುಬಾಗಿ ನಿಂತಿರುತ್ತಾಳೆ. ಜೀವ, ಭಾವ, ಭಾವನೆ, ಧೈರ್ಯ ತುಂಬಿ ಬದುಕು ಕಟ್ಟಿಕೊಡುವವಳು ಹೆಣ್ಣು. ನಾವು ಹೆಣ್ಣನ್ನು ಕಡೆಗಣಿಸಿದರೆ ನಿಂತ ನೀರಾಗುತ್ತೇವೆ. ಮಹಿಳೆ ಮಗನ ಜನನಕ್ಕಾಗಿ ತನ್ನ ಸೌಂದರ್ಯವನ್ನೇ ಕಳೆದುಕೊಳ್ಳುತ್ತಾಳೆ, ಆದರೆ ಮಗ ಒಂದು ಹೆಣ್ಣಿಗಾಗಿ ತಾಯಿಯನ್ನೇ ದೂರ ತಳ್ಳುತ್ತಾನೆ. ಕುಟುಂಬದ ಜ್ಯೋತಿ ಹೆಣ್ಣು. ಇಂತಹ ಹೆಣ್ಣನ್ನು ಗೌರವಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು ಎಂದು ಹೇಳಿದರು.

ಹಾಗೆಯೇ ನೂರು ಮೆದುಳಿಗೆ ಅರಿಯದ ಕೆಲಸ ಒಂದು ತಾಯಿಯ ಮೆದುಳಿಗೆ ಅರಿವಾಗುತ್ತೆ. ಇಂತಹ ತ್ಯಾಗ ಜೀವಿ ತಾಯಿಯನ್ನು ಜೀವ ಇರುವ ತನಕ ಸ್ಮರಿಸಬೇಕು ಎಂದರು.

ಪುರುಷ ಗರ್ಭದಿಂದ ಗೋರಿಯವರೆಗೆ ಹೋಗುವವರೆಗೆ ಆತ ಮಾಡುವ ಪ್ರತಿಯೊಂದು ಕೆಲಸದಲ್ಲಿ ಮಹಿಳೆಯ ಪಾತ್ರ ಅನನ್ಯವಾದದ್ದು. ಇಂತಹ ಮಹಿಳೆಯರನ್ನು ಗೌರವಿಸುವ ಕೆಲಸ ಪುರುಷರಿಂದ ಆಗಬೇಕು ಎಂದು ಸಾಹಿತಿ ಎಂ. ಬಿ. ನಾಗರಾಜ್ ಕಾಕನೂರು ಹೇಳಿದರು.

ಈ ಸಂದರ್ಭದಲ್ಲಿ ಡಿ. ಹೆಚ್. ಪ್ರಕಾಶ್, ರವಿ, ಶಾಂತಕುಮಾರ್, ಕುಬೇರಪ್ಪ, ಗಿರಿಸಿದ್ದಪ್ಪ, ಸಣ್ಣಗೌಡ್ರು, ಮಂಜಪ್ಪ, ಶ್ರೀನಿವಾಸ್, ನಾಗರಾಜಪ್ಪ, ಪೂಜಾರ್ ಮಹೇಶಪ್ಪ, ಸೋಮಶೇಖರಪ್ಪ, ಕಾಕನೂರ್ ನಾಗರಾಜಪ್ಪ, ಮಹಾರುದ್ರಪ್ಪ, ಶೈಲಜಾ ಬಸವರಾಜಪ್ಪ, ಟಿ. ಮಂಜುಳಾ ರಾಜು ಇದ್ದರು.

## ನಗರದಲ್ಲಿ ನಾಳೆ ರಂಗವಿಸ್ತಾರ ಗ್ರಂಥ ಲೋಕಾರ್ಪಣೆ



ದಾವಣಗೆರೆ, ಮಾ.17 - ಪ್ರೊ. ಎಸ್. ಬಿ. ರಂಗನಾಥ್ ಅವರಿಗೆ ಸಹಸ್ರ ಚಂದ್ರದರ್ಶನ ಅಭಿನಂದನೆ ಮತ್ತು ರಂಗ ವಿಸ್ತಾರ ಅಭಿನಂದನಾ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮವು ನಾಡಿದ್ದು ದಿನಾಂಕ 19 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದು, ದಾವಿವಿ ಕುಲಪತಿ ಡಾ. ಶರಣಪ್ಪ ವಿ. ಹಲಸೆ ರಂಗ ವಿಸ್ತಾರ ಅಭಿನಂದನಾ ಗ್ರಂಥ ಲೋಕಾರ್ಪಣೆ ಮಾಡಲಿದ್ದಾರೆ. ಹಿರಿಯ ಸಾಹಿತಿ ಡಾ.ಬಿ.ಎಲ್.ವೇಣು ಅಭಿನಂದನಾ ನುಡಿಗಳನ್ನಾಡುವರು. ಹಿರಿಯ ಪತ್ರಕರ್ತ ಎನ್. ವಿಶಾಖ ಅವರು ಎಸ್‌ಬಿಆರ್ ಅವರ 'ಕಚಗುಳಿ (ಗೆ) ಕಾಲ' ಕೃತಿ ಬಿಡುಗಡೆಗೊಳಿಸಲಿದ್ದು, ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಉಪಸ್ಥಿತರಿರುವರು.

# ರಾಣೇಬೆನ್ನೂರಿನಲ್ಲಿ ಇಂದು ಜೀವಂತ ಕಾಮ-ರತಿ, ನಗಿಸಿದವರಿಗೆ ನಗದು ! ನಾಳೆ ಬಣ್ಣ



ಅವ್ವಿಗೆ ನೈಂಟಿ ಹೊಡ್ಸಿ ಅಕಿನ್ ಎತ್ತಾಕಿಕೊಂಡು ಹೋಗಾನಾ, ಒಮ್ಮೆ ನಗು ಸಾಕು ಒಂದ್ ಲಕ್ಷ ಸಿಗತೈತಿ ಗೋವಾದಾಗ್ ಮಜಾ ಮಾಡಿ ಬರಾನ್, ಒಬ್ಬನ್ ಜತಿಗೆ ಇನ್ನೂ ಎಷ್ಟು ವರ್ಷಾ ಇರ್ತಿ ನನ್ನ ಜತಿಗೆ ಬಾ ಆ ಮಜಾ ಬ್ಯಾರೇನ ಐತಿ. ಏ ಕಾಮಣ್ಣಾ ನಿನ್ನ ಮಾಲು ಹಳೇದ್ ಆಯ್ತು ಸಾಕು ಬಿಡು ಅದನ್ನ ಎನ್ನುವ ಅಸಂಬದ್ಧ ಮಾತುಗಳು, ಆಸೆ-ಆಮೀಷ, ವಿಚಿತ್ರ ಹಾವ-ಭಾವ ಪ್ರದರ್ಶನ ಮುಂತಾದವುಗಳು ಇಂದು ಸಂಜೆ ರಾಣೇಬೆನ್ನೂರಿನ ದೊಡ್ಡಪೇಟೆ ಶ್ರೀ ರಾಮಲಿಂಗ ಮಠದ ಕಟ್ಟೆಯ ಮೇಲೆ ಕಂಡು ಬರಲಿವೆ.

ಸುಮಾರು ಅರ್ಧ ಶತಮಾನಗಳ ಕಾಲದಿಂದ ನಡೆದು ಬಂದ ಹೋಳಿ ಬಣ್ಣ ಆಡುವ ಮುನ್ನಾ ದಿನ ಪ್ರತಿಷ್ಠಾಪನೆಗೊಳ್ಳುವ ಜೀವಂತ ರತಿ-ಕಾಮರ ಪ್ರದರ್ಶನ. ಇದು ಇಂದಿಗೂ ಮುಂದುವರೆದಿದ್ದು, ಇದುವರೆಗೂ ಇವರನ್ನ ನಗಿಸಿ ಬಹುಮಾನದ ಹಣ ಪಡೆದವರು ಇಲ್ಲವೇ ಇಲ್ಲಾ. ಕಾಮ-ರತಿ ವೇಷಧಾರಿಗಳನ್ನ ಮುಟ್ಟದೇ ನಗಿಸುವವರಿಗೆ ಸುಬ್ರಮಣ್ಯ ಸ್ವಾಮಿಯ ಆಪ್ತ, ಬೀಜ ಮಾರಾಟಗಾರ ಎ.ಬಿ. ಪಾಟೀಲ ಆ ತಕ್ಷಣದಲ್ಲಿ ಒಂದು ಲಕ್ಷ ನಗದು ಕೊಡುವುದಾಗಿ ಘೋಷಿಸಿದ್ದಾರೆ. ಜೊತೆಗೆ ಸಣ್ಣ ಪುಟ್ಟ ಹಣದ ಕೊಡುಗೆಗಳು ಇವೆ.

# ಬಾಪೂಜಿ ಆಸ್ಪತ್ರೆಯಲ್ಲಿ ಎಂಐಸಿಯು ಉದ್ಘಾಟನೆ



ದಾವಣಗೆರೆ, ಮಾ. 17- ನಗರದ ಬಾಪೂಜಿ ಆಸ್ಪತ್ರೆಯಲ್ಲಿ ಹೊಸದಾಗಿ ನಿಯೋಜಿಸಲಾದ ವೈದ್ಯಕೀಯ ತೀವ್ರ ನಿಗಾ ಘಟಕವನ್ನು (ಎಂಐಸಿಯು) ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಉದ್ಘಾಟಿಸಿದರು. ಬಾಪೂಜಿ ಶಿಕ್ಷಣ ಸಂಸ್ಥೆ ಆಡಳಿತ ಮಂಡಳಿ ಉಪಾಧ್ಯಕ್ಷರಾದ ಶ್ರೀಮತಿ ಕಿರವಾಡಿ ಗಿರಿಜಮ್ಮ, ಕೈಗಾರಿಕೋದ್ಯಮಿ ಅಥಣಿ ವೀರಣ್ಣ, ಬಾಪೂಜಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ. ಡಿ. ಎಸ್. ಕುಮಾರ್, ಜೆ.ಜೆ.ಎಂ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ. ಎಸ್. ಬಿ. ಮುರುಗೇಶ್, ವಿಭಾಗದ ಮುಖ್ಯಸ್ಥ ಡಾ. ರಾಜೀವ್ ಅಗರ್‌ವಾಲ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಈ ವರ್ಷ ಶೇ.9.1ರ ಆರ್ಥಿಕ ಬೆಳವಣಿಗೆ

ನವದೆಹಲಿ, ಮಾ. 17 – ಈ ವರ್ಷ ಶೇ.9.1ರ ಆರ್ಥಿಕ ಬೆಳವಣಿಗೆಯಾಗಲಿದೆ ಎಂದು ಮೂಡೀಸ್ ಅಂದಾಜಿಸಿದೆ. ಈ ಹಿಂದೆ ಶೇ.9.5ರ ಬೆಳವಣಿಗೆಯಾಗಲಿದೆ ಎಂದು ಮೂಡೀಸ್ ಹೇಳಿತ್ತಾದರೂ, ದುಬಾರಿ ತೈಲ ಹಾಗೂ ರಸಗೊಬ್ಬರ ಆಮದು ವೆಚ್ಚ ಹೆಚ್ಚಾಗಿರುವುದರಿಂದ ಸರ್ಕಾರದ ಬಂಡವಾಳ ವೆಚ್ಚ ಕಡಿಮೆಯಾಗಿ ಬೆಳವಣಿಗೆ ತಗ್ಗಲಿದೆ ಎಂದು ಹೇಳಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿರುವುದರಿಂದ ಆರ್ಥಿಕ ಬೆಳವಣಿಗೆ ಮೇಲೆ ಪರಿಣಾಮವಾಗಲಿದೆ. ವಿಶ್ವದಾದ್ಯಂತ ಸರಕುಗಳ ಬೆಲೆ ಹೆಚ್ಚಾಗಿದ್ದು, ಜಾಗತಿಕ ಆರ್ಥಿಕ, ಹಣಕಾಸು ಹಾಗೂ ವಹಿವಾಟಿಗೆ ತೊಂದರೆಯಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಜಿ-20 ಆರ್ಥಿಕ ವ್ಯವಸ್ಥೆಗಳಲ್ಲಿ ರಷ್ಯಾ ಒಂದರ ಆರ್ಥಿಕತೆ ಮಾತ್ರ ಕುಗ್ಗಲಿದೆ ಎಂದು ಮೂಡೀಸ್ ಹೇಳಿದೆ.

ಭಾರತದಲ್ಲಿ ತೈಲ ಬೆಲೆ ಹೆಚ್ಚಳದಿಂದ ಹೆಚ್ಚಿನ ಅಪಾಯವಿದೆ. ಭಾರತ ದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಆಮದು ಮಾಡಿಕೊಳ್ಳುತ್ತದೆ. ಆದರೆ, ಹೆಚ್ಚುವರಿ ಧಾನ್ಯ ಇರುವುದರಿಂದ ಅಲ್ಪಾವಧಿಯಲ್ಲಿ ರಫ್ತು ಹೆಚ್ಚಳದಿಂದ ಲಾಭವಾಗಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

# ಹರಿಹರದಲ್ಲಿ 2 ದಿನ ನೀರು ಪೂರೈಕೆಯಲ್ಲಿ ವ್ಯತ್ಯಯ

ಹರಿಹರ, ಮಾ.17- ನಗರಸಭೆ ವ್ಯಾಪ್ತಿಗೆ ಬರುವ 31 ವಾರ್ಡ್‌ಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಮುಖ್ಯ ನೀರು ಸರಬರಾಜು ಕೇಂದ್ರ ಕವಲೆತ್ತು ಜಾಕ್‌ವೆಲ್‌ನಲ್ಲಿ ಎಕ್ಸ್‌ಪ್ರೆಸ್ ಲೈನ್‌ಗೆ ಚಾರ್ಜ್ ಅಳವಡಿಸುವ ಸಂದರ್ಭದಲ್ಲಿ ವಿದ್ಯುತ್ ಕೇಬಲ್ ತೊಂದರೆಯಾಗಿದ್ದು, ದುರಸ್ತಿ ಮಾಡಲು ಇನ್ನೂ ಎರಡು ದಿನಗಳು ಬೇಕಾಗುವುದು. ಬೆಳಿಗ್ಗೆ 6 ರಿಂದ ರಾತ್ರಿ 10 ವರೆಗೆ ಹೆಸ್ಕಾಂನಿಂದ ಶೆಡ್‌ಡೌನ್ ಇರುವುದರಿಂದ ಕುಡಿಯುವ ನೀರು ಸರಬರಾಜು ಮಾಡಲು ತೊಂದರೆಯಾಗಿರುವುದರಿಂದ, ಕವಲೆತ್ತು ಜಾಕ್‌ವೆಲ್ ಹಳೆಯ ವಿದ್ಯುತ್ ಲೈನ್‌ನಿಂದ ನೀರು ಸರಬರಾಜು ಮಾಡಲಾಗುವುದು. ನಗರದ ಸಾರ್ವಜನಿಕರು ಕುಡಿಯುವ ನೀರು ಸರಬರಾಜು ಮಾಡುವ ಪ್ರಕ್ರಿಯೆಯಲ್ಲಿ ವ್ಯತ್ಯಯವುಂಟಾಗಲಿದೆ ಎಂದು ನಗರಸಭೆ ಪ್ರಕಟಣೆ ತಿಳಿಸಿದೆ.

## ಹಿಜಾಬ್ ತೀರ್ಪಿನ ವಿರುದ್ಧ ಮತ್ತೊಂದು ಅರ್ಜಿ

ನವದೆಹಲಿ, ಮಾ. 17 – ಶಾಲಾ ಕೊಠಡಿಯೊಳಗೆ ಸಮವಸ್ತ್ರ ಉಲ್ಲಂಘಿಸಿ ಹಿಜಾಬ್ ಧರಿಸಲು ಅವಕಾಶ ನಿರಾಕರಿಸುವ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಮತ್ತೊಂದು ಅರ್ಜಿ ದಾಖಲಿಸಲಾಗಿದೆ.

ಸಜೀದಾ ಬೇಗಂ ಎಂಬುವವರು ಅರ್ಜಿ ದಾಖಲಿಸಿದ್ದಾರೆ. ವಕೀಲ ತಲ್ಹಾ ಅಬ್ದುಲ್ ರೆಹಮಾನ್ ಮತ್ತಿತರರ ಮೂಲಕ ಅರ್ಜಿ ದಾಖಲಿಸಲಾಗಿದೆ. ಹಿಜಾಬ್ ಧರಿಸಿ ಶಾಲೆಗಳಿಗೆ ತೆರಳುವುದರಿಂದ ಯಾವುದೇ ಸಾರ್ವಜನಿಕ ಸುವ್ಯವಸ್ಥೆಗೆ ಭಂಗವಾಗುವುದಿಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ದಿ ಕಾಶ್ಮೀರ್ ಫೈಲ್ಸ್ ವೀಕ್ಷಿಸಿದ ಕಾಗಿನೆಲೆ ಶ್ರೀ



ದಾವಣಗೆರೆ, ಮಾ.17 - ನಗರದ ತ್ರಿಶೂಲ್ ಚಿತ್ರಮಂದಿರದಲ್ಲಿ ಕಾಗಿನೆಲೆ ಪೀಠದ ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ 'ದಿ ಕಾಶ್ಮೀರ್ ಫೈಲ್ಸ್' ಚಿತ್ರ ವೀಕ್ಷಿಸಿದರು. ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಇನ್ನಿತರರಿದ್ದರು.

## ನಗರದಲ್ಲಿ ಇಂದು ಜಂಗೀ ಕುಸ್ತಿ, ಸಂಜೆ ಹಾಸ್ಯ


ದುಗ್ಗಮ್ಮನ ಜಾತ್ರೆ ಪ್ರಯುಕ್ತ ಪಿ.ಬಿ. ರಸ್ತೆ ಬೀರಲಿಂಗೇಶ್ವರ ಕುಸ್ತಿ ಆಖಾಡದಲ್ಲಿ ಇಂದಿನಿಂದ 3 ದಿನಗಳ ಕಾಲ ಜಂಗಿ ಕುಸ್ತಿ ನಡೆಯಲಿದೆ. ಸಂಜೆ 7.30ಕ್ಕೆ ದೇವಸ್ಥಾನದ ಆವರಣದಲ್ಲಿ ಗಂಗಾವತಿ ಪ್ರಾಣೇಶ್‌ರಿಂದ ಹಾಸ್ಯ ನಡೆಯಲಿದೆ.

## ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ನವಗ್ರಹ ಹೋಮ, ಪೂಜೆ



ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಅನ್ನಪೂರ್ಣೇಶ್ವರಿಗೆ ಮಹಾಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಇಂದು ನಡೆಯಲಿವೆ. ಶ್ರೀಮತಿ ಮತ್ತು ರವೀಂದ್ರ ಸುವರ್ಣ ಹಾಗೂ ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಆನೆಕೊಂಡದಲ್ಲಿ ಇಂದು ರಥೋತ್ಸವ



ದಾವಣಗೆರೆ ಬಳಿಯ ಸುಕ್ಷೇತ್ರ ಆನೆಕೊಂಡದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವವು ಇಂದು ರಾತ್ರಿ 10 ಗಂಟೆಗೆ ನಡೆಯಲಿದೆ.


Marg
The Business Backbone
Marg ERP 9+
India's No.1
Accounting Inventory
Billing Software
Present in
DAVANAGERE
Call for Demo
9902929586
9880144899

**ವಿದ್ಯಾಪೋಷಕ ಯುವ ಫೆಲೋಶಿಪ್ 2022-24**

**ಶಿಕ್ಷಕರಾಗಲು ಆಸಕ್ತಿ ಹೊಂದಿರುವವರಿಗೆ ಸುವರ್ಣಾವಕಾಶ**

ವಿದ್ಯಾಪೋಷಕ ಸಂಸ್ಥೆಯ ಫೆಲೋಶಿಪ್ ಕಾರ್ಯಕ್ರಮದಡಿಯಲ್ಲಿ ಧಾರವಾಡ ಜಿಲ್ಲೆಯ ಶಾಲೆಗಳಿಗಾಗಿ ಶಿಕ್ಷಕರ ನೇಮಕಾತಿ.

ಅರ್ಹತೆ : ಯಾವುದೇ ಪದವಿ ಹೊಂದಿದ, ಗರಿಷ್ಠ 26 ವರ್ಷ ವಯೋಮಿತಿಯ ಯುವಕ/ಯುವತಿಯರು ಸಂವಹನ (Communication) ಪ್ರಸ್ತುತಿ (Presentation) ಕೌಶಲ್ಯ ಮತ್ತು ಗಣಕಯಂತ್ರ (Computer) ದ ಜ್ಞಾನವಿರಬೇಕು.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿಯು vidyaposhak.net ದಲ್ಲಿ ಲಭ್ಯವಿದೆ.

**ಫೋ. : 0836 2747357**

# ಹೃದಯಪೂರ್ವಕ ಅಭಿನಂದನೆಗಳು



**ಡಾ|| ಪ್ರದೀಪ್ ಎನ್.ಆರ್.**

B.E., M.Tech., Ph.D.,

ಇವರು ಡಾ|| ಎಸ್. ಕುಮಾರಪ್ಪ ಮತ್ತು ಡಾ|| ಬಿ.ಎಂ. ಕುಲಕರ್ಣಿಯವರ ಮಾರ್ಗದರ್ಶನದಲ್ಲಿ ಮಂಡಿಸಿರುವ "ಎ ಸ್ಟಡಿ ಆನ್ ಪರ್‌ಪಾರ್ಮೆನ್ಸ್ ಅಂಡ್ ಎಮಿಶನ್ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಪೀಜೋ ಎಲೆಕ್ಟ್ರಿಕ್ ಡೈರೆಕ್ಟ್ ಇಂಜೆಕ್ಷನ್ ಸಿ.ಐ. ಎಂಜಿನ್ ಯುಸಿಂಗ್ ಪ್ಯೂಪಾ ಬಯೋ ಡೀಸೆಲ್" ಎಂಬ ಮಹಾ ಪ್ರಬಂಧಕ್ಕೆ ದಿನಾಂಕ : 10.03.2022ರಂದು ಬೆಳಗಾವಿಯ ಸರ್‌ಎಂ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ "ಡಾಕ್ಟರೇಟ್" ಪದವಿ ಪಡೆದಿರುತ್ತಾರೆ.

**ಇವರಿಗೆ ಶುಭ ಹಾರೈಸುವವರು :**

ಶ್ರೀಮತಿ ವೈ. ಲಲಿತ, ಶ್ರೀ ಎನ್. ರೇವಣಸಿದ್ದಪ್ಪ, ನಿವೃತ್ತ ಮುಖ್ಯೋಪಾಧ್ಯಾಯರು, ಬನಶಂಕರಿ ಬಡಾವಣೆ, ದಾವಣಗೆರೆ.
ಶ್ರೀಮತಿ ಸುಜಾತ ಶ್ರೀ ಭರಮಗೌಡ ಹರಳಹಳ್ಳಿ, ನಿವೃತ್ತ ಪ್ರಾಚಾರ್ಯರು, ರಾಣೇಬೆನ್ನೂರು.
ಶ್ರೀಮತಿ ಆಶಾ ಪ್ರದೀಪ್ ಹರಳಹಳ್ಳಿ.
ಶ್ರೀಮತಿ ಸುಚೇತಾ ಶ್ರೀ ಪ್ರಕಾಶ್ ಎನ್.ಆರ್., ಇನ್‌ಫೋಸಿಸ್ ಪ್ರೈ. ಲಿಮಿಟೆಡ್, ಬೆಂಗಳೂರು.
ಪುಟಾಣಿ : ಲಿತೀಕ್ಷಾ ಪ್ರಕಾಶ್, ಕು|| ಅಜಯ್‌ಕುಮಾರ್ ಹರಳಹಳ್ಳಿ.
ಯಲವಟ್ಟಿ ಕುಟುಂಬದವರು, ಶಾಮನೂರು, ನೆಲ್ಲಿಕಟ್ಟೆ ಕುಟುಂಬದವರು, ಪಲ್ಲಾಗಟ್ಟೆ ಹಾಗೂ ಬಂಧು-ಮಿತ್ರರು





JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte